ಶ್ರೀಕಾಶೀನಾಥಗ್ರಂಥಮಾಲಾ

ಅಷ್ಟಾದಶಪುಷ್ಪ

ರೇಣುಕವಿಜಯಪುರಾಣಂ

ಆಸ್ಥಾನವಿದ್ವಾಂಸರಾದ ನಂಜನಗೂಡು
ಶ್ರೀಕಂಠಶಾಸ್ತ್ರಿಗಳಿಂದ ವಿರಚಿತವಾದುದು

ಪ್ರಕಾಶಕರು

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳು

ಮೈಸೂರು:
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
೧೯೩೩

ಕ್ರಯ ೧-೦-೦

ಶ್ರೀಕಾಶೀನಾಥಗ್ರಂಥಮಾಲಾ

ಅಷ್ಟಾದಶಪುಷ್ಪ

ರೇಣುಕವಿಜಯಪುರಾಣಂ

ಆಸ್ಥಾನವಿದ್ವಾಂಸರಾದ ನಂಜನಗೂಡು
ಶ್ರೀಕಂಠಶಾಸ್ತ್ರಿಗಳಿಂದ ವಿರಚಿತವಾದುದು

ಪ್ರಕಾಶಕರು
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳು

ಮೈಸೂರು :
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
೧೯೩೩

ಕ್ರಯ ೧-೦-೦

ಶ್ರೀಃ

ಮುನ್ನುಡಿ.

ಶ್ರೀಮತ್ಪರಶಿವನ ಸದ್ಯೋಜಾತಮುಖದಿಂದುದಯಿಸಿದ ಶ್ರೀ ರೇಣುಕಾಚಾರ್ಯರವರು, ಶಿವಾಜ್ಞೆಯಿಂದ ಭೂಲೋಕದಲ್ಲಿ ಕೊಲ್ಲಿಪಾಕಿಕ್ಷೇತ್ರವಿರಾಜಮಾನವಾದ ಶ್ರೀ ಸೋಮೇಶ್ವರಲಿಂಗದಿಂದವತರಿಸಿ, ಅನೇಕಾದ್ಭುತಲೀಲೆಗಳನ್ನು ತೋರ್ಪಡಿಸಿ, ಲಿಂಗಾಂಗಸಾಮರಸ್ಯಾದಿತತ್ತ್ವಗಳನ್ನುಪದೇಶಿಸಿ, ವೀರಶೈವಮತವನ್ನು ಸಂಸ್ಥಾಪಿಸಿದ ವಿಷಯವು ಈ " ರೇಣುಕವಿಜಯಪುರಾಣ " ದಲ್ಲಿ ಉಲ್ಲಿಖಿತವಾಗಿದೆ.

ಶ್ರೀರೇಣುಕಾಚಾರ್ಯರವರಿಂದ ಭದ್ರಾನದೀತೀರಭಾಸಮಾನಶ್ರೀಮದ್ರಂಭಾಪುರೀಕ್ಷೇತ್ರದಲ್ಲಿ ಸ್ಥಾಪಿಸಲ್ಪಟ್ಟ ವೀರಸಿಂಹಾಸನಮಠವು, ನಮ್ಮ ಶ್ರೀಮನ್ಮಹಾರಾಜರವರ ಧರ್ಮರಾಜ್ಯದಲ್ಲಿ ಪರಿಶೋಭಿಸುತ್ತಿರುವುದು. ಈ ಧರ್ಮಪೀಠವನ್ನಲಂಕರಿಸಿರುವ ಶ್ರೀಗಳವರು ಪೂರ್ವಾಚಾರ್ಯರಂತೆ ಅಸದೃಶಪ್ರತಿಭಾಶಾಲಿಗಳಾಗಿರುವುದರಿಂದ, ನಮ್ಮ ಶ್ರೀಮನ್ಮಹಾಪ್ರಭುಗಳವರು ಪೂರ್ಣಾಭಿಮಾನವನ್ನು ವಹಿಸಿರುವರೆಂಬುದಕ್ಕೆ, ಕಳೆದ ಸಂವತ್ಸರದಲ್ಲಿ ಆ ಪೀಠಕ್ಕೆ ದಯಮಾಡಿಸಿ ಶ್ರೀಗಳವರಲ್ಲಿ ತೋರಿಸಿದ ಭಕ್ತಿವಿಶ್ವಾಸಗಳೇ ಸಾಕ್ಷಿಗಳಾಗಿವೆ.

ಸಸ್ಯಸಮೃದ್ಧವಾದ ಕ್ಷೇತ್ರವು ಸಂಸ್ಕಾರಹೀನವಾದರೆ ಕಾಲಕಳೆದಂತೆಲ್ಲ ಸಾರಹೀನವಾಗಿ ಪರಿಣಮಿಸುವಂತೆ, ಸನಾತನವಾದೀ ವೀರಶೈವಮತವು ಮಹೋನ್ನತದಶೆಯಲ್ಲಿದ್ದು ಕಾಲಕರ್ಮದೋಷವಶದಿಂದ ಖಿಲವಾಗುತ್ತಿರುವುದೆಂಬುದನ್ನು ಕಂಡು, ಈ ಮತವೆಂಬ ಸುಕ್ಷೇತ್ರಕ್ಕೆ ನವಚೇತನವನ್ನುಂಟುಮಾಡಿ ಆದರಿಂದ ಲಭಿಸುವ ರಸವತ್ಫಲಗಳನ್ನು ಲೋಕಕ್ಕೆ ಹಂಚಿಕೊಟ್ಟು, ವೀರಶೈವಧರ್ಮಗಳನ್ನು ದೃಢಮೂಲಗೊಳಿಸುವುದಕ್ಕಾಗಿಯೇ ನಿರಂತರವೂ ಪ್ರಯತ್ನಿಸುತ್ತಿರುವ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು, ಪರಶಿವನ ಪಂಚಮುಖಗಳಿಂದವತರಿಸಿದ ಶ್ರೀಮತ್ಪಂಚಾಚಾರ್ಯರ ಚರಿತ್ರ

ಮೊದಲಾದ ಗ್ರಂಥಗಳನ್ನು ಕರ್ಣಾಟದೇಶೀಯರ ಪ್ರಯೋಜನಕ್ಕಾಗಿ ಕನ್ನಡದಲ್ಲಿ ಬರೆದೂ, ಬರೆಯಿಸಿಯೂ ಮತಗ್ರಂಥಪ್ರಚಾರಣದಿಂದ ವೀರಶೈವಮತವನ್ನು ಪೂರ್ವದಂತೆ ಉನ್ನತಸ್ಥಿತಿಗೆ ತರಲು ಸಾಹಸಪಡುತ್ತಿರುವುದು ಇಂದಿನ ವಾತಾವರಣದಲ್ಲಿ ಮಹತ್ಕಾರ್ಯವೇ ಸರಿ! ಸಂಕಲ್ಪವನ್ನು ಸಮಗ್ರಗೊಳಿಸಿದಲ್ಲದೆ ಬಿಡಲೊಲ್ಲದ ಸ್ವಭಾವವುಳ್ಳ ಶ್ರೀ ಕಾಶೀನಾಥಶಾಸ್ತ್ರಿಗಳವರ ಮಹೋದ್ಯಮವು ಉಚಿತ ಫಲವನ್ನು ಹೊಂದಲೆಂದಾಶಿಸುತ್ತೇವೆ.

ಈ ಶಾಸ್ತ್ರಿಗಳವರು "ರೇಣುಕವಿಜಯಪುರಾಣ"ವನ್ನು ಆಸ್ಥಾನವಿದ್ವಾನ್ ವೇ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳವರಿಂದ ಭಾಮಿನೀಷಟ್ಪದಿಯಲ್ಲಿ ಬರೆಯಿಸಿರುವುದು ಪ್ರಶಂಸನೀಯವಾಗಿದೆ.

ಶ್ರೀ ಶ್ರೀಕಂಠಶಾಸ್ತ್ರಿಗಳವರು ಕನ್ನಡದಲ್ಲಿ ಕಾವ್ಯನಾಟಕಾದ್ಯನೇಕಗ್ರಂಥಗಳನ್ನು ರಚಿಸಿ ಮಹಾಜನರ ಮಾನ್ಯತೆಗೆ ಪಾತ್ರರಾಗಿ ಪ್ರಖ್ಯಾತರಾಗಿರುವರು. ಇವರ ಕವಿತಾಸರಣಿಯು ಶಬ್ದಾರ್ಥಾಲಂಕಾರಗಳಿಂದೊಡಗೂಡಿ ಸರಳವೂ ಮನೋಹರವೂ ಆಗಿರುವುದು.

ವೀರಶೈವಮತತತ್ತ್ವವನ್ನರಿಯಲೆಳಸುವ ಆಸ್ತಿಕಮಹನೀಯರೂ ಕರ್ಣಾಟಸಾಹಿತ್ಯಾಭಿಮಾನಿಗಳೂ ಈ ಗ್ರಂಥವನ್ನು ಆಮೂಲಾಗ್ರವಾಗಿ ಓದಿ ಆನಂದಿಸಿ, ಶ್ರೀ ರೇಣುಕಾಚಾರ್ಯರ ಅನುಗ್ರಹಕ್ಕೆ ಪಾತ್ರರಾಗುವರೆಂದು ನಂಬಿರುವ,

ರಾಜಕವಿಭೂಷಣ,

ಮೈಸೂರು,

ಹೆಚ್. ಲಿಂಗರಾಜ ಅರಸ,

ತಾ|| 19-2-1933.

ಅರಮನೆಯ ರಿಟೈರ್ಡ್ ಮುಜರಾಯಿಭಕ್ಷಿಯವರು.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪ್ರಸ್ತಾವನೆ.

ಯಸ್ಯ ಸ್ಮರಣಮಾತ್ರೇಣ ನೃಣಾಂ ಮುಕ್ತಿಃ ಕರಸ್ಥಿತಾ |
ತಂ ವಂದೇ ಜಗದಾಧಾರಂ ರೇಣುಕಾರ್ಯಂ ಜಗದ್ಗುರುಂ ||

ಸೃಷ್ಟಿಯ ಆದಿಯಲ್ಲಿ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರು ಪರಶಿವನ ಸದ್ಯೋಜಾತಾದಿಪಂಚಮುಖಗಳಿಂದುದಯಿಸಿ ಭೂಮಂಡಲದಲ್ಲಿ ಶ್ರೀಸೋಮನಾಥ, ಸಿದ್ಧೇಶ್ವರ, ರಾಮನಾಥ, ಮಲ್ಲಿಕಾರ್ಜುನ, ವಿಶ್ವನಾಥಲಿಂಗಗಳಿಂದವತರಿಸಿ, ಜಗತ್ತಿನಲ್ಲೆಲ್ಲ ಸಂಚರಿಸಿ, ಶಕ್ತಿವಿಶಿಷ್ಟಾದ್ವೈತಸಿದ್ಧಾಂತಪ್ರತಿಪಾದಕವಾದ ವೀರಶೈವತತ್ತ್ವವನ್ನು ನೆಲೆಗೊಳಿಸಿ, ಸ್ವಮತಪರಿಪಾಲನಕ್ಕೋಸ್ಕರ ರಂಭಾಪುರಿ, ಉಜ್ಜಯಿನಿ, ಹಿಮಾಲಯ, ಶ್ರೀಶೈಲ, ಕಾಶೀಕ್ಷೇತ್ರಗಳಲ್ಲಿ ಪಂಚಧರ್ಮಪೀಠಗಳನ್ನು ಸ್ಥಾಪಿಸಿ ಜಗದ್ವಂದ್ಯರಾದ ವಿಷಯವು ಸುಪ್ರಸಿದ್ಧವಾಗಿಯೇ ಇದೆ. ಈ ಆಚಾರ್ಯರು ಭರತಖಂಡದಲ್ಲೆಲ್ಲ ಸಂಚರಿಸಿ ತಮ್ಮ ಮಹಿಮೆಯ ಬಲದಿಂದ ನಾಸ್ತಿಕಮತಗಳನ್ನು ಖಂಡಿಸಿ ಶಿವಭಕ್ತಿಯನ್ನು ಅಭಿವೃದ್ಧಿಗೊಳಿಸಿದರು. ಇವರು ಮಾಡಿದ ಅದ್ಭುತಲೀಲೆಗಳ ವಿಷಯವು ಅವರವರ ಪವಿತ್ರಚರಿತ್ರಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟದೆ. ಈ ಪೂಜ್ಯಪಾದರ ಲೀಲಾಪ್ರತಿಪಾದಕಗಳಾದ ಚರಿತ್ರಗಳು ಪ್ರಾಚೀನ ಪಂಡಿತರಿಂದ ಗೀರ್ವಾಣಭಾಷೆಯಲ್ಲಿ ಬಹುಮನೋಹರವಾಗಿ ರಚಿಸಲ್ಪಟ್ಟಿರುವುವು. ಅಸ್ತು! ಸದ್ಯಃ ಶ್ರೀಮದ್ವೀರಶೈವಮತಸ್ಥಾಪಕ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲೊಬ್ಬರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಷಯವನ್ನು ವಿಮರ್ಶಿಸಬೇಕಾಗಿದೆ. ಈ ಗುರುಸಾರ್ವಭೌಮರ ವಿಷಯದಲ್ಲಿ ಅನೇಕಜನ ಪ್ರಾಚೀನಕವಿಗಳು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಈಗ್ಗೆ ಸುಮಾರು ೧೫೦೦ ವರ್ಷಗಳ ಪೂರ್ವದಲ್ಲಿ ಶಿವಯೋಗಿಶಿವಾಚಾರ್ಯರು ತಮ್ಮಿಂದ ರಚಿಸಲ್ಪಟ್ಟ ಸಿದ್ಧಾಂತಶಿಖಾಮಣಿಯೆಂಬ ಲೋಕವಿಖ್ಯಾತವಾದ ಗ್ರಂಥದಲ್ಲಿ ಶ್ರೀರೇಣುಕರು ಕೊಲ್ಲಿಪಾಕಿ ಸೋಮನಾಥಲಿಂಗದಿಂದ ಅವತರಿಸಿದ ವಿಷಯವನ್ನೂ,

ಅಗಸ್ತ್ಯಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸಿದ ವಿಷಯವನ್ನೂ, ವಿಭೀಷಣನ ಪ್ರಾರ್ಥನಾನುಸಾರವಾಗಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ ವಿಷಯವನ್ನೂ, ಸೋಮನಾಥಲಿಂಗದಲ್ಲಿ ಐಕ್ಯಗೊಂಡ ವಿಷಯವನ್ನೂ ಮಾತ್ರ ವರ್ಣಿಸಿದ್ದಾರೆ. ಈಗ್ಗೆ ೯೭೩ ವರ್ಷಗಳ ಪೂರ್ವದಲ್ಲಿ ಸಿದ್ಧನಾಥಶಿವಾಚಾರ್ಯನಿಂದ ವಿರಚಿತವಾಗಿರುವ ರೇಣುಕವಿಜಯವೆಂಬ ಸಂಸ್ಕೃತಗ್ರಂಥದಲ್ಲಿ ರೇಣುಕಾಚಾರ್ಯರ ಅನೇಕ ಲೀಲೆಗಳು ವರ್ಣಿಸಲ್ಪಟ್ಟವೆ. ಇದಲ್ಲದೆ ಈಶಾನಶಿವಗುರುವೆಂಬ ಪ್ರಾಚೀನ ಕವಿಯು ಸಂಸ್ಕೃತದಲ್ಲಿ ರೇಣುಕಚರಿತ್ರವನ್ನೂ, ೧೨ನೆಯ ಶತಮಾನದಲ್ಲಿದ್ದ ಹಂಪೆಯ ಹರೀಶ್ವರಕವಿಯು ಕನ್ನಡದಲ್ಲಿ ರೇವಣಸಿದ್ಧರಗಳೆಯನ್ನೂ, ೧೫ನೆಯ ಶತಮಾನದಲ್ಲಿದ್ದ ಬೊಮ್ಮರಸಕವಿಯು ರೇವಣಸಿದ್ಧೇಶ್ವರಪುರಾಣವನ್ನೂ, ಇದೇ ಶತಮಾನದಲ್ಲಿದ್ದ ಮಲ್ಲಣ್ಣಕವಿಯು ರೇವಣಸಿದ್ಧೇಶ್ವರಕಾವ್ಯವನ್ನೂ, ೧೭ನೆಯ ಶತಮಾನದಲ್ಲಿದ್ದ ಚನ್ನಬಸವ ಕವಿಯು ರೇವಣಸಾಂಗತ್ಯವನ್ನೂ ರಚಿಸಿದ್ದಾರೆ. ಆದರೆ ಪ್ರಾಚೀನ ಸಂಸ್ಕೃತಕವಿಗಳು ಈ ಆಚಾರ್ಯರ ಲೀಲೆಗಳನ್ನು ಸರಿಯಾಗಿ ವರ್ಣಿಸಿದಂತೆ ಕನ್ನಡ ಕವಿಗಳು ವರ್ಣಿಸಿಲ್ಲ. ಬೊಮ್ಮರಸ ಮೊದಲಾದ ಕನ್ನಡ ಕವಿಗಳು ಈ ಮಹಿಮರ ನಿಜವಾದ ಲೀಲಾಜಾಲವನ್ನು ವಿಮರ್ಶಿಸದೆ, ಕಾಲವನ್ನು ಪರಿಗಣಿಸದೆ ಸ್ವೇಚ್ಛೆಯಾಗಿ ಬರೆದಿದ್ದಾರೆ. ಈ ಗ್ರಂಥಗಳ ಬರವಣಿಗೆಯನ್ನೇ ನಂಬಿದ್ದಾದರೆ, ರೇಣುಕಾಚಾರ್ಯರಾದರೂ ಈಗ್ಗೆ ೭-೮ ನೂರು ವರ್ಷಗಳಲ್ಲಿದ್ದರೆಂದು ಹೇಳಬೇಕಾಗುವ ಪ್ರಸಂಗವು ಪ್ರಾಪ್ತವಾಗುವುದು. ಈ ವಿಷಯವು ಕೇವಲ ಅಸಮಂಜಸವಾದುದು. ಏಕೆಂದರೆ—ಈಗ್ಗೆ ಸುಮಾರು ೧೫೦೦ ವರ್ಷಗಳ ಪೂರ್ವದಲ್ಲಿ ಸಿದ್ಧಾಂತಶಿಖಾಮಣಿಯನ್ನು ರಚಿಸಿದ ಶಿವಯೋಗಿ ಶಿವಾಚಾರ್ಯನು ಆ ಗ್ರಂಥದ ಅಂತ್ಯಭಾಗದಲ್ಲಿ ಶ್ರೀ ರೇಣುಕಾಚಾರ್ಯರ ಶಿವಲೋಕಗಮನವಿಷಯವನ್ನು ಸ್ಪಷ್ಟವಾಗಿ ಬರೆದಿದ್ದಾನೆ. ಅಲ್ಲದೆ ಈಗ್ಗೆ ೯೭೩ ವರ್ಷಗಳ ಪೂರ್ವದಲ್ಲಿ ರೇಣುಕವಿಜಯವನ್ನು ರಚಿಸಿದ ಸಿದ್ಧನಾಥಶಿವಾಚಾರ್ಯನೂ ತನ್ನ ಗ್ರಂಥದಲ್ಲಿ ಶ್ರೀರೇಣುಕರ ಸೋಮನಾಥಲಿಂಗೈಕ್ಯವನ್ನು ತೋರಿಸಿದ್ದಾನೆ. ಪ್ರಾಚೀನಗ್ರಂಥಗಳಲ್ಲಿ ಈರೀತಿಯಾಗಿ ಉಲ್ಲೇಖವಿರುತ್ತಿರಲು, ಇತ್ತೀಚಿನ ಗ್ರಂಥಕಾರರು ಸಿದ್ಧರಾಮನ ಮನೆಗೆ ಹೋಗಿದ್ದರೆಂಬ ವಿಷಯವನ್ನು ಬರೆದಿರುವುದನ್ನು ನೋಡಿದರೆ ಬಹು ಸೋಜಿಗವೆನಿಸುತ್ತದೆ.

ಶ್ರೀ ರೇಣುಕಾಚಾರ್ಯರು ಈಗ್ಗೆ ಸುಮಾರು ೩೨೦೦ ವರ್ಷಗಳ ಪೂರ್ವದಲ್ಲಿ ಅವತರಿಸಿರಬಹುದೆಂದು ಹೇಳಬಹುದಾಗಿದೆ. ಇವರ ಚರಿತ್ರದಲ್ಲಿ ಲೋಕವಿಖ್ಯಾತನಾದ ಅಗಸ್ತ್ಯಮಹರ್ಷಿಗೆ ಶಿವಸಿದ್ಧಾಂತವನ್ನುಪದೇಶಿಸಿದ ವಿಷಯವೂ, ರಾವಣನ ತಮ್ಮನಾದ ವಿಭೀಷಣನ ಇಷ್ಟಾನುಸಾರವಾಗಿ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ಅವನಿಗೆ ಶಿವತತ್ತ್ವವನ್ನು ಬೋಧಿಸಿದ ವಿಷಯವೂ, ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನನುಗ್ರಹಿಸಿದ ವಿಷಯವೂ, ಉಜ್ಜಯಿನೀ ಪಟ್ಟಣವನ್ನಾಳುತ್ತ ಶಕಪುರುಷನೆಂದು ವಿಖ್ಯಾತನಾದ ವಿಕ್ರಮಮಹಾರಾಜನಿಗೆ ಖಡ್ಗವನ್ನನುಗ್ರಹಿಸಿದ ವಿಷಯವೂ ಇವೇ ಮೊದಲಾದ ವಿಷಯಗಳು ಉಕ್ತವಾಗಿವೆ. ಇವೆಲ್ಲವೂ ಕಲಿಯುಗದ ಆದಿಯಲ್ಲಿಯೇ ನಡೆದುವೆಂದು ಇವರ ಚರಿತ್ರಗಳಿಂದ ತಿಳಿದುಬರುತ್ತದೆ. ಇದರ ಮೇಲೆ ಕೆಲವರು ಅಗಸ್ತ್ಯನು ಯಾವ ಕಾಲದವನು? ವಿಭೀಷಣನು ಯಾವ ಕಾಲದವನು? ಕಲಿಯುಗಕ್ಕೂ ಅವರಿಗೂ ಸಂಬಂಧವೇನು? ಎಂದು ಅಪಲಪಿಸುತ್ತಿರುವರು. ಇದು ಅವರ ಅಜ್ಞಾನಪ್ರಭಾವವೆಂದೇ ಹೇಳಬೇಕಾಗುತ್ತದೆ. ಏಕೆಂದರೆ— ಧರ್ಮಶಾಸ್ತ್ರಗಳು ಅಗಸ್ತ್ಯ ವಿಭೀಷಣ ಹನುಮಂತ ಮೊದಲಾದವರು ಯೋಗಸಾಮರ್ಥ್ಯದಿಂದ ಚಿರಂಜೀವಿಗಳಾಗಿರುವರೆಂದು ಘಂಟಾಘೋಷವಾಗಿ ಸಾರುತ್ತಿರುವುವು. ಆದುದರಿಂದ, ಶಿವಾಜ್ಞಾನುಸಾರವಾಗಿ ಅವರು ಶ್ರೀ ರೇಣುಕಾಚಾರ್ಯರ ತತ್ತ್ವೋಪದೇಶದಿಂದ ಕಲಿಯುಗದಲ್ಲಿ ಕೃತಾರ್ಥರಾದರೆಂದು ಹೇಳಲು ಯಾವ ಸಂಶಯವೂ ಇಲ್ಲ. ಈಗಿನ ಚರಿತ್ರಶೋಧಕರು ಅಗಸ್ತ್ಯಾದಿಗಳು ಈಗ್ಗೆ ೩ ಸಾವಿರ ವರ್ಷಗಳ ಪೂರ್ವದಲ್ಲಿದ್ದರೆಂದು ಅಭಿಪ್ರಾಯಪಡುತ್ತಾರೆ. ಈ ದೃಷ್ಟಿಯಿಂದ ನೋಡಿದರೂ ಅಗಸ್ತ್ಯಾದಿಗಳು ಶ್ರೀ ರೇಣುಕಾಚಾರ್ಯರ ಸಮಕಾಲದವರೆಂದು ಹೇಳಬಹುದಾಗಿದೆ. ಅಸ್ತು!

ಇನ್ನು ಕೆಲವರು ಶ್ರೀ ಶಂಕರಾಚಾರ್ಯರಿಗೂ ಶ್ರೀ ರೇಣುಕಾಚಾರ್ಯರಿಗೂ ಯಾವ ಸಂಬಂಧವೂ ಇಲ್ಲವೆಂದೂ, ಶ್ರೀಚಂದ್ರಮೌಳೀಶ್ವರಲಿಂಗವು ಶ್ರೀ ರೇಣುಕಾಚಾರ್ಯರಿಂದ ಕೊಡಲ್ಪಟ್ಟಿಲ್ಲವೆಂದೂ, ಇದು ನಂಬಲಿಕ್ಕೆ ಅರ್ಹವಾದುದಲ್ಲವೆಂದೂ ನುಡಿಯುತ್ತಿರುವರು. ಇದು ಅವರ ಭ್ರಮೆಯಲ್ಲದೆ ಯಥಾರ್ಥವಲ್ಲ; ಏಕೆಂದರೆ—ಸಿದ್ಧನಾಥಶಿವಾಚಾರ್ಯನಿಂದ ರಚಿಸಲ್ಪಟ್ಟ ರೇಣುಕವಿಜಯದಲ್ಲಿ

ಚಂದ್ರಮೌಲೀಶ್ವರಲಿಂಗಪ್ರದಾನವಿಷಯವು ವಿಶದವಾಗಿ ಬರೆಯಲ್ಪಟ್ಟಿರುವುದು. ಮತ್ತು ಈ ವಿಷಯವು **ಶಿವತತ್ತ್ವರತ್ನಾಕರ, ವೇದಾಂತಸಾರವೀರಶೈವ ಚಿಂತಾಮಣಿ** ಮೊದಲಾದ ಗ್ರಂಥಗಳಲ್ಲಿಯೂ ಸಹ ಪ್ರತಿಪಾದಿಸಲ್ಪಟ್ಟಿರುವುದು. ಅಲ್ಲದೆ ಈಗ್ಗೆ ನೂರಾರು ವರ್ಷಗಳ ಪೂರ್ವದಲ್ಲಿ **ಶ್ರೀ ಶೃಂಗೇರಿಮಠಕ್ಕೆ** ಅಧಿಪತಿಗಳಾಗಿದ್ದ **ಶ್ರೀ ಸಚ್ಚಿದಾನಂದಭಾರತೀಸ್ವಾಮಿಗಳೆಂಬ** ಮಹನೀಯರು, ಆ ಕಾಲದಲ್ಲಿ ತಮ್ಮ ಆಸ್ಥಾನವಿದ್ವಾಂಸರಾಗಿದ್ದ **ಕಾಶೀಲಕ್ಷ್ಮಣಶಾಸ್ತ್ರಿಗಳೆಂಬ** ಕವಿಪುಂಗವರಿಂದ ಆದ್ಯಶಂಕರಾಚಾರ್ಯರಾದಿಯಾಗಿ ಸಕಲ ಸ್ವಾಮಿಗಳವರ ಚರಿತ್ರವನ್ನು "**ಗುರುವಂಶಕಾವ್ಯ**" ಎಂಬ ಹೆಸರಿನಿಂದ ಸಂಸ್ಕೃತಭಾಷೆಯಲ್ಲಿ ಪದ್ಯರೂಪವಾಗಿ ಬರೆಯಿಸಿದ್ದಾರೆ. ಈ ಗ್ರಂಥವು **ಶೃಂಗೇರಿಮಠದ ಲೈಬ್ರೆರಿಯಲ್ಲಿ** ದೊರೆತಿದ್ದು, ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನಧರ್ಮಾಧಿಕಾರಿಗಳಾದ ವಿದ್ಯಾವಿಶಾರದ ವೇ|| ಕುಣಿಗಲ್ ರಾಮಶಾಸ್ತ್ರಿಗಳವರಿಂದ ಪರಿಶೋಧಿತವಾಗಿ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ ಶ್ರೀರಂಗದಲ್ಲಿರುವ ವಾಣೀವಿಲಾಸ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದ ಮೂರನೆಯ ಸರ್ಗದಲ್ಲಿ—

ಶ್ರೀಶಂಕರಾಚಾರ್ಯರು ಭರತಖಂಡವನ್ನೆಲ್ಲ ಸಂಚರಿಸಿ ಕಾಶ್ಮೀರ ದೇಶಕ್ಕೆ ಹೋಗಿ, ಅಲ್ಲಿದ್ದ ಶಾರದಾದೇವಿಯನ್ನು ತಂದು ಶೃಂಗೇರಿಯಲ್ಲಿ ಸ್ಥಾಪಿಸಿದರೆಂದೂ, ಅನಂತರ ತಾವು ಕಾಂಚೀಕ್ಷೇತ್ರಕ್ಕೆ ಹೊರಡಲು ಸಿದ್ಧರಾಗಿ ಸುರೇಶ್ವರಾಚಾರ್ಯನೆಂಬ ತಮ್ಮ ಪ್ರಥಮಶಿಷ್ಯನಿಗೆ ಶೃಂಗೇರಿಮಠದ ಪಟ್ಟವನ್ನು ಕಟ್ಟಿದರೆಂದೂ, ಆಮೇಲೆ ಸುರೇಶ್ವರಾಚಾರ್ಯನಿಗೆ "ಎಲೈ ಸುರೇಶ್ವರಾಚಾರ್ಯನೇ! ನೀನು **ಶ್ರೀ ರೇಣುಕಾಚಾರ್ಯರು** ನನಗೆ ಈ ಮೊದಲು ಅನುಗ್ರಹಿಸಿರುವ **ಶ್ರೀ ಚಂದ್ರಮೌಲೀಶ್ವರಲಿಂಗವನ್ನೂ** ಮತ್ತು **ರತ್ನಗರ್ಭಗಣಪತಿಯನ್ನೂ** ಪೂಜಿಸು" ಎಂದು ಆಜ್ಞೆಯನ್ನು ಮಾಡಿ ಕಾಂಚೀಕ್ಷೇತ್ರಕ್ಕೆ ತೆರಳಿದರೆಂದೂ ಹೇಳಲ್ಪಟ್ಟಿರುತ್ತದೆ. ಆ ಗ್ರಂಥದ ಶ್ಲೋಕಗಳು ಈ ಕೆಳಗೆ ಉದಾಹರಿಸಲ್ಪಟ್ಟಿವೆ.

ಶ್ರೀ ಚಂದ್ರಮೌಳೀಶ್ವರಲಿಂಗಮಸ್ಮೈ ಸದ್ರತ್ನಗರ್ಭಂ ಗಣನಾಯಕಂಚ।
ಸ ವಿಶ್ವರೂಪಾಯ ಸುಸಿದ್ಧದತ್ತಂ ದತ್ವಾ ನ್ಯಗಾದೀಚ್ಚಿರಮರ್ಚಯೇತಿ ॥
||೩೩||

ಸುರೇಶ್ವರಾಚಾರ್ಯ ಸರಸ್ವತೀಂ ತ್ವಂ ಸಂಪೂಜಯನ್ನಾಸ್ಸ್ವ ಚಿರಾದಿಹೇತಿ |
ದತ್ವಾಽಭ್ಯನುಜ್ಞಾಂ ವಿನತಾಯ ತಸ್ಮೈ ಶಿಷ್ಯೈಸ್ಸಮಸ್ತೈಸ್ಸಜಗಾಮ
ಕಾಂಚೀಂ ||೩೪||

೩೩ನೆಯ ಪದ್ಯದಲ್ಲಿರತಕ್ಕ "**ಸುಸಿದ್ಧದತ್ತಂ**" ಎಂಬ ಪದಕ್ಕೆ—

"**ಸುಸಿದ್ಧೇನ ರೇವಣಸಿದ್ಧಮಹಾಯೋಗಿನಾ ದತ್ತಂ ಶ್ರೀ ಚಂದ್ರಮೌಲೀಶ್ವರಲಿಂಗಂ ಸದ್ರತ್ನಗರ್ಭಂ ಸದ್ರತ್ನಂ ಮಾಣಿಕ್ಯಂ ಗರ್ಭೇ ಯಸ್ಯ ಸಃ ತಥೋಕ್ತಸ್ತಂ ಗಣನಾಯಕಂ ವಿಘ್ನೇಶ್ವರಂಚ**"

ಎಂದು ಈ ಗ್ರಂಥವನ್ನು ರಚಿಸಿದ ಕವಿಗಳೇ ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾರೆ. ಅಲ್ಲದೆ ಈ ಚಂದ್ರಮೌಲೀಶ್ವರಲಿಂಗದ ವಿಷಯವು ಇದೇ ಕಾವ್ಯದ ಆರನೆಯ ಸರ್ಗದಲ್ಲಿಯೂ ಬಂದಿರುವುದು. ಈ ಗ್ರಂಥಕರ್ತರು ಗ್ರಂಥಾದಿಯಲ್ಲಿ—

ಪ್ರಾಯೇಣಾನ್ವಯಮಾರ್ಗೇಣ ವ್ಯಾಖ್ಯಾಯತ ಇಯಂ ಕೃತಿಃ |
ಪ್ರಾಚಾಮಸಮ್ಮತಂ ನೈವ ಲಿಖ್ಯತೇಽತ್ರ ನಚಾಧಿಕಂ ||

ಎಂದು ಪ್ರತಿಜ್ಞೆಯನ್ನು ಮಾಡಿ, ಪ್ರಾಚೀನಗ್ರಂಥಗಳಿಗೆ ಸಮ್ಮತವಾದ ವಿಷಯವನ್ನೇ ಬರೆಯುತ್ತೇನೆಂದು ಹೇಳಿರುವುದರಿಂದ, ಶಂಕರಾಚಾರ್ಯರ ವಿಷಯಕಗಳಾದ ಪ್ರಾಚೀನಗ್ರಂಥಗಳಲ್ಲಿ ಚಂದ್ರಮೌಲೀಶ್ವರಲಿಂಗಪ್ರದಾನವಿಷಯವು ವಿಶದವಾಗಿ ಬರೆಯಲ್ಪಟ್ಟಿರಬಹುದೆಂದು ತೋರುತ್ತದೆ. ಶಂಕರಾಚಾರ್ಯರ ವಿಷಯದಲ್ಲಿ "**ಬೃಹಚ್ಛಂಕರವಿಜಯ**" ವೆಂಬ ಗ್ರಂಥವು ಪ್ರಾಚೀನಪಂಡಿತರಿಂದ ಬರೆಯಲ್ಪಟ್ಟಿರುವುದೆಂದೂ, ಆ ಗ್ರಂಥದಲ್ಲಿ ರೇವಣಸಿದ್ಧಶಂಕರಾಚಾರ್ಯರ ಸಂವಾದರೂಪವಾದ "**ಸಿದ್ಧಶಂಕರಸಂವಾದ**" ವೆಂಬುದೊಂದು ಭಾಗವುಂಟೆಂದೂ ವದಂತಿಯುಂಟು.

ಮದ್ರಾಸ್ ಗೌರ್ನಮೆಂಟ್ ಸೀನಿಯರ್ ಟ್ರಾನ್ಸ್‌ಲೇಟರರಾದ ಮ|| ರಾ|| ಬಿ. ರಾಮರಾವ್ ಎಂ.ಎ; ಎಲ್‌ಎಲ್.ಬಿ; ಇವರು ಮತ್ತು ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಲೈಬ್ರೆರಿಯ ಅ|| ಲೈಬ್ರೆರಿಯನ್ನರಾದ ಮ|| ರಾ|| ವಿದ್ವಾನ್ ಪಿ. ಸುಂದರಶಾಸ್ತ್ರಿಯರ್ ಇವರು "**ಶಿವತತ್ತ್ವರತ್ನಾಕರ**" ವೆಂಬ

ಉದ್ಗ್ರಂಥವನ್ನು ದೇವನಾಗರೀ ಲಿಪಿಯಲ್ಲಿ ಮುದ್ರಣಮಾಡಿಸಿ, ಮೈಸೂರು ಶ್ರೀಮನ್ಮಹಾರಾಜರವರ ಸನ್ನಿಧಿಗೆ ಸಮರ್ಪಿಸಿದ್ದಾರೆ. ಈ ಗ್ರಂಥದ ನಾಲ್ಕನೆಯ ಕಲ್ಲೋಲದ ಹನ್ನೆರಡನೆಯ ತರಂಗದಲ್ಲಿ ವಿದ್ಯಾರಣ್ಯರ ವಿಷಯವನ್ನು ಬರೆಯುವಾಗ್ಗೆ—

ತತಃ ಸ ರೇವಣಾಸಿದ್ಧಸಂಪ್ರದಾಯಪ್ರವರ್ತಿನಾಂ ।
ಶಂಕರಾಚಾರ್ಯವರ್ಯಾಣಾಂ ಪಾರಂಪರ್ಯಕ್ರಮಾಗತಂ ॥೯॥
ಸನ್ಯಾಸಿನಮುಪಾಶ್ರಿತ್ಯ ವಿನಯಾವನತೋಽಧಿಕಂ ।
ವೃತ್ತಾಂತಮಖಿಲಂ ತಸ್ಮೈಯತಯೇ ಸ್ವಂ ವ್ಯಜಿಜ್ಞಪತ್ ॥೧೦॥

ಎಂದೂ,

ರೇವಣಾಸಿದ್ಧಸಂಪ್ರಾಪ್ತಂ ಚಂದ್ರಮೌಲೀಶಮಪ್ಯದಾತ್ ।
ಆಖ್ಯಚ್ಚಾನೇನ ಲಿಂಗೇನ ತವಾಭೀಷ್ಟಾಪ್ತಿರಿತ್ಯಪಿ ॥

ಎಂದೂ ಬರೆಯಲ್ಪಟ್ಟಿದೆ. ಈ ೧೨ ನೆಯ ತರಂಗದಿಂದ ತಿಳಿದುಬರುವುದೇನಂದರೆ—ಶಿವಧರ್ಮನೆಂಬ ಬ್ರಾಹ್ಮಣನು ಬಡತನದ ವ್ಯಸನದಿಂದ **ರೇವಣಸಿದ್ಧ ಸಾಂಪ್ರದಾಯಿಕರಾದ ಶ್ರೀ ಶಂಕರಾಚಾರ್ಯರ ಪೀಠಕ್ಕೆ** ಅಧಿಪತಿಗಳಾಗಿದ್ದ ವಿದ್ಯಾಶಂಕರತೀರ್ಥಸ್ವಾಮಿಗಳವರಲ್ಲಿ ಬಂದು ತನ್ನ ನಿಜಸ್ಥಿತಿಯನ್ನು ಹೇಳಿಕೊಂಡನೆಂದೂ, ಶ್ರೀ ಸ್ವಾಮಿಗಳವರು ಆತನಿಗೆ ಶ್ರೀಚಕ್ರವನ್ನನುಗ್ರಹಿಸಿ ಅದನ್ನು ಪೂಜಿಸಲು ಅಪ್ಪಣೆಯನ್ನು ಮಾಡಿದರೆಂದೂ, ಆ ಶ್ರೀಚಕ್ರಪೂಜೆಯ ಸಾಮರ್ಥ್ಯದಿಂದಲೇ ಆತನು ಮಹಾಜ್ಞಾನಿಯಾಗಿ ಆ ಸ್ವಾಮಿಗಳವರಿಂದ ಸನ್ಯಾಸದೀಕ್ಷೆಯನ್ನು ಪಡೆದುಕೊಂಡು **ವಿದ್ಯಾರಣ್ಯನೆಂಬ** ನಾಮಧೇಯದಿಂದ ಪ್ರಸಿದ್ಧನಾದನೆಂದೂ, ಶ್ರೀ ಸ್ವಾಮಿಗಳವರು ತಮ್ಮ ಶಿಷ್ಯರಾದ ಈ ವಿದ್ಯಾರಣ್ಯರಿಗೆ, ಆದಿಯಲ್ಲಿ ಶ್ರೀ ರೇಣುಕಾಚಾರ್ಯರಿಂದ ಶ್ರೀ ಶಂಕರಾಚಾರ್ಯರಿಗೆ ಪ್ರಾಪ್ತವಾಗಿ ಗುರುಪರಂಪರೆಯಿಂದ ಬಂದ **ಶ್ರೀ ಚಂದ್ರಮೌಳೀಶ್ವರಲಿಂಗವನ್ನು** ಕೊಟ್ಟು, “ನೀನು ಈ ಲಿಂಗವನ್ನು ಪೂಜಿಸು, ಇದರಿಂದ ನಿನ್ನ ಮನೋಭೀಷ್ಟವು ಪೂರ್ತಿಯಾಗುವುದು” ಎಂದು ಆಜ್ಞೆಯನ್ನಿತ್ತರೆಂದೂ ತಿಳಿದುಬರುತ್ತದೆ.

ಈ ಶಿವತತ್ತ್ವರತ್ನಾಕರ ಗ್ರಂಥಕ್ಕೆ ಇಂಡಿಯಾ ಗೌರ್ನಮೆಂಟಿನ ಪ್ರಾಚೀನ ಶಾಸನಶೋಧಕರಾದ ರಾವ್‌ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಯರ್, ಬಿ. ಎ., ಎಂಬವರು ಆಂಗ್ಲಭಾಷೆಯಲ್ಲಿ ಬಹುವಿಶಾಲವಾದ ಪ್ರಸ್ತಾವನೆಯನ್ನು ಬರೆದಿರುತ್ತಾರೆ. ಅವರು ತಮ್ಮ ಪ್ರಸ್ತಾವನೆಯ ಒಂದೆಡೆಯಲ್ಲಿ ಈ ರೀತಿಯಾಗಿ ಬರೆದಿದ್ದಾರೆ—

One very interesting point which must be particularly drawn attention to in the story of Vidyaranya as given in the 12th Taranga of the 4th Kallola, is the "**ರೇವಣಸಿದ್ಧ ಸಂಪ್ರದಾಯ**" which the Acharyas of the Sankaracharya line that initiated our **ವಿದ್ಯಾರಣ್ಯ** were then practising at Sringeri. The **ಲಿಂಗ** of **ಚಂದ್ರಮೌಳೀಶ್ವರ** which is still worshipped as the chief deity by the Acharyas of **ಶೃಂಗೇರಿ ಮಠ,** is also said to have been presented to **ವಿದ್ಯಾರಣ್ಯ** by his direct Guru. **ರೇವಣಸಿದ್ಧ,** we know, is a well known Saiva teacher, whom the Veerasaivas still claim as one of their earliest Acharyas. The Keladi chiefs who were mostly followers of the Veerasaiva religion, were devout adherents of the **ಶೃಂಗೇರಿ ಶಂಕರಾಚಾರ್ಯಮಠ,** perhaps also for the same reason, viz., that the Shankaracharyas were followers of the **ರೇವಣಸಿದ್ಧಸಂಪ್ರದಾಯ.** This explains perhaps why in the **ಅದ್ವೈತಮಠ** of **ಶೃಂಗೇರಿ** there is still a greater bias towards Saivism and Saiva worship than towards Vaishnavism and Krishna worship, though the founder, the great Shankaracharya was no respector of creeds nor of any distinction between **ಶಿವ** and **ವಿಷ್ಣು.**"

ಅಂದರೆ " ಈ ಗ್ರಂಥದ 4 ನೆಯ ಕಲ್ಲೋಲದ 12 ನೆಯ ತರಂಗದಲ್ಲಿರುವ ವಿದ್ಯಾರಣ್ಯರ ಚರಿತ್ರದಲ್ಲಿ, ವಿದ್ಯಾರಣ್ಯರಿಗೆ ಸನ್ಯಾಸವನ್ನಿತ್ತ ಶಂಕರಾಚಾರ್ಯರ ಪೀಠಾಧಿಪತಿಗಳಾಗಿದ್ದ ಆಚಾರ್ಯರು ರೇವಣಸಿದ್ಧಸಂಪ್ರದಾಯವನ್ನು ಅನುಸರಿಸು

ತ್ತಿದ್ದರೆಂಬ ವಿಷಯವು ಸರ್ವರಿಂದಲೂ ಅತ್ಯವಶ್ಯಕವಾಗಿ ನೋಡಲ್ಪಡತಕ್ಕುದಾಗಿದೆ. ಶೃಂಗೇರಿಮಠದಲ್ಲಿ ಇಂದಿನವರೆಗೂ ಆ ಪೀಠದ ಆಚಾರ್ಯರಿಂದ ಮುಖ್ಯೋಪಾಸ್ಯದೈವವಾಗಿ ಪೂಜಿಸಲ್ಪಡುತ್ತಿರುವ ಶ್ರೀ ಚಂದ್ರಮೌಳೀಶ್ವರಲಿಂಗವು ವಿದ್ಯಾರಣ್ಯರಿಗೆ ಅವರ ಗುರುಗಳಿಂದ ಕೊಡಲ್ಪಟ್ಟಿತೆಂದು ಹೇಳಿದೆ. ರೇವಣಸಿದ್ಧರು ಸುಪ್ರಸಿದ್ಧಶೈವಸಿದ್ಧಾಂತಸ್ಥಾಪಕರಾಗಿದ್ದಾರೆ. ಅವರನ್ನು ವೀರಶೈವರು ತಮ್ಮ ಮತದ ಅತ್ಯಂತಪ್ರಾಚೀನಾಚಾರ್ಯರಲ್ಲೊಬ್ಬರನ್ನಾಗಿ ಹೇಳುತ್ತಾರೆ. ಶಂಕರಾಚಾರ್ಯರು ರೇವಣಸಿದ್ಧಸಂಪ್ರದಾಯಕ್ಕೆ ಸೇರಿದವರಾದುದರಿಂದಲೇ, ವೀರಶೈವಮತಾನುಯಾಯಿಗಳಾದ ಕೆಳದಿರಾಜರು ಶೃಂಗೇರಿ ಶಂಕರಾಚಾರ್ಯರ ಮಠಕ್ಕೆ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಿದ್ದರು. ಶಂಕರಾಚಾರ್ಯರು ಶಿವ ವಿಷ್ಣುಗಳಲ್ಲಿ ಭೇದವನ್ನೆಣಿಸದಿದ್ದರೂ, ಇಂದಿಗೂ ಸಹ ಅದ್ವೈತಮತಕ್ಕೆ ಸೇರಿದ ಆ ಮಠದಲ್ಲಿ ವೈಷ್ಣವಮತ, ಕೃಷ್ಣಪೂಜೆ ಇವುಗಳಿಗಿಂತ, ಶೈವಮತ ಮತ್ತು ಶಿವಲಿಂಗಪೂಜೆ ಇವುಗಳಿಗೇ ಹೆಚ್ಚು ಆಧಿಕ್ಯವಿರುವುದು ಈ ಕಾರಣದಿಂದಲೇ ಎಂದು ಕಂಡುಬರುತ್ತದೆ.''

ಈ ಶಿವತತ್ತ್ವರತ್ನಾಕರ ಗ್ರಂಥಕಾರನು ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನನುಗ್ರಹಿಸಿದ ವಿಷಯವನ್ನು, **ವಿದ್ಯಾರಣ್ಯ**ರಿಂದ ವಿರಚಿತವಾದ **ಪಿತಾಮಹಸಂಹಿತೆ** ಮತ್ತು **ಭಾರತೀಕೃಷ್ಣಯತಿ**ಯಿಂದ ವಿರಚಿತವಾದ '' **ವಿದ್ಯಾರಣ್ಯಕೃತಿ** '' ಎಂಬೀ ಗ್ರಂಥಗಳ ಆಧಾರದ ಮೇಲಿಂದ ಬರೆದಿರುವೆನೆಂದು ಚತುರ್ಥಕಲ್ಲೋಲದ ಅಂತ್ಯದಲ್ಲಿ—

ವಿದ್ಯಾರಣ್ಯಕೃತಿಂ ಚೈವ ಪಿತಾಮಹಸುಸಂಹಿತಾಂ ।
ವಿಲೋಕ್ಯಾಯಂ ವಿರಚಿತಃ ಕಲ್ಲೋಲೋಽಭೂಚ್ಚತುರ್ಥಕಃ ॥

ಎಂದು ಬರೆದಿದ್ದಾನೆ. ಇದರ ಮೇಲಿಂದ ವಿದ್ಯಾರಣ್ಯರು ಬರೆದ ಪಿತಾಮಹಸಂಹಿತೆಯಲ್ಲಿಯೂ ಮತ್ತು ಭಾರತೀಕೃಷ್ಣಯತಿಯು ಬರೆದ ವಿದ್ಯಾರಣ್ಯಕೃತಿಯಲ್ಲಿಯೂ ಚಂದ್ರಮೌಳೀಶ್ವರಲಿಂಗಪ್ರದಾನವಿಷಯವು ವಿಶದವಾಗಿ ಬರೆಯಲ್ಪಟ್ಟಿರುವುದೆಂದು ಸ್ಪಷ್ಟವಾಗುತ್ತದೆ. ಅಸ್ತು !

ಅನೇಕ ಜನ ಕವಿಗಳು ಶ್ರೀ ರೇಣುಕಾಚಾರ್ಯರ ಚರಿತ್ರಗಳನ್ನು ಬರೆದಿದ್ದರೂ ಇವರ ಸಂಪೂರ್ಣಲೀಲೆಗಳು ಯಾವ ಗ್ರಂಥದಲ್ಲಿಯೂ ವರ್ಣಿಸಲ್ಪಟ್ಟಿಲ್ಲ.

ಬೆಂಗಳೂರು ಡಿ|| ಕ್ಲೋಸ್‌ಪೇಟೆ ತಾಲೂಕಿನಲ್ಲಿ ಈ ಮಹಾಮಹಿಮರ ನಾಮ ಧೇಯದಿಂದ "ರೇವಣಸಿದ್ಧೇಶ್ವರ ಬೆಟ್ಟ" ಎಂಬ ಪವಿತ್ರ ಪರ್ವತವು ಶೋಭಿಸು ತ್ತಿದ್ದು, ಸ್ವಾಮಿಯ ದೇವಾಲಯವು ಮೈಸೂರು ಸರಕಾರದವರ ಮೇಲ್ವಿಚಾರಣೆ ಯಿಂದ ಸುವ್ಯವಸ್ಥಿತವಾಗಿರುವುದು. ತುಮಕೂರು ಡಿಸ್ಟ್ರಿಕ್ಟಿನಲ್ಲಿ "ಸಿದ್ಧರಬೆಟ್ಟ" ಎಂಬ ಗಿರಿಯು ಈ ಮಹಿಮರ ಪವಿತ್ರಾಭಿಧಾನದಿಂದ ಕಂಗೊಳಿಸುತ್ತಿರುವುದು. ಸಾತಾರಾ ಡಿ|| ವಿಟಾತಾಲೂಕಿಗೆ ಸೇರಿದ "ರೇಣಾವಿ" ಎಂಬ ಗ್ರಾಮದಲ್ಲಿ ಈ ಮಹಿಮರ ಹೆಸರಿನಿಂದ ಒಂದು ದೊಡ್ಡ ದೇವಾಲಯವಿದ್ದು ಪವಿತ್ರಕ್ಷೇತ್ರವೆನಿಸಿ ಕೊಂಡಿರುವುದು. ಗುಲ್ಬುರ್ಗಾ ಡಿಸ್ಟ್ರಿಕ್ಟಿಗೆ ಸೇರಿದ "ರೇವಗಿ" ಎಂಬ ಗ್ರಾಮದಲ್ಲಿ ಈ ಗುರುಸಾರ್ವಭೌಮರ ದೇವಾಲಯವಿದ್ದು, ಮಹಾಕ್ಷೇತ್ರವೆನಿಸಿಕೊಂಡು ಮೆರೆ ಯುತ್ತಿರುವುದು. ಕೊಲ್ಲಾಪುರ ರಾಜ್ಯದಲ್ಲಿ ಈ ಮಹಾತ್ಮರ ಪುಣ್ಯಾಭಿಧಾನದಿಂದ "ರೇವಣಸಿದ್ಧನಗುಡ್ಡ" ಎಂಬ ಗಿರಿಯು ಪರಿಶೋಭಿಸುತ್ತಿರುವುದು. ಈ ಪವಿತ್ರ ಕ್ಷೇತ್ರವು ಬೆಲ್ಲದಬಾಗೇವಾಡಿ ಸ್ಟೇಷನ್ನಿಗೆ ೧೨ ಮೈಲು ದೂರದಲ್ಲಿರುವುದು. ಇವೇ ಮೊದಲಾದ ಅನೇಕ ಪುಣ್ಯಸ್ಥಳಗಳು ಕರ್ಣಾಟಕ ಮತ್ತು ಮಹಾರಾಷ್ಟ್ರದೇಶ ಗಳಲ್ಲಿ ರಾರಾಜಿಸುತ್ತಿರುವುವು. ಇದರಂತೆ ಆಂಧ್ರ ದ್ರಾವಿಡ ಕೊಂಕಣ ಮೊದಲಾದ ದೇಶಗಳಲ್ಲಿಯೂ ಈ ಮಹಿಮರ ಹೆಸರಿನಿಂದ ಅನೇಕ ಪವಿತ್ರಕ್ಷೇತ್ರಗಳಿರುವುವೆಂದು ಪ್ರಸಿದ್ಧವದೆ. ಮೇಲ್ಕಂಡ ಸ್ಥಾನಗಳಲ್ಲಿ ಈ ಮಹಾತ್ಮರು ತೋರಿದ ಲೀಲೆಗಳು ಇವರ ಯಾವ ಚರಿತ್ರಗ್ರಂಥಗಳಲ್ಲಿಯೂ ಉಕ್ತವಾಗಿಲ್ಲ. ಆದುದರಿಂದ ಈ ಪ್ರಾಂತ ಗಳಲ್ಲೆಲ್ಲ ಸಂಚರಿಸಿ ಅಲ್ಲಲ್ಲಿರುವ ಸ್ಥಳಪುರಾಣಗಳನ್ನು ಶೋಧಿಸಿ ಮುದ್ರಿಸಬೇ ಕೆಂದು ಸಂಕಲ್ಪಿಸಿದೆ. ಇದಕ್ಕೆ ಶ್ರೀಗುರುವಿನ ಕೃಪೆಯು ಮುಖ್ಯವಾಗಿರಬೇಕಾಗಿದೆ.

ಅನೇಕಜನ ಕನ್ನಡಕವಿಗಳು ಈ ಗುರುಸಾರ್ವಭೌಮರ ಚರಿತ್ರಗಳನ್ನು ರಚಿಸಿದ್ದರೂ, ಅವರು ತಮ್ಮ ತಮ್ಮ ಮನಸ್ಸಿಗೆ ತೋರಿದಂತೆ ವಾರ್ಧಕಷಟ್ಪದಿ ರೂಪವಾಗಿಯೂ, ಸಾಂಗತ್ಯರೂಪವಾಗಿಯೂ, ರಗಳೆಯರೂಪವಾಗಿಯೂ ರಚಿಸಿ ದ್ದಾರೆ. ಈ ಛಂದಸ್ಸುಗಳು ಗಾನರೂಪದಿಂದ ಪಠಿಸಲು ಮನೋಹರವಾಗಿ ತೋರು ವುದಿಲ್ಲವಾದುದರಿಂದ, ಗಾನಕ್ಕೆ ಅತ್ಯಂತಮನೋಹರವಾದ ಭಾಮಿನೀಷಟ್ಪದಿಯಲ್ಲಿ ಈ ಪುರಾಣವನ್ನು ಬರೆಯಿಸಿದುದಾಗಿದೆ. ಈ ಪುರಾಣವನ್ನು ಮೈಸೂರು ಶ್ರೀಮ

ನ್ಮಹಾರಾಜರವರ ಆಸ್ಥಾನವಿದ್ವಾಂಸರೂ, ಕರ್ಣಾಟಕಕವಿಕಂಠೀರವರೂ ಆಗಿರುವ ವೇ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳೆಂಬ ಮಹಾಕವಿಗಳು ರಚಿಸಿದ್ದಾರೆ. ಈ ಕವಿಗಳ ಕವಿತಾಶಕ್ತಿಯು ಅದ್ಭುತವಾದುದು. ಇವರ ಕವಿತಾಶಕ್ತಿಯ ಮಹತ್ತ್ವವನ್ನು ಕರ್ಣಾಟಕದೇಶವೇ ಕೊಂಡಾಡುತ್ತಿದೆ. ಈ ಪುರಾಣವನ್ನು ಸಂಪೂರ್ಣವಾಗಿ ಪರಿಶೀಲಿಸಿದರೆ ಈ ಕವಿಗಳ ಯೋಗ್ಯತೆಯು ಪಾಠಕರಿಗೆ ಸ್ಪಷ್ಟವಾಗಿ ತೋರಿಬರುವುದು. ಪುರಾಣದ ಘನತೆಗೆ ತಕ್ಕ ಕವಿತೆಯೂ, ಅದಕ್ಕನುಗುಣವಾದ ಮುದ್ರಣವೂ ಒಂದುಗೂಡಿ ಮನೋಹರವಾಗಿವೆ. ಈ ಪುರಾಣನಿರ್ಮಾಣಸಮಯದಲ್ಲಿ ಶ್ರೀಮನ್ನಿರಂಜನಮೂರ್ತಿಗಳಾದ ಮೈಸೂರು ಹೊಸಮಠದ ಶ್ರೀ ಬಸವಲಿಂಗಸ್ವಾಮಿಗಳವರು ವಿಶೇಷ ಶ್ರಮವಹಿಸಿ ಕಾರ್ಯನಿರ್ವಾಹ ಮಾಡಿದುದರಿಂದ ಅವರ ಉಪಕಾರವು ಚಿರಸ್ಮರಣೀಯವಾಗಿದೆ. ಯಾವ ದೋಷಾದಿಗಳೂ ಇಲ್ಲದೆ ಸರ್ವಾಂಗಸುಂದರವಾಗಿ ಮುದ್ರಿತವಾಗಿರುವ ಈ ಮಹಾಪುರಾಣವನ್ನು ಕರ್ಣಾಟಕದೇಶದಲ್ಲಿರತಕ್ಕ ಪ್ರತಿಯೊಂದು ಗ್ರಾಮದವರೂ ತರಿಸಿಕೊಂಡು, ಪರಮಪವಿತ್ರವೆನಿಸಿದ ಶ್ರಾವಣಮಾಸದಲ್ಲಿ ಪುರಾಣಿಕರ ಮುಖದಿಂದ ರೇಣುಕಗುರುಸಾರ್ವಭೌಮನ ಸಮಗ್ರಲೀಲೆಗಳನ್ನು ಕೇಳಿ ಪವಿತ್ರಾತ್ಮರಾಗಬೇಕೆಂದು ಕೋರುವ,

ಪಂ|| ಕಾಶೀನಾಥಶಾಸ್ತ್ರೀ.

ವಿಷಯಾನುಕ್ರಮಣಿಕೆ.



ನಾಗನೂರು ಬೃಹನ್ಮಠಾಧ್ಯಕ್ಷರಾದ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ರೇಣುಕವಿಜಯಪುರಾಣಂ.

ಮೊದಲನೆಯ ಸಂಧಿ.

ಭಾಮಿನೀಷಟ್ಪದಿ.

ಶ್ರೀಗಿರೀಂದ್ರಪ್ರಿಯಸುತಾವರ |
ವಾಗಧೀಶ್ವರ ವಿಧುಮುಖಾಮರ |
ಪೂಗಹಿತಕರ ಗರಪುರಾಲಂಕಾರ ಸುಖಸಾರಾ ||
ರಾಗದೂರ ಗಭೀರ ಸಾದರ |
ನೈಗಮವ್ಯಾಹಾರ ಭಾಸುರ |
ಜಾಗು ಮಾಡದೆ ಸಲಹು ನಮ್ಮನು ವಿನತಮಂದಾರ ||೧||

ಕಾಲಕಾಲ ಪುರಾಣವಾಣೀ |
ಲೋಲ ನುತಯಮಿಜಾಲ ನಮದನು |
ಕೂಲ ಪೊರೆ ಕರುಣಾಲವಾಲ ಮೃಕಂಡುಸುತಪಾಲ ||
ನೀಲಗಲ ನಿಖಿಲೇಷ್ಟವಿತರಣ |
ಶೀಲ ನಿರ್ಮಲವಾರಣಾಜಿನ |
ಚೇಲ ಭವಭಯಹರಣಕೌಶಲ ಭೂತಿಸಿತಫಾಲಾ ||೨||

ನೆಲಸಿ ಕಪಿಲಾತೀರದಲಿ ತೊಳ |
ತೊಳಗುವಾ ಶ್ರೀಪುರದೆ ಭಕ್ತಾ |
ವಳಿಯಭೀಷ್ಟವನೆಲ್ಲ ನೆನೆದಾಕ್ಷಣದೆ ಕೈಗೊಳಿಸಿ ||
ಕಳೆದು ಭಜಿಪರ ದುಷ್ಕೃತಂಗಳ |
ನಿಳೆಯ ಕೈಗಾಯ್ವೊಡೆಯ ಪೊರೆ ನೀ |
ನೊಲಿದು ಗಿರಿಕೋದಂಡ ಧೃತಶಶಿಖಂಡ ನಂಜುಂಡ ||೩||

ಶ್ರೀಮಹಾಬಲಶೈಲವಾಸಿನಿ |
ಸೋಮಧರಶುದ್ಧಾಂತಭಾಮಿನಿ |
ಕಾಮಸಂಜೀವಿನಿ ಮೃಡಾನಿ ಗಣೇಶಗುಹಜನನೀ ||
ವಾಮದೇವವಿಲಾಸಿನೀ ಸು |
ಪ್ರೇಮಪೂರಿತಹೃದ್ಭವಾನೀ |
ಸಾಮಜೋತ್ತಮಗಾಮಿನೀ ಕೃಪೆದೋರಿ ಪಾಲಿಸು ನೀ ||೪||

ಲಲಿತೆ ತುಹಿನಗಿರೀಂದ್ರಜಾತೇ |
ವಿಲಸದಿಂದುಕಳಾವಿರಾಜಿತೆ |
ಜಲಜಸನ್ನಿಭನೇತ್ರಶೋಭಿತೆ ವಿಬುಧರಾಜಿಹಿತೇ ||
ಬಲವದಮರಾರಾತಿಮಂಡಲ |
ದಳನಕಾರ್ಯಖ್ಯಾತೆ ಪೂತೇ |
ಸಲಹುವುದು ನಮ್ಮಿಷ್ಟಸಿದ್ಧಿಯ ಕರುಣಿಸುತೆ ಮಾತೇ ||೫||

ಎಳಸಿದರ್ಥವನೆಲ್ಲವನು ಕೈ |
ಗೊಳಿಪ ವಾರಣವದನ ವಿಬುಧೋ |
ಜ್ಜ್ವಲಕಿರೀಟಮತಲ್ಲಿಕಾಮಣಿಭಾಸಿತಾಂಘ್ರಿಯುಗ ||
ಲಲಿತೆಯೊಲ್ಮೆಯ ತನಯ ಬಹುದಯ |
ಸಲಿಸು ನಿರ್ವಿಘ್ನತೆಯನೆನ್ನೊಳ |
ಗಲಸಿಕೆಯ ಸುಳಿವಿಲ್ಲದಂತಿರೆ ನೀನನುಗ್ರಹಿಸೈ ||೬||

ವಾಣಿ ವೀಣಾಪಾಣಿ ಪನ್ನಗ |
ವೇಣಿ ನತಗೀರ್ವಾಣಿ ಸುಗುಣ |
ಶ್ರೇಣಿ ಬೊಮ್ಮನರಾಣಿ ಮಂಗಳಸರಣಿ ಕಲ್ಯಾಣಿ ||
ಜಾಣತನದೊಳಗಾಣವಾದೊಡ |
ಮೂಣಯವು ಬಳಿಸಾರದಂತಿರ |
ಲೇಣಲೋಚನೆ ನಲಿದು ನರ್ತಿಸು ನನ್ನ ನಾಲಗೆಯೊಳ್ ||೭||

ರಾಗರಹಿತರುದಾರರುರೆ ಶೈ |
ವಾಗಮಾಂಬುಜಭಾಸ್ಕರರು ಶರ |
ಣಾಗತಾವನನಿಪುಣರಾದ್ಯರ್ ಹೃದ್ಯರನವದ್ಯರ್ ||
ಆಗಳುಂ ಶುಭವಿಭವಸಂತತಿ |
ಯಾಗೆ ಮೆರೆವಿಕೃತಿಗೆ ಕರುಣಾ |
ಸಾಗರರು ಲಸದಾರ್ಯಪಂಚಾಚಾರ್ಯಗುರುವರ್ಯರ್ ||೮||

ಪುದಿದ ತೃಷ್ಣಾವಾರಿಭರಿತದ |
ಮದನವಾತೋದ್ಧೂತಬಹುಮೋ |
ಹದ ತರಂಗದ ಸುಳಿವಭಾರ್ಯಾವರ್ತದಳಲಿಸುವಾ ||
ಅದಯತನಯುಸಹೋದರಗ್ರಾ |
ಹದ ಭವದ ಸಾಗರದೆ ಮುಳುಮುಳು |
ಗಿದರ ಭೈತ್ರರು ಪೊರೆಗೆ ಪಂಚಾಚಾರ್ಯಗುರುವರ್ಯರ್ ||೯||

ಓಡೆ ಹೃದಯದೆ ಕವಿದ ಕತ್ತಲೆ |
ಕೂಡೆ ಮತಿಯದು ಮುಕ್ತಿಪಥವನು |
ನಾಡೆ ಶಿವತತ್ತ್ವಪ್ರಸಂಗದ ಭಾಗ್ಯ ಕೈಗೂಡೇ ||
ಬೇಡಿದರಿಗಿಷ್ಟಾರ್ಥತತಿಯನು |
ನೀಡುತಂತೇವಾಸಿಗಳ ಕಾ |
ಪಾಡುವಾ ಶ್ರೀರೇಣುಕನು ದಯೆಮಾಳ್ಕೆ ಮಂಗಳವ ||೧೦||

ಆರ ಪೆಸರನು ನುಡಿದ ಮಾತ್ರದೆ |
ದೂರ ಸರಿವುದೊ ಪೂರ್ವಕೃತಬಹು |
ಘೋರಪಾತಕರಾಶಿಯಾರ ಪದಾಬ್ಜಸೇವನೆಯಿಂ ||
ತೋರುವಾ ಪರಶಿವನ ದಯೆ ಕೈ |
ಸೇರುವುದೊ ಸೊಗವೇರುವುದೊ ಮೈ |
ದೋರುವುದೊ ಕಲ್ಯಾಣವಾ ಗುರುವರ್ಯಗಿದೆ ಮಣಿವೆಂ ||೧೧||

ಧರೆಯೊಳೊಪ್ಪುವ ನಾಗನೂರಿನ |
ವರಬೃಹನ್ಮಠಪೀಠದಧಿಪತಿ |
ಯರಿದರಗ್ರಣಿಯತ್ಯುದಾರಿ ನಿತಾಂತಸುಗುಣಯುತಂ ||
ಸರಳಹೃದಯಂ ಭೂರಿವಿನಯಂ |
ಸರಸಕವಿಜನಸುಪ್ರಿಯಂ ಸಲೆ |
ಮೆರೆವನಲ್ತೆ ಮನೀಷಿ ಕಾಶೀನಾಥಶಾಸ್ತ್ರಿವರಂ ||೧೨||

ಶೈವಮತವನು ಜಗದೆ ಮೆರೆಯಿಸ |
ಲಾವಗಮುಮುಜ್ಜುಗಿಸಿ ಬಗೆಯುಲಿ |
ರೇವಣನ ಪದಪಂಕಜಾತವನೊಲಿದು ಜಾನಿಸುತೇ ||
ಪಾವನಗ್ರಂಥಾಳಿಯನು ಸ |
ದ್ಭಾವದಲಿ ಬರೆಯಿಸುತೆ ಬರೆಯುತೆ |
ಸೇವೆಯೆಸಗುವ ಸುಕೃತಿ ಕಾಶೀನಾಥಶಾಸ್ತ್ರಿವರಂ ||೧೩||

ಪರಶಿವನ ತತ್ತ್ವಾರ್ಥಗಳ ಬಿ |
ತ್ತರಿಸುವುದ್ಗ್ರಂಥಗಳನೇಕವ |
ನಿರದೆ ನೈಜಗ್ರಂಥಮಾಲೆಯ ಸಂಪುಟಂಗಳಲಿ ||
ಹರಿಸದಿಂ ಪ್ರಕಟಿಸುತೆ ನಾಡೊಳು |
ದೊರೆವಡೆದ ಗುರುಮೂರ್ತಿಯಲೆ ಭಾ |
ಸುರನಿಜಾಮಲಕೀರ್ತಿ ಕಾಶೀನಾಥಶಾಸ್ತ್ರಿವರಂ ||೧೪||

ಖ್ಯಾತನೀತಂ ಬ್ರಹ್ಮಚರ್ಯದೆ |
ಪೂತಚರಿತಂ ಗುರುಕಟಾಕ್ಷಸೋ |
ಪೇತನುದ್ಭಶರೀರ ತೇಜೋರಾಶಿಸುವಿಲಸಿತಂ ||
ವೀತರಾಗಂ ವೀರಶೈವ |
ಪ್ರೀತಿಪರನೀಗುರುಚರಿತ್ರಮ |
ನೋತುಪೇಳೆನಲಾಯ್ತು ಗುರುರೇಣುಕಪುರಾಣವಿದು ||೧೫||

ಆ ನವಾಂಬುದಮಾಲೆಗನುಕೂ |
ಲಾನಿಲಂ ಸಂಘಟಿಸುತಾಯ್ಕನ |
ನೂನವೃಷ್ಟಿಯದೊದಗಿ ಬೆಳಸುಗಳಿಂದಲಿಳೆ ತಣಿವೋಲ್ ||
ಈ ನಯಜ್ಞೋತ್ಸಾಹಬಲದಸ |
ಮಾನಕಾವ್ಯಾಮೃತವಿದಿಳೆಗೊಸ |
ದರ್* ನಿಖಿಲಶಿವಶರಣಜಾಲಕೆ ಮುಕ್ತಿಫಲವಿಗಾಗುಂ ||೧೬||

ಮನವೊಲಿದು ಕರ್ಣಾಟರಾಜ್ಯವ |
ನನಿಶಮುಂ ಧರ್ಮದಲಿ ರಕ್ಷಿಪ |
ಜನಪ ನಾಲ್ವಡಿಕೃಷ್ಣಭೂಮಿಶ್ವರನ ಸಂಮುಖದೇ ||
ವಿನುತಯದುಭವವಂಶಚರಿತವ |
ನನುವಿನುಲ್ಲೇಖಿಸಿದ ಸತ್ಕವಿ |
ಜನದೊಳಾದ್ಯಂ ಗರಪುರಶ್ರೀಕಂಠಶಾಸ್ತ್ರಿಯೆ ನಾಂ ||೧೭||

ಅರರೆ ನೀರಡಿಸಿರ್ಪ ಮನುಜನು |
ನಿರುಕಿಸುತೆ ಮೃಗತೃಷ್ಣೆಯನು ಬಾ |
ಯ್ದೆರೆವವೋಲ್ ಬಡತನದೆ ಬಳಲುವ ಕವಿಗಳಲಿ ಕೆಲಬರ್ ||
ಸಿರಿಗೆಳಸುತುಣದುಡದ ಪೆರರಿ |
ತ್ತರೆಯು ನಿರುಕಿಸಿ ಸ್ತೈರಿಸಿದ ಲು |
ಬ್ಧರ ನೆರೆದು ಪಲ್ಗಿರಿದು ಬರಿದೇ ಪದ್ಯವನು ಪಠಿಪರ್ ||೧೮||

* ಈ ಗುರುತು ಶಿಥಿಲದ್ವಿತ್ವವನ್ನು ಸೂಚಿಸುವುದು.

ಸರಸಕರ್ಣಾಟಕದ ಸೊಗಸಿನ |
ಪರಿಯ ಬಲ್ಲರು ಕಾವ್ಯಪದ್ಧತಿ |
ಪರಿಣತರು ವರವೀರಶೈವಸುಧೀಂದ್ರರೀಕೃತಿಯಂ ||
ಹರಿಸದಲಿ ಕೈಗೊಂಬರಲೆ ಶಿವ |
ಶರಣರಿಹಪರವೆರಡುಮಿದರಿಂ |
ದೊರೆಯದಿರದೆನಗೆಂದು ಬಗೆದಾನೊರೆದೆನೀಕೃತಿಯಂ ||೧೯||

ಮುನ್ನ ಕವಿಮುಖಮುಕುರನೆನಿಸಿದ |
ಪೊನ್ನನಂತಿರೆ ಜಾಣ್ಮೆಯದು ತಾ |
ನೆನ್ನೊಳಿಲ್ಲವು ರನ್ನನಂತಿರೆ ಸೊಗಸು ನುಡಿಯಿಲ್ಲಂ ||
ಸನ್ನುತನ ಸಿರಿಪಂಪನಂತಿರ |
ಲುನ್ನತಿಕೆಯೆನ್ನೊಳಗೆ ಕಾಣಿಸ |
ದಿನ್ನಿಹುದು ನನಗೊಂದೆ ಬಗೆವೊಡೆ ಗುರುಕಟಾಕ್ಷಬಲಂ ||೨೦||

ಓದುವರ್ಗಿಂಪೆನಿಸಿ ತೋರುವು |
ದಾದವಾಲಿಪ ರಸಿಕವೃಂದಕೆ |
ಮೋದವಂ ಬೀರುವುದು ಮುಂದಿಗೆ ರೂಢಿಯಾಗಿಹುದು ||
ಕೋದಮುತ್ತಿನ ಸರದವೋಲ್ ಸಕ |
ಲಾದರಕ್ಕೆಡೆಯಾಗಿ ಮೆರೆದಪು |
ದಾದಕಾರಣ ಭಾಮಿನೀಷಟ್ಪದಿಯೊಳಾನೊರೆದೆಂ ||೨೧||

ಕವಿಚಮತ್ಕೃತಿ ಲಸದಲಂಕೃತಿ |
ನವರಸಂಗಳ ಹೃದ್ಯಸಂತತಿ |
ವಿವಿಧವಿಷಯಸ್ಥಿತಿ ಮಹೋನ್ನತಿಗಿದೆನೆ ನಿಜವಸತಿ ||
ಶಿವಕಥಾಮೃತನಿಯತಿ ಭವ್ಯೋ |
ತ್ಸವಸುನೀತಿಯರೀತಿಯಿಾಕೃತಿ |
ಯವಿರತಂ ಶಿವಶರಣಪದ್ಧತಿಯಿಂದೆ ಶಿವತಾತೀ ||೨೨||

ಇದು ಸಮಸ್ತಸುರೌಘವಂದಿತ |
ಪದಯುಗನ ರೇಣುಕಗಣೇಶನ |
ಸದಮಲಪ್ರಾಭವವನಭಿವರ್ಣಿಸುವ ಪುಣ್ಯಕಥೆ ||
ಇದನು ಬರೆದೋದುವ ಸುಧೀಂದ್ರರಿ |
ಗೊದಗುವುದು ಸಕಲೇಷ್ಟಸಿದ್ಧಿಗ |
ಳುದಯಿಸುವುವಾನಂದಶುಭವಿಭವಂಗಳತಿಶಯದೇ ||೨೩||

ಕಾವ್ಯಮಿದು ಬಗೆಯಲ್ಕೆ ಬುಧಜನ |
ಸೇವ್ಯಮಿಾ ಕನ್ನಡದ ನಾಡಿಗೆ |
ಭವ್ಯಮೊಪ್ಪುವ ಗುರುಕಥಾಮೃತದಿಂದೆ ಜಗಕೆಲ್ಲಂ ||
ಶ್ರಾವ್ಯಮದ್ಭುತಮಹಿಮೆಯಿಂದಲಿ |
ದಿವ್ಯಮೆನಿಸಿರ್ದಪುದು ಭರದಿಂ |
ದವ್ಯವಸ್ಥಿತಚಿತ್ತರನು ಶಾಂತಾತ್ಮರನೆ ಮಾಳ್ಕುಂ ||೨೪||

ಮೆರೆವ ಪುರಶರಭೋಗದೋಷಾ |
ಕರರ ಸಂಖ್ಯೆಯ ಶಾಲಿವಾಹನ |
ಸುರುಚಿರಶ್ರೀಮತ್ಪ್ರಮೋದಾಹ್ವಯದ ವತ್ಸರದೇ ||
ಪರಮಗುರುವಿನನುಗ್ರಹವು ನೆರೆ |
ದೊರೆಕೊಳಲು ವಿರಚಿತಮಿದಾದುದು |
ಶರಣಮಂಗಳವೀಧಿ ರೇಣುಕಸಂಕಥಾಶರಧೀ ||೨೫||

ಭೂವಿನುತಮೆನಿಸಿರ್ಕೆ ಕಾವ್ಯಮಿ |
ದಾವಗಂ ಶಿವಭಕ್ತಪರಸ |
ದ್ಭಾವುಕರ ನುಣ್ಗೊರಲೊಳಾಚಂದ್ರಾರ್ಕಮೆಸೆದಿರ್ಕೇ ||
ಶೈವಸಿದ್ಧಾಂತಾಗಮದ ಸುಧೆ |
ತೀವುತೆಲ್ಲರ ಬಗೆಯ ತಣಿಸುಗೆ |
ಕಾವುದೆಳೆವೆರೆದಲೆಯ ಗರಪುರದೊಡೆಯ ಕಣ್ಣಡಿಯ ||೨೬||

ಆಕುಟಿಲರ ಮನಮೆಚ್ಚ ಭಾವಿಸೆ |
ಸುಕೃತಿಯುಮ್ಮಹದಚ್ಚ ಶಾತ್ರವ |
ನಿಕರದೆದೆಯನು ಭೋಂಕೆನಲು ಸುಟ್ಟುರಿಪ ತನಿಗಿಚ್ಚ ||
ಕುಕವಿಕದಳಿಗೆ ಮಚ್ಚ ಶಿವನಿಂ |
ದಕರ ನಾಲಗೆ ಚುಚ್ಚ ಮೇಣಿದು |
ಸಕಲಗುಣಸಂಬಂಧಿ ಸೊಗಯಿಪ ಪೀಠಿಕಾಸಂಧಿ ||೨೭||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಎರಡನೆಯ ಸಂಧಿ.

ಸೂ|| ಶ್ರೀಮಹಾಕೈಲಾಸಗಿರಿಯೊಳು |
ಮಾಮನೋಹರ ಶೈವಧರ್ಮವ |
ನೀ ಮಹಿಗೆ ಬಿತ್ತರಿಸೆ ಕಳುಪಿದನೊಲಿದು ರೇಣುಕನಂ ||

ತೊಳಗುತಿಹ ಪದಿನಾಲ್ಕು ಲೋಕಂ |
ಗಳಿಗೆ ತಾನಾಧಾರಮೆನಿಸು |
ತ್ತಳೆಯೆ ಮೂವತ್ತೆರಡುಕೋಟಿಯ ಯೋಜನಂಬರೆಗಂ ||
ಬಳಸಿದಗಳಿಂ ಸೊಗಯಿಸುತೆ ಬಾಂ |
ದಳವ ಸೋಂಕುವ ಪಾಗರದೆ ಬಗೆ |
ಗೊಳಿಸುತಿರ್ಪುದು ಮೇರುಗಿರಿ ಯೋಗೀಂದ್ರಸುಖಲಹರೀ ||೧||

ಸುರರ ದನುಜರ ಸಿದ್ಧಸಾಧ್ಯರ |
ಗರುಡಗಂಧರ್ವೋರಗರ ಕಿ |
ನ್ನರರ ಚಾರಣರುರಗರಾವಳಿಯಿಂದೆ ಬಗೆಗೊಳಿಪಾ ||
ಗಿರಿಯ ಶೋಭೆಯನಳವೆ ಬಣ್ಣಿಸೆ |
ನರಗೆ ಭಾವಿಸಲಾದಿಶೇಷಂ |
ಗರಿದೆನಲು ಸೊಗಯಿಸಿತು ಮೇರುಮಹೀಧ್ರಮತಿಭದ್ರಂ ||೨||

ಇಂತೆಸೆವ ಮೇರುವಿನ ಮಧ್ಯದೆ |
ಶಾಂತಿಗಾಶ್ರಯುವೆನಿಸಿ ಗೌರೀ |
ಕಾಂತಸುವಿಲಾಸಾಸ್ಪದವು ಮೆರೆದಿಹುದು ಕೈಲಾಸಂ ||
ಸಂತತವು ಶಿವಲೀನವಿಮಲ |
ಸ್ವಾಂತರನುಪಮಭಕ್ತಿಭರಿತರ |
ನಂತರಾಶ್ರಿತಸುಪಥರಲ್ಲೆಸೆದಿರ್ಪರಾ ಪ್ರಮಥರ್ ||೩||

ಆ ಗಿರಿಯು ನಾಲ್ದಿಸೆಗೆ ಸೊಗಯಿಪ |
ಬಾಗಿಲಾಗಿರೆ ನಾಲ್ಕುನಿಗಮಂ |
ಜಾಗರೂಕನು ವೇತ್ರವನು ತಳೆದೈದೆ ನಂದೀಶಂ ||
ಬೀಗಿ ಮೂಡಣ ಬಾಗಿಲಲಿ ನಿಂ |
ದಾಗಳುಂ ನಲ್ಗಾ ಪುಗೈವನು |
ಭೋಗಿಭೂಷಣಪಾವನಾಜ್ಞಾಪಾಲನೌತ್ಸುಕ್ಯಂ ||೪||

ಭಂಡದಕ್ಷನ ಶಿರವ ಖಡ್ಗದೆ |
ಖಂಡಿಸುತೆ ತನ್ಮಖವ ಕೆಡಿಸಿದ |
ಚಂಡಕೋಪನು ವೀರಭದ್ರನು ಸಕಲಗುಣಸಾಂದ್ರ ||
ಮಂಡಿಸಿರ್ಪನು ಭಕ್ತರಕ್ಷಣ |
ಪಂಡಿತನು ದೋರ್ದಂಡಜಿತರಿಪು |
ಮಂಡಲನು ದಕ್ಷಿಣದೆ ರಂಜಿಪ ಬಾಗಿಲೊಳಗೆಂದುಂ ||೫||

ಸಂದ ಪಡುವಣದೆಸೆಯ ಬಾಗಿಲೊ |
ಳೆಂದುಮಾಶ್ರಿತವತ್ಸಲನು ನೆಲೆ |
ನಿಂದು ಪೆಂಪಿಂ ಕಾಪುಗೈವನು ವಿಮಲತರಭಾವಂ ||
ಚೆಂದದಿಂದಲಿ ನೀಲಲೋಹಿತ |
ನೆಂದು ದೊರೆವಡೆದಿರ್ಪ ನಿತ್ಯಾ |
ನಂದನಖಿಲಾಭೀಷ್ಟದಾನೋನ್ನಿದ್ರನಾ ರುದ್ರಂ ||೬||

ಉತ್ತರದ ಪೆರ್ಬಾಗಿಲೊಳ್ ಪ್ರಮ |
ಥೋತ್ತಮನು ಭೂತೇಶಶರಣಾ |
ಯತ್ತಚಿತ್ತನು ಮೆರೆದಿಹನು ನಲವಿಂ ಮಹಾಕಾಲಂ ||
ಎತ್ತನೋಡಿದೊಡತ್ತ ನಿಗಮವ |
ಬಿತ್ತರಿಪ ಬಹುನಿರ್ಮಲಾತ್ಮಕ |
ರೊತ್ತಿ ಬರುತಿಹರಾ ವಿಲಾಸವನೇನ ವರ್ಣಿಪೆ ನಾಂ ||೭||

ಮೆರೆಯುವೀ ಕೈಲಾಸದೊಳ್ ಪ್ರ |
ಸ್ಫುರಿತರತ್ನಸ್ತಂಭರಾಜಿಯೊ |
ಳುರೆ ಹರಿನ್ಮಣಿಮಯದ ಬೋದಿಗೆಯೊಪ್ಪಲಲ್ಲಿಸೆವಾ ||
ಹರಿಗಳಾಸ್ಯದೆ ಜೋಲ್ವ ಮುತ್ತಿನ |
ಸರಗಳಿಂ ಪರಿಶೋಭಿಸುವ ಭಾ |
ಸುರದ ಮಂಟಪವೊಂದು ಕೌತುಕಮುಣ್ಮಿಸುತ್ತಿರ್ಕುಂ ||೮||

ವಾಸುಕಿಯೆ ಚೆಲ್ವಾಂತನಾಳವು |
ಕೇಸರವು ವಿದ್ಯಾಧಿದೇವಿಯ |
ರಾಸುಧಾಂಶುದಿವಾಕರರ್ಕಳನೇಳಿಪಾದ್ಯುತಿಯಿಂ ||
ಭಾಸಿಪಷ್ಟದಳಾಂಬುಜಾತಮ |
ದಾಸನವು ತಾನಾಗೆ ವರಕೈ |
ಲಾಸದಧಿಪತಿ ಮೆರೆದನದರಲಿ ಸದಯನುಮೆಯೊಡೆಯಂ ||೯||

ತೊಳಗುವಾ ಕುಮುದಾಪ್ತದೀಪ್ತಿಯ |
ಪಳಿವ ಬಹುರಮಣೀಯಮಾದಾ |
ಬೆಳುಗೊಡೆಯುನಾಮ್ನಾಯತತಿಜನಯಿತ್ರಿ ಸಾವಿತ್ರಿ ||
ತಳೆದು ನಿಂದಿರೆ ಶಂಕರನು ಬಗೆ |
ಗೊಳಿಸುತಿರ್ಪನು ವಿನಮದಮರಾ |
ವಳಿಸುಖಪ್ರದನೊಪ್ಪುವೊಡ್ಡೋಲಗದೊಳತಿಮುದದಿಂ ||೧೦||

ಗಂಗೆಯುಂ ದ್ವಿಜರಾಜನುಂ ಸಲೆ |
ಕಂಗೊಳಿಸೆ ನಿಜಶಿರದೆ ಫಣಿಪತಿ |
ಯಂಗದೊಳ್ತೊಡವೆನಿಸೆ ಸೂರ್ಯಹಿಮಾಂಶುಶಿಖಿಗಳೆ ತಾವ್ ||
ಕಂಗಳಾಗಿರೆ ತಳೆದು ನಿಜವಾ |
ಮಾಂಗದಲಿ ಗಿರಿಭವೆಯ ಪಂಚಮು |
ಖಂಗಳಿಂ ಪರಮೇಶನೊಪ್ಪಿದನಾಶ್ರಿತಾಳಿವಶಂ ||೧೧||

ಚಾರುಸದ್ಯೋಜಾತವಾಮಾ |
ಘೋರತತ್ಪುರುಷೋಲ್ಲಸದ್ಗಂ |
ಭೀರ ಪರಮೇಶಾನವೆಂಬಾ ಪಂಚಮುಖಗಳಲಿ ||
ವೀರಶೈವಮನೋಜ್ಞಕುಲಮಂ |
ದಾರನಾನತಸಾದರನು ಧಾ |
ತ್ರೀರಥನು ಮೆರೆದಿರ್ದನಗಜಾನಾಥನಮಲಕಥಂ ||೧೨||

ಸನಕಮುಖಯೋಗೀಂದ್ರಜಾಲ |
ಕ್ಕನಿಶಮುಂ ಮೃದೋರಿ ಭಕ್ತರ |
ನನಘರನು ಮಾಡುತ್ತೆ ಗಜಚರ್ಮಾಂಬರವ ಧರಿಸಿ ||
ತನುವಿನಲಿ ಭಸ್ಮತ್ರಿಪುಂಡ್ರವು |
ಮಿನುಗುತಿರೆ ನಿಜಮಂದಹಾಸದ |
ಲನುವರಿದು ಪದಿನಾಲ್ಕು ಲೋಕವ ಕಾವ ಶಿವನೆಸೆದಂ ||೧೩||

ನೀರಜಾಸನಮುಖ್ಯನಿರ್ಜರ |
ವಾರಮುದು ಭಯಭಕ್ತಿಯಿಂದಲಿ |
ಸಾರಿ ಕೈಗಳನೆತ್ತಿ ಮುಗಿಯುತೆ ಶರ್ವ ಸರ್ವಜ್ಞ ||
ತೋರು ನಮ್ಮಲಿ ದಯುವ ಲಸದೋಂ |
ಕಾರರೂಪ ಎನುತ್ತೆ ನುತಿಸಲು |
ಗೌರಿಯೊಡನಾಲಿಸುತೆ ನಸುನಗುತೆಸೆದನಸವಾಕ್ಷಂ ||೧೪||

ಒಂದೆಡೆಯೊಳೊಪ್ಪಿರೆ ವಿನಾಯಕ |
ನೊಂದೆಡೆಯೊಳೊಪ್ಪಿರೆ ಮೃಡಾನಿಯ |
ನಂದನನು ನಿಗಮೋಕ್ತಿಗಳ ಪಠಿಸುತಲಿ ಮುಂಗಡೆಯೊಳ್ ||
ನಂದಿಭೃಂಗಿಗಳೊಪ್ಪೆ ನಲವಿಂ |
ವಂದಿಸಿದ ನಿಜಭಕ್ತನಿಕರಕ |
ಮಂದಸೌಭಾಗ್ಯಂಗಳನು ದಯೆಗೈವ ಶಿವನೆಸೆದಂ ||೧೫||

ಆರ ಸಂದರ್ಶನವನೆಳಸುತ |
ನಾರತಂ ಪಂಚಾಗ್ನಿಮಧ್ಯದೆ |
ಪಾರಿಕಾಂಕ್ಷಿಗಳೈದೆ ತಪವಮಾಚರಿಸುತಿರ್ದಪರೋ ||
ಆರ ಪೆಸರಿಂ ಮುಕ್ತಿವಲ್ಲರಿ |
ಬೀರುವುದೊ ಬಹುಫಲವಿತಾನವ |
ನಾ ರವೀಂದುವಿಲೋಚನಂ ಶ್ರೀಕಂಠನೆಸೆದಿರ್ದಂ ||೧೬||

ಜಲಜವನು ಶಂಖವನು ಗದೆಯನು |
ತೊಳಪ ಚಕ್ರವನಾತ್ಮಕರತಳ |
ದೊಳಗೆ ಮೇಣ್ ಶ್ರೀವತ್ಸಕೌಸ್ತುಭಗಳನು ವಕ್ಷದಲಿ ||
ತಳೆದು ಪಂಚಾಕ್ಷರಸುಮಂತ್ರವ |
ನೊಲವಿನುಚ್ಚರಿಸುತ್ತಲೊಪ್ಪಿದ |
ನಲೆ ಸರೋರುಹಮಂದಿರಾಧವನಭವನೋಲಗದೆ ||೧೭||

ಆರ್ಯರೇಣುಕದಾರುಕರು ಗುರು |
ವರ್ಯಘಂಟಾಕರ್ಣರೆಸೆವಾ |
ಚಾರ್ಯರಾ ವರಧೇನುಕರ್ಣಸುವಿಶ್ವಕರ್ಣಾಖ್ಯರ್ ||
ಸೂರ್ಯನನು ತನುದೀಪ್ತಿಯಿಂದೆ ಕ |
ದರ್ಯನನು ವಿರಚಿಸುತೆ ಮೆರೆದಿಹ |
ರಾರ್ಯೆಯಾಳ್ದನ ಸಭೆಯೊಳಾತನ ಪಂಚವಕ್ತ್ರಭವರ್ ||೧೮||

ಚೆಲುವಿಗಿಂಬೆನಿಸಿರ್ಪ ಮೇನಕೆ |
ಸುಲಲಿತಾಂಗದ ರಂಭೆ ಸೊಗಯಿಪ |
ಸೆಳೆನಡುವಿನೂರ್ವಶಿ ಮನೋಹರೆಯಾ ತಿಲೋತ್ತಮೆ ಮೇಣ್ ||
ಸುಳಿಗುರುಳಲಂಬುಸೆ ವಿಲಾಸದಿ |
ಸುಳಿದು ನರ್ತಿಸಲಚ್ಚರಸೆಯ |
ರ್ಗಳಕದಂಬದಿ ಕಣ್ಗೆವಂದುದು ಗಿರಿಶನಾಸ್ಥಾನಂ ||೧೯||

ಪರಿಪರಿಯ ಬಿನದಂಗಳನು ಶಂ |
ಕರನಭೀಕ್ಷಿಸಿ ತುಷ್ಟನಾಗುತೆ |
ಗಿರಿಜೆಗೆಲ್ಲವ ತೋರುತಲಿ ಕಣ್ಸನ್ನೆಯಿಂದಾಗಳ್ ||
ಪರಮಪಂಚಾಚಾರ್ಯಬೃಂದದೆ |
ಕರಮೆಸೆವ ರೇಣುಕಗಣಾಧೀ |
ಶ್ವರನ ಕರೆದನು ತನ್ನ ಬಳಿಗಾ ಭಕ್ತವತ್ಸಲನು ||೨೦||

ಮಾತೆಯನು ಕಂಡೊಡನೆ ಮಕ್ಕಳ |
ದೇತೆರದೆ ಪರಿದೋಡಿ ಬರುವರೊ |
ಚಾತಕವು ವಾರಿದವ ಕಂಡೊಡನೆಂತು ಸಾರ್ತಹುದೋ ||
ದಾತನನು ಕಂಡೊಡನೆ ಬಡವನ |
ದೇತೆರದೆ ಬಳಿಗೈದುವನೊ ಮೇ |
ಣಾತೆರದೆ ನಲಿಯುತಲಿ ರೇಣುಕನೈದಿದನು ಶಿವನಂ ||೨೧||

ಬಂದ ರೇಣುಕನನು ಗಿರೀಶನು |
ಕಂದ ಬಾ ಕೈವಲ್ಯವಲ್ಲಿಯ |
ಕಂದ ಬಾ ಮದ್ಭಕ್ತಪಿಕಮಾಕಂದ ಬಾರಿತ್ತ ||
ಎಂದು ತಲೆದಡಹುತ್ತೆ ಪರಮಾ |
ನಂದದಲಿ ಘನತರದ ಕಾರ್ಯವ |
ನೊಂದನುಸಿರುವೆ ಮಾಳ್ಪುದದನೀನೆಂದನಿಂದುಧರಂ ||೨೨||

ಕಂದಲಾಲಿಸು ಶೈವಧರ್ಮಕೆ |
ಕುಂದು ಬಂದಿಹುದೈದೆ ಧಾತ್ರಿಯೊ |
ಳಿಂದು ನಾಸ್ತಿಕಹತಕರಕಟಾ ಸೊಕ್ಕುತಾಸ್ತಿಕರಂ ||
ದಂದುಗಕ್ಕೆಡೆಮಾಡಿ ನೋಯಿಸು |
ವಂದವನು ಸೊಲ್ಲಿಸುವುದರಿದದ |
ರಿಂದ ಧರ್ಮೋದ್ಧರಣಮೆಸಗುವುದಲ್ತೆ ಕರ್ತವ್ಯಂ ||೨೩||

ವಸುಧೆ ದುಷ್ಕರ ಭಾರವನು ಸೈ |
ರಿಸಲರಿಯದತಿಶೋಕದಲಿ ಕಂ |
ಪಿಸುತಲಿರ್ದಪಳೆನ್ನ ಭಕ್ತರು ಮರೆಯಲಡಗಿಹರು ||
ಭಸಿತರುದ್ರಾಕ್ಷಪ್ರಭಾವವ |
ನಸುತಿಳಿಯದವಿವೇಕಿವಿಸರವು |
ಘಸಣಿಗೊಳಿಪುದು ವೀರಶೈವರನೇನ ಪೇಳುವೆ ನಾಂ ||೨೪||

ಇದ ನಿವಾರಿಸೆ ಕಾಣೆ ನೀನ |
ಲ್ಲದೆ ಸಮರ್ಥರನನ್ಯರನು ಕೇ |
ಳದರಿನಾಣತಿಯಿಾವೆನೀಗಳ್ ಪ್ರಮಥವರ ಕುವರಾ ||
ಮುದದೆ ಭೂಲೋಕಕ್ಕೆ ಸಾರುತೆ |
ಪದುಳದಲಿ ಮಾಡುವುದು ನಾ ನುಡಿ |
ದುದನು ಧರ್ಮವನುದ್ಧರಿಪ್ಪುದು ಕುಂದುಬಾರದವೋಲ್ ||೨೫||

ಭೂಮಿಯೊಳಗೊಪ್ಪಿರ್ಪುದಲ್ತೆ ಮ |
ಹಾಮಹಿಮೆಗಾಧಾರ ಸುಜನ |
ಪ್ರೇಮಧಾಮವು ರಮ್ಯಜಂಬೂದ್ವೀಪಮಂತದರಾ ||
ಸೀಮೆಯಲ್ಲಿ* ತ್ರಿಲಿಂಗಮೆಂಬಾ |
ನಾಮದಿಂ ನಾಡೊಂದು ಮೆರೆವುದು |
ರಾಮಣೀಯಕ ಕೊಲ್ಲಿಪಾಕಿಕ್ಷೇತ್ರಮಲ್ಲೆಸೆಗುಂ ||೨೬||

ಅತಿಶಯಪ್ರೇಮಾಸ್ಪದವು ನನ |
ಗತುಳವಿಭವಾಧಾರಮಾರಯೆ |
ಕೃತಸುಕರ್ಮರಿಗೆಸೆವ ಪುಣ್ಯಕ್ಷೇತ್ರಮತಿಚಿತ್ರಂ ||
ಸತತಮುಂ ಸೋಮೇಶನಾಮದೆ |
ಪತಿಕರಿಸಿ ಭಕ್ತಾಳಿಯನು ಕಾ |
ಯುತಲಿಹೆನು ವರಲಿಂಗರೂಪದೊಳಾಪ್ರದೇಶದೆ ನಾಂ ||೨೭||

ಕವಿವುದಜ್ಞಾನಾಂಧಕಾರವು |
ವಿವಿಧಕಾಯಕ್ಲೇಶಮಡಸುವು |
ದವನಿಯೊಳಗಾ ಪಾಂಚಭೌತಿಕದೇಹಿಗಳ್ಗದರಿಂ ||
ಬವಣೆಗೊಳ್ಳದೆ ನೆಟ್ಟನಾವಿ |
ರ್ಭವಿಸು ಸೋಮೇಶ್ವರನ ಲಿಂಗದೆ |
ಸವನಿಪುದು ಗಡ ನಿನಗಗಣ್ಯಂ ನನ್ನ ಕಾರುಣ್ಯಂ ||೨೮||

ಚರಿಸುವುದು ನೀಂ ಸಪ್ತಶತವ |
ತ್ಸರದ ಪರ್ಯಂತಾರಿಗುಂ ಗೋ |
ಚರಿಸದಿಳೆಯಲಿ ಬಳಿಯಮೇಳ್ನೂರಬ್ದಮೆಲ್ಲೆಡೆಯೊಳ್ |
ಚರಿಸಿ ಶಿವಸಿದ್ಧಾಂತವನು ಬಿ |
ತ್ತರಿಸಿ ವರಶಿವಮಂತ್ರಬೀಜವ |
ನಿರದೆ ಮದ್ವರಭಕ್ತಹೃದಯಕ್ಷೇತ್ರದಲಿ ಬಿತ್ತೈ ||೨೯||

ಪಾವನದ ಲಿಂಗಾಂಗಸಮರಸ |
ಭಾವವನು ಭೂತಲಕೆ ಬೋಧಿಸಿ |
ಶೈವಸೂತ್ರಂಗಳಿಗೆ ಭಾಷ್ಯಾದಿಗಳ ರಚಿಸುತಲಿ ||
ಭೂವಿನುತಮದ್ಭಕ್ತರಂಗದೆ |
ತಾವೊಲವಿನಿಂ ಲಿಂಗಧಾರಣ |
ಗೈವತೆರನೆಸಗುತ್ತೆ ಕೀರ್ತಿಧ್ವಜವನೇರಿಪುದೈ ||೩೦||

ಬೆಸಸಿದೀ ಕಾರ್ಯಗಳನೆಲ್ಲವ |
ನೆಸಗಿ ನೀಂ ಕುಂದಿಲ್ಲದಂತಿರೆ |
ವಸುಧೆಯಿಂ ಪಿಂದಿರುಗಿ ಬಾರೈ ವತ್ಸ ನನ್ನೆಡೆಗೆ ||
ಒಸೆದು ನಿನ್ನನು ಪರಸಿರುವೆನೆಂ |
ದುಸಿರ್ದು* ಕಳುಪಿದ ರೇಣುಕನ ನಾ |
ತಿಸುಳಿ ಶಶಧರಮೌಳಿ ಗರಪುರರಚಿತನಿಜಕೇಳೀ ||೩೧||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಮೂರನೆಯ ಸಂಧಿ.

ಸೂ|| ಶ್ರೀತ್ರಿಲಿಂಗದ ಕೊಲ್ಲಿಪಾಕಿ |
ಕ್ಷೇತ್ರದೊಳ್ ಶ್ರೀರೇಣುಕನು ಬಹು |
ಚಿತ್ರಮೆನೆ ಸೋಮೇಶಲಿಂಗದಿನುದಯಿಸುತ್ತೆಸೆದಂ ||

ಪ್ರವಿದಿತಾಜ ರಮೇಶ ಶಕ್ರ |
ಧ್ರುವ ದಿವಾಕರ ಕುಮುದಬಾಂಧವ |
ಭುವನಗಳ ದಾಂಟುತ್ತೆ ಗೌರೀರಮಣನಾಜ್ಞೆಯಲಿ ||
ಜವದಿ ಸಾರಿದನಲ್ತೆ ಭೂಲೋ |
ಕವನು ಸದ್ಯೋಜಾತಮುಖಸಂ |
ಭವನು ರೇಣುಕನಮಲಶಿವಸಿದ್ಧಾಂತಪಾರಗನು ||೧||

ಅಂಗವಂಗಕಳಿಂಗಕಾಶ್ಮೀ |
ರಂಗಳೆಂದು ನೆಗಳ್ತೆ ವಡೆದು |
ತ್ತುಂಗ ಸಂಪದ್ರವ್ಯಮಾದಾ ವಿವಿಧ ದೇಶಗಳ ||
ಸಿಂಗರವ ನೋಡುತ್ತೆ ಹೃದಯಕೆ |
ಸಂಗಳಿಸೆ ಸಂಮೋದ ಪವನಮು |
ನಂಗಳಾ ದ್ರುತಗತಿಯ ಮೀರುವ ಗಮನದಲಿ ಬಂದಂ ||೨||

ಬಾಳೆ ತೆಂಗು ಕವುಂಗು ನೇರಿಳೆ |
ಯೀಳೆ ದಾಡಿಮುಮಿನಿದೆನಿಪ್ಪ ರ |
ಸಾಲ ಜಂಬೀರಾದಿಫಲವೃಕ್ಷಗಳ ರಾಜಿಗಳಿಂ ||
ಮೇಲೆನಿಸುವುದ್ಯಾನವನಗಳ |
ಸಾಲಿನಿಂ ಮೆರೆವಾ ತ್ರಿಲಿಂಗವಿ |
ಶಾಲವಿಭವವ ಕಂಡು ರೇಣುಕನಾಂತನತಿಮುದವಂ ||೩||

ಬಿರಿದ ತನಿವಣ್ಣಳ ಸುಧಾರಸ |
ಝುರಿಯು ಪರಿಕಾಲ್ಪರಿಯಲೆತ್ತಂ |
ಭರದೆ ಬಳ್ವೆಳಸಾಂತು ತೊಳಗುವ ಶಾಲಿವನತತಿಯಿಂ ||
ಪರಿಪರಿಯ ಮೃಗಪಕ್ಷಿಗಣದಿಂ |
ಮೆರೆವ ತದ್ದೇಶವನಭೀಕ್ಷಿಸಿ |
ಗುರುವರೇಣ್ಯನು ಕೊಲ್ಲಿಪಾಕಿಯ ಪೊಕ್ಕನತಿಮುದದಿಂ ||೪||

ಎಲ್ಲಿ ನೋಡಿದೊಡಲ್ಲಿ ತರುಲತೆ |
ಯೆಲ್ಲಿ ನೋಡಿದೊಡಲ್ಲಿ ಸರಲತೆ |
ಯೆಲ್ಲಿ ನೋಡಿದೊಡಲ್ಲಿ ವಿಮಲತೆಯೊಪ್ಪುವಾಸ್ತಿಕತೆ ||
ಎಲ್ಲಿ ನೋಡಿದೊಡಲ್ಲಿ ಶಿವಕತೆ |
ಯಿಲ್ಲದಿಲ್ಲದನೇನವರ್ಣಿಪೆ |
ಕೊಲ್ಲಿಪಾಕಿಯ ವೈಭವವ ಶಿವಶರಣರುತ್ಸವವ ||೫||

ಭೂರಿಮಹಿಮಾಸ್ಪದಗಳೆನಿಸುತೆ |
ತೋರುವಖಿಲಕ್ಷೇತ್ರಜಾಲವ |
ವಿಾರಿಸಿರ್ಪೀ ಕೊಲ್ಲಿಪಾಕಿಯನೈದೆ ಮೆಚ್ಚುತಲಿ ||
ಮಾರಹರನರ್ಧಾಂಗಿವೆರಸುತೆ |
ಧಾರಿಣಿಯನುದ್ಧರಿಪ ಮನದೊಳ |
ಪಾರದಯ ಸೋಮೇಶನಾಮದೊಳಲ್ಲಿ ನೆಲಸಿಹನು ||೬||

ಬಗೆಬಗೆಯ ಬಯ್ಕೆಗಳ ಬಯಸುತೆ |
ನಗಜೆಯರಸನನಪ್ರಮೇಯನ |
ನಗಣಿತಪ್ರೇಮಾತಿರೇಕದೆ ಭಕ್ತಿವೆರಸುತಲೀ ||
ಪಗಲುಮಿರುಳುಂ ಪೂಜೆಗೈವಾ |
ವಿಗತಚಿಂತಾಭಾರರೆತ್ತಲು |
ಸೊಗಸಿನಿಂದೈತರುತಲಿರ್ದರು ಶಿವನ ಮಂದಿರಕೆ ||೭||

ಕರಮೆಸೆವ ನೊಸಲಲ್ಲಿ ಚೆಂದದೆ |
ಧರಿಸುತಲಿ ಭಸ್ಮತ್ರಿಪುಂಡ್ರವ |
ಕೊರಲೊಳಗೆ ರುದ್ರಾಕ್ಷಮಾಲೆಯನಾಂತು ಸಂತಸದೇ ||
ಹರಹರಾ ಮಾದೇವ ಶಂಭೋ |
ಪರಮಮೋಕ್ಷಪ್ರದ ಶಿವಾಧವ |
ಪೊರೆವುದೆಂದ್ಯೈತರುತಲಿರ್ದುದು ಯೋಗಿಸಂದೋಹಂ ||೮||

ಚಾರುಪಾಶುಪತಾಗಮಾಂತ |
ಸ್ಸಾರವನು ತಿಳಿದಿರ್ಪ ಪಂಚಾ |
ಚಾರನಿರತರೆನಿಪ್ಪ ಶೈವದ್ವಿಜರ ಸಂದೋಹಂ ||
ಭೂರಿಪರಿತೋಷದಲಿ ಜಗದಾ |
ಧಾರನನು ಭಕ್ತೌಘಕರುಣಾ |
ಸಾರನನು ನುತಿಸಲಿಕೆ ಸಾರ್ತರುತಿರ್ದುದೊಗ್ಗಿನಲಿ ||೯||

ತೊಳಗುವಾ ಸೋಮೇಶನಾಲಯ |
ಕೊಲಿದು ಚಾತುರ್ವರ್ಣ್ಯಮುಂ ನಲಿ |
ನಲಿದು ಸಾರ್ತಂದ್ಯೆದೆ ಭಕ್ತಿಯೊಳರ್ಚಿಸುತ್ತಿರೆ ಮೇಣ್ ||
ಪಲವಗೆಯ ಫಲಪುಷ್ಪತತಿಯನು |
ತಳೆದು ತಳದೊಳಗಾದಿತೇಯರ |
ಲಲನೆಯರವೋಲ್ ಬರುತಲಿರ್ದರು ಕುಲವಧೂಟಿಯರು ||೧೦||

ಓರೆ ನೋಟದ ಸೊಬಗಸಿರಿಯನು |
ಬೀರುತಿರ್ಪಕ್ಕದಲಿ ಮೇಲುದು |
ಜಾರೆ ನಸುನಗೆ ನಾಣ್ಬೆಡಂಗುಗಳೊಮ್ಮೆ ತಲೆದೋರೇ ||
ಸೋರುಮುಡಿಯಾಭರವ ಸೈರಿಸ |
ಲಾರದಾಯಸವಡುವ ಸೊಬಗಿನ |
ವಾರನಾರಿಯರಲ್ಲಿ ದುರಿತವ ಕಳೆಯೆ ಬರುತಿಹರು ||೧೧||

ಏರುಜವ್ವನೆಯರು ವಿದಗ್ಧೆಯ |
ರಾರಯಲು ಮುಗ್ಧೆಯರು ಮೋಹಾ |
ಕಾರೆಯರು ಚದುರೆಯರು ಚಪಲೆಯರಂದಗಾತಿಯರು ||
ನೀರೆಯರು ಬಡನಡುವಿನುರುವೈ |
ಯಾರಿಯರು ಸರಿವಿಂಡಿಯರು ಶೃಂ |
ಗಾರರಸಲಹರಿಯರು ಪಲಬರು ಸಾರ್ತರುತ್ತಿಹರು ||೧೨||

ಪರಿಮಳದ ಪರಿಪರಿಯ ಪೂಗಳ |
ಸರವ ವಿರಚಿಸಿ ಜಾಣ್ಮೆಯಿಂದಲಿ |
ಬರುವ ಯುವಕರ ದಿಟ್ಟಿಯನು ತಲೆವಾಗಿಲೊಳೆ ಸೆಳೆದು ||
ಸರಸವಚನದೊಳವರ ಬಗೆಯನು |
ಬೆರಗಿನಿಂ ಸೆರೆವಿಡಿದು ಪಣವನು |
ತೆರಿಪ ನಕ್ಕರೆ ಮುನಿವರೆಸೆದರು ಮಾಲೆಗಾತಿಯರು ||೧೩||

ಜಾಣೆಯರು ಚೆಲುವೆಯರು ಬೆಡಗಿಯ |
ರೇಣನಯನೆಯರುರಗಸನ್ನಿಭ |
ವೇಣಿಯರು ಸುಮಪಾಣಿಯರು ಕಲಕೀರವಾಣಿಯರು ||
ಮಾಣದಂಗಜವೀರಹಸ್ತಕೃ |
ಪಾಣಿಯರು ಬರುತಿರ್ದರಾ ಶ |
ರ್ವಾಣಿಯಾಳ್ದನ ಸನ್ನಿಧಿಗೆ ಸರ್ವಾರ್ಥಸಾಧನಕೇ ||೧೪||

ತವಸಿಗಳು ಯೋಗಿಗಳು *ವ್ರತಿಗಳು |
ಕವಿಜನಂಗಳು ಗಾಯಕರು ವರ |
ಶಿವಕಥಾವ್ಯಾಖ್ಯಾನಪಟುಗಳು ವೇದವಿದ್ವರರು ||
ಅವನಿಪರು ಭಿಕ್ಷುಕರು ಧನಿಕರು |
ಸವನಿಸಿದ ಶಿವಭಕ್ತಿಭರದಲಿ |
ತವತವಗೆ ಮುಂಕೊಂಡು ಪೂಜಿಸುತಿರ್ದರೀಶ್ವರನಂ ||೧೫||

ಭವಪಯೋಧಿಯೊಳ್ಬಿದೆ ಬಿದ್ದನು |
ಭವಿಸಿ ವಿವಿಧಕ್ಲೇಶಜಾಲವ |
ಶಿವನೆ ಗತಿಯೆಮಗೆಂದು ಕಡೆಯಲಿ ತಿಳಿದು ಪರಿತಂದು ||
ಶಿವನ ರೂಪವ ಕಂಡು ದಣಿಯರು |
ಶಿವನ ಪೂಜೆಯ ಮಾಡಿ ದಣಿಯರು |
ಶಿವನ ಸಾನ್ನಿಧ್ಯವನು ತೊರೆಯರು ಸುಕೃತಶಾಲಿಗಳು ||೧೬||

ವೇದಘೋಷಣವೆಸೆವ ಭೇರೀ |
ನಾದವಾನಿಸ್ಸಾಳನಿಸ್ವನ |
ವೈದೆ ಪರಶಿವನಾಮಸಂಕೀರ್ತನದ ಬಲುಘೋಷ ||
ವಾದದಲಿ ಶಿವತತ್ತ್ವಸುಧೆಯನು |
ಸಾದರದೆ ಕಿವಿದಣಿಯೆ ಪೀರುತೆ |
ಮೋದವಡುವ ಮುಮುಕ್ಷುಗಳ ಜಯರವವು ರಂಜಿಸಿತು ||೧೭||

ಕೆಲರು ಸುಮಗಳಿನರ್ಚಿಸುತ್ತಿರೆ |
ಕೆಲರು ಚಂದನದಿಂದಲರ್ಚಿಸೆ |
ಕೆಲರು ಧೂಪಸುದೀಪಮಾಲೆಯನರ್ಪಿಸುತ್ತಿರೆ ಮೇಣ್ ||
ಕೆಲರು ಷಡ್ರಸದನ್ನಪಾನಂ |
ಗಳಸಮರ್ಪಿಸಿ ನುತಿಸುತಿರಲಾ |
ಗಳೆ ನಭಃಸ್ಥಲದಿಂದೆ ಕೇಳಿಸಿತೊಂದು ಮಧುರರವಂ ||೧೮||

ಇಂದು ಭೂಮೀತಲದೊಳಾಸ್ತಿಕ |
ವೃಂದಕೈತಂದಿರ್ಪ ಮಿಗಿಲಹ |
ದಂದುಗವ ಪರಿಹರಿಸಿ ಶಿವಮತತತ್ತ್ವಸಾರವನು ||
ಚೆಂದದಲಿ ಧರೆಗರುಹಿ ಮಂದಿಯ |
ಸಂದೆಗವ ಪರಿಹರಿಸಿ ಕಾಪಿಡು |
ವಂದಮಂ ಕಾಂಬಿರೆಲೆ ಶರಣರೆ ಎಂದುದಾ ನಿನದ ||೧೯||

ಹರನ ಸದ್ಯೋಜಾತಮುಖದವ |
ತರಿಸಿ ರೇಣುಕನಾಮದಲಿ ತ |
ಚ್ಚರಣಸೇವೆಯನೆಸಗುತಿರ್ಪ ಪ್ರಮಥಗಣನಾಥಂ ||
ಪರಮಶಿವಧರ್ಮವನು ನೆರೆ ಬಿ |
ತ್ತರಿಸಿ ಶೈವರ ಸಲಹಲೆಂದವ |
ತರಿಪನೀ ಸೋಮೇಶಲಿಂಗದೊಳೆಂದುದಾ ವಾಣಿ ||೨೦||

ಪ್ರಮಥವರ್ಯನ ರೇಣುಕನ ಮುಖ |
ಕಮಲವನು ಕಣ್ಣಾರೆ ನಿರುಕಿಸು |
ವಮಿತಭಾಗ್ಯವು ಲಭಿಪುದೀಗಳ್ ಶಿವನು ಮೆಚ್ಚಿಹನು ||
ಕುಮತವಾದಿಧ್ವಾಂತರಾಶಿ |
ದ್ಯುಮಣಿಯುದಯಿಪನೆಂಬ ನಲ್ನುಡಿ |
ಯಮರ್ದು*ಮಳೆಗರೆದತ್ತು ತಾರಾಪಥದಿನಿಳೆ ನಲಿಯೇ ||೨೧||

ನೆರೆದ ಭಕ್ತಸಮೂಹಮಾಲಿಸಿ |
ಬೆರಗುಗೊಂಡರೆಮುಚ್ಚಿ ಕಂಗಳ |
ಹರಹರಾ ಮಾದೇವ ಶಂಭೋ ಸಾಂಬ ಸರ್ವಜ್ಞ ||
ಪೊರೆವುದೆಂದತಿಭಕ್ತಿಯಲಿ ಬಿಡ |
ದೆರಗಿ ಪೊಗಳೆ ಮನೋಜ್ಞಮೋಹನ |
ಕರದಿವಾಕರಕೋಟಿದೀಪ್ತಿಯ ಮೂರ್ತಿ ರಂಜಿಸಿತು ||೨೨||

ಅಮರದುಂದುಭಿಮೊಳಗುತಿರಲಾ |
ಸುಮನಸರು ಸುಮವೃಷ್ಟಿಗರೆಯಲು |
ವಿಮಲಶಿವಪದಶರಣರೆಸಗಿದ ತಪವು ಫಲವೊಂದೇ ||
ಪ್ರಮಥನಾಥನ ಬೆಸನನೊಡರಿಸ |
ಲಮುಮ ರೇಣುಕಗಣಪನಿಳೆಸಂ |
ಭ್ರಮಿಸಲಾವಿರ್ಭವಿಸಿದನು ಸೋಮೇಶಲಿಂಗದಿ ತಾಂ ||೨೩||



ಶ್ರೀ ರೇಣುಕಾಚಾರ್ಯರು ಕೊಲ್ಲಿಪಾಕಿಯ ಶ್ರೀ ಸೋಮನಾಥ
ಲಿಂಗದಿಂದ ಅವತರಿಸುವುದು.

ತಿಳಿಗೊಳಂಗಳು ತಿಳಿದುವಾ ಮೆ |
ಲ್ಲೆಲರು ತೀಡಿತು ಶೈತ್ಯಸೌರಭ |
ಮಿಳಿತಮೆನೆ ದಿಕ್ತಟಗಳೆಲ್ಲವು ನಾಡೆ ಬೆಳಗಿದುವು ||
ತೊಳಗಿತಾಗಸಮುಮಲತೆಯನಾಂ |
ತಿಳೆಯೊಳೆತ್ತಂ ಶಾಂತಿಸುಖಗಳು |
ನೆಲಸಿದುವು ನರ್ತಿಸಿದರಮರಾಂಗನೆಯರತಿಮುದದಿಂ ||೨೪||

ಪಸುರುಡೆಯುದನುವಿಂದೆ ಬಗೆಗೊಳೆ |
ನೊಸಲ ಕಿಡಿಗಣ್ಮರೆಯೆ ಸುತ್ತಿದ |
ಪೊಸಜಡೆಯ ಬಂಬಲ್ವಿರಾಜಿಸಲುತ್ತಮಾಂಗದಲಿ ||
ಭಸಿತಲಸಮಾನತ್ರಿಪುಂಡ್ರಮು |
ದಸದೃಶದ ಸೊಬಗೀಯೆ ಕೈಯೊಳ |
ಗೆಸೆಯೆ ದಂಡವು ರೇಣುಕನು ಸೊಗಯಿಸಿದನೀಪ್ಸಿತದಂ ||೨೫||

ದುರಿತವಿಟಪಿಲವಿತ್ರನುಜ್ವಲ |
ಪರಮಮಂಗಳಗಾತ್ರನಾಶ್ರಿತ |
ಭರಣ ಸುವಿದಿತನೈಜಸದ್ಗುಣರಮ್ಯಚಾರಿತ್ರಂ ||
ಶರಣಜನಶತಪತ್ರಮಿತ್ರಂ |
ದರಹಸಿತಸಂಶೋಭಿವಕ್ತ್ರಂ |
ಮೆರೆದನಲೆ ರೇಣುಕಗಣೇಶ್ವರನಖಿಲನುತಿಪಾತ್ರಂ ||೨೬||

ಶರದದಾ ಪೊಸಜೊನ್ನವೋ ನಿ |
ರ್ಭರಸುಧಾರಸಝರಿಯೊ ಮೋಕ್ಷಾಂ |
ಕುರದ ಸೊಂಪಿನಲಂಪೊಯೆನುತಚ್ಚರಿಯನುಣ್ಮಿಸುತೇ ||
ಪರಮತೇಜಃಪುಂಜನಿನಿನಗೆ |
ವೆರಸು ನುಡಿದನು ಭಕ್ತವರ್ಯರೊ |
ಳರಿಯುಮೆಯ ತೊಲಗಿಸುತೆ ರೇಣುಕನಖಿಲಗಣತಿಲಕಂ ||೨೭||

ಆಲಿಸುವುದೆಲೆ ಭಕ್ತವರ್ಯರೆ |
ನೀಲಕಂಧರನೊಲವು ನಿಮ್ಮಲಿ |
ಮೇಳಿಸಿರ್ಪುದು ಬಂದೆನದರಿಂದಾತನಾಣತಿಯಿಂ ||
ತಾಳಿ ತಲೆಯೊಳು ಜಗದೆ ಶಿವಮತ |
ದೇಳಿಗೆಯು ಮೆರೆಯುವುದು ಶರಣರ |
ಜಾಲವಾಂಪುದು ಮುಕ್ತಿಸಂಪತ್ಸುಖವನಿನ್ನೆಂದ ||೨೮||

ಮಾಡುವುದು ಶಿವಪೂಜೆಯನು ಸಲೆ |
ಪಾಡುವುದು ಶಿವನಾಮವನು ಕೊಂ |
ಡಾಡುವುದು ಶಿವಭಕ್ತಿಭರಿತಸ್ವಾಂತಸಂತತಿಯಂ ||
ಸೂಡುವುದು ಶಿವಮಾಲ್ಯವನು ಮಾ |
ತಾಡುವುದು ಶಿವತತ್ತ್ವವಿದರಲಿ |
ನೀಡುವುದು ಶಿವಯೋಗಿಗಳ್ಗಿದೆ ಧರ್ಮ ತಾನೆಂದಂ ||೨೯||

ಉತ್ತಮಾಂಗದೆ ಲಿಂಗವನು ತಳೆ |
ಯುತ್ತೆ ಮಂತ್ರಪವಿತ್ರಭಸ್ಮವ |
ಮೆತ್ತಿ ಮೆಯ್ಯೊಳು ವಿಮಲಪಂಚಾಕ್ಷರಿಯ ಜಪಿಸುತಲಿ ||
ಮತ್ತೆ ಮೆರೆವ ಶಿವಾಗಮೋಪನಿ |
ಷತ್ತುಗಳ ಪುರುಳರಿದು ಭಕ್ತಿಯ |
ಬಿತ್ತರಿಪುದಲೆ ಧರ್ಮಕರ್ಮವು ಮರ್ಮವಿದೆಯೆಂದಂ ||೩೦||

ಇಂತಿಹರು ಭೂತಲದೆ ವಿರಳರ |
ನಂತಸದ್ಗುಣಯುತರು ವಿದ್ಯಾ |
ವಂತನನುಪಮಯೋಗವಂತನಗಸ್ತ್ಯಮುನಿವರನು ||
ಕಂತುಹರನನು ಕಾಂಬ ತವಕವ |
ನಾಂತು ದೆಸೆಗಳನೀಕ್ಷಿಸುತ್ತಿಹ |
ನಿಂತಳುವದಾಯೆಡೆಗೆ ತೆರಳುವೆನೆಂದು ಮೈಗರೆದಂ ||೩೧||

ಜಯ ಜಯ ಶ್ರೀರೇಣುಕಾ ಜಯ |
ಜಯ ಶಿವಾಗಮತತ್ತ್ವಬೋಧಕ |
ಜಯ ಭವಾಂಬುಧಿನೌಕ ನತತತಿಪುಣ್ಯಪರಿಪಾಕಾ ||
ಜಯ ಜಯ ಪ್ರಮಥಾಧಿನಾಯಕ |
ಜಯ ಜಯೆಂದುಗ್ಗಡಿಸಿ ಭಕ್ತನಿ |
ಚಯಮುದಲ್ಲಿಂ ಗರಪುರೇಶನ ನೆನೆದು ಮರಳಿದುದು ||೩೨||

ಇದೆ ಲಿಂಗೋದ್ಭವಚರಿತ್ರಮು |
ನಾದರದಿನಿದ ಕೇಳುವರು ಬಿಡ |
ದೋದುವರು ಮೇಲೆನಿಸಿ ಸಕಲೇಷ್ಟಾರ್ಥವೊಂದುವರು ||
ಆ ದಯಾನಿಧಿ ರೇಣುಕಂ ಸ್ಥಿರ |
ಮಾದ ಭಾಗ್ಯಾರೋಗ್ಯಸಂತತಿ |
ಮೋದವನು ಪೂರ್ಣಾಯುವನು ಭಕ್ತರಿಗೆ ಕರುಣಿಪನು ||೩೩||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ನಾಲ್ಕನೆಯ ಸಂಧಿ.

ಸೂ|| ರಾಜಿಸುವ ಮಲಯಾದ್ರಿಯಲಿ ಶಿವ |
ಪೂಜೆಯೆಸಗುತ್ತಿರ್ದಗಸ್ತ್ಯನೊ |
ಳಾ ಜಗದ್ಗುರು ಶೈವತತ್ತ್ವವನೊಲ್ದು ಬಣ್ಣಿಸಿದಂ ||

ಕ್ರೂರಸಿಂಹ ವ್ಯಾಘ್ರ ಜಂಬುಕ |
ಘೋರ ಭಲ್ಲೂಕಾದಿಮೃಗಪರಿ |
ವಾರದಿಂದತ್ಯುಗ್ರಮೆನಿಸಿದ ವೃಕವರಾಹಗಳಿಂ ||
ವಾರಣಂಗಳಿನೈದೆ ಪಿಕಶುಕ |
ಶಾರಿಕಾದಿವಿಹಂಗಕುಲಸುವಿ |
ಹಾರನಿಲಯಂ ಮಲಯಮೆಸೆದುದು ದಕ್ಷಿಣಾಶೆಯಲಿ ||೧||

ತಾಲ ಕುರವಕ ಕುಟಜ ಬಿಲ್ವ ತ |
ಮಾಲ ಚಂದನ ಕೇತಕೀ ಹಿಂ |
ತಾಲ ಜಂಬೂ ಪನಸ ಮುಖ್ಯಾನೇಕವಿಟಪಿಗಳಾ ||
ಜಾಲದಿಂ ಬಗೆಗೊಳುತೆ ರವಿಕಿರ |
ಣಾಳಿಗೆಡೆಗುಡದಿರ್ಪ ಮಲಯಮ |
ಶೈಲದಾ ರಮಣೀಯತೆಯನಾನೇನ ವರ್ಣಿಪೆನು ||೨||

ಕುಸುಮಗಳ ತನಿಗಂಪು ಸಲೆಸೊಗ |
ಯಿಸುವ ಲತೆಗಳ ಸೊಂಪು ಬರ್ಹಿಣ |
ವಿಸರಕಲರವದಿಂಪು ಧಾತುವಿಶೇಷಗಳ ಪೆಂಪು ||
ಶ್ವಸನನಲಿತದಲಂಪು ತೊಳಗುವ |
ಪಸಲೆಗಳ ಬಲುತಂಪು ಮಿಗೆಭಾ |
ಸಿಸುವ ನಿಗಮವ ಪಠಿಪ ಮುನಿಗಳ ಗುಂಪು ರಾಜಿಸಿತು ||೩||

ಕೆಲರೆಲರನಾಹಾರಮೆಸಗುತೆ |
ಕೆಲರು ಜಲವಾಹಾರಮೆಸಗುತೆ |
ಕೆಲರೆಲೆಯನಾಹಾರಮೆಸಗುತೆ ಮಿಕ್ಕ ಕೆಲಕೆಲರು ||
ಗೆಳಸುಗಳನಾಹಾರಮೆಸಗುತೆ |
ಕೆಲರು ಫಲವಾಹಾರಮೆಸಗುತೆ |
ನಲಿದು ತಪವಾಚರಿಸುತಿರ್ದರು ಪಾರಿಕಾಂಕ್ಷಿಗಳು ||೪||

ನಿಂದು ಪಂಚಾಗ್ನಿಗಳ ಮಧ್ಯದೊ |
ಳಿಂದುಧರನನು ಜಾನಿಪರು ಕೆಲ |
ರೊಂದೆ ಕಾಲೊಳು ನಿಂದು ತಪವಾಚರಿಪರಿಂಕೆಲರು ||
ಗೊಂದೆವಳವಿಗೆಯನ ಸಮರ್ಚನೆ |
ಯಿಂದೆ ನಿದ್ರಾಹಾರಮುಳಿದಾ |
ನಂದವಡುವರು ಕೆಲರು ಮಲಯಾದ್ರಿಯಲಿ ತಾಪಸರು ||೫||

ಬಿಸಿಲಬೇಗೆಯ ಸಹಿಸಲಾರದೆ |
ಬಸವಳಿದ ಪಾವುಗಳ ಮರಿಗಳ |
ನೊಸೆದು ಪಿಂಛದ ನೆಳಲ ಕವಿಯಿಸಿ ಕಾವ ನವಿಲುಗಳಾ ||
ವಿಸರಮುಂ ಹರಿಶಾಬಕವ ಲಾ |
ಲಿಸುತೆ ಮೊಲೆಯುಣಿಸೀವ ಕರಿಣಿಯು |
ಮೆಸೆದುವೇವರ್ಣಿಸುವೆ ಮಲಯಾದ್ರಿಯ ತಪೋವನದೆ ||೬||

ಮಿಂದು ನೀರಲಿ ನಾರುಡೆಯ ನಲ |
ವಿಂದೆ ಧರಿಸುತೆ ಮೈಗೆ ಭಸ್ಮವ |
ಚೆಂದದಲಿ ತೊಡೆಯುತ್ತೆ ಶಿವನಾಮಗಳ ಪಾಡುತಲಿ ||
ಕಂದಮೂಲವ ದರ್ಭೆಗಳನರ |
ವಿಂದಮುಖಸುಮರಾಜಿಗಳ ತಿರಿ |
ತಂದು ಗುರುಗಳಿಗರ್ಪಿಸುವ ಸಚ್ಛಿಷ್ಯರೊಪ್ಪಿದರು ||೭||

ಮೃಗಶಿಶುವಿಗೆಳೆವುಲ್ಲನೀವರು |
ನಿಗಮುಗಳನೊಲವಿಂದೆ ಪಠಿಪರು |
ಬಗೆಬಗೆಯ ಶಾಸ್ತ್ರಾರ್ಥಸಾರವನೈದೆ ಕೇಳುವರು ||
ತಗದ ತರ್ಕ್ಕದ ನಿರ್ಣಯಿಸುವರು |
ಸುಗತಿದುರ್ಗತಿಕಾರಣಂಗಳ |
ಬಗೆದು ಶಿವದೀಕ್ಷೆಯನೆ ಕೊಂಬರು ಶಿಷ್ಯರೊಪ್ಪಿದರು ||೮||

ಇಂತೆಸೆವ ಶಿಷ್ಯಾಳಿವೆರಸುತೆ |
ಶಾಂತನಿರ್ಮಲಚಿತ್ತನಗಜಾ |
ಕಾಂತಪೂಜಾಸಕ್ತನೆಸೆದನಗಸ್ತ್ಯಮುನಿವರನು ||
ದಾಂತಸಂತತಿವಿನುತ ಸದ್ಗುಣ |
ವಂತನದ್ಭುತಮಹಿಮೆಗಾಗರ |
ನೋಂತರಲಿ ಮೊದಲಿಗನು ಕುಶಲನು ಕುಂಭಸಂಭವನು ||೯||

ವನಜಭವನವೊಲಮಮ ಚತುರಾ |
ನನನುಮೂವರನಂತೆ ಸರ್ವ |
ಜ್ಞನು ರಮೇಶನ ತೆರದೆ ಪುರುಷೋತ್ತಮನು ಭಾವಿಸಲು ||
ದಿನಪನಂತಿರೆ ಮಿತ್ರನೇವೊರೆ |
ವೆನು ಮಹಾಮಹಿಮಾನ್ವಿತನನಾ |
ತನನೆಸೆವ ಶಶಿಯಂತೆ ಜೈವಾತೃಕನು ಮುನಿವರನು ||೧೦||

ಧಾರಿಣೀಧರವೃಂದದೆಸೆವಾ |
ಮೇರುಪರ್ವತದಂತೆ ಮದಿಸಿದ |
ವಾರಣಂಗಳ ಕುಲದೊಳೈರಾವತವದೆಂತಂತೆ ||
ತೋರುವಾ ಗ್ರಹನಿಕರದೊಪ್ಪುವ |
ಸೂರನಂತೆ ವಿರಾಜಿಸುವ ಗಂ |
ಭೀರ ಮುನಿಯಿಂತುಸಿರ್ದ*ನಂತೇವಾಸಿಗಳ್ಗೊಲವಿಂ ||೧೧||

ಇದೆ ಬರುತ್ತಿಹನಿತ್ತಲೀಕ್ಷಿಸಿ |
ಸದಯನೆಮ್ಮತಪಃಫಲೋದಯ |
ನೊದವಿದುದು ವಾಚಂಯಮಾವಳಿಗಿಂದು ಭಾಗ್ಯಚಯಂ ||
ವೊದಳ್ದ*ಮೃತ್ಯುಂಜಯಬಹುಪ್ರಿಯ |
ನಿದೆ ಇದೇ ರೇಣುಕಸಮಾಹ್ವಯ |
ವಿದಿತನಖಿಲಾಮ್ನಾಯಕಾಶ್ರಯ ಮೂರ್ತಿರಮಣೀಯಂ ||೧೨||

ಕಾಣುತಾಸ್ತಿಕಧರ್ಮಕೊದವಿ |
ಪೂರ್ಣಯವ ಕಾರುಣ್ಯದಿಂದಂ |
ಕ್ಷೋಣಿಗುಪದೇಶಿಸಲು ಧರ್ಮವನಾ ಮಹೇಶ್ವರನು ||
ರೇಣುಕನ ಕಳುಹಿರ್ಪನಿಂದಿದೆ |
ಜಾಣನೈತರುತಿರ್ಪನೀಶ್ವರ |
ನಾಣತಿಯಿನಜ್ಞಾನತಿಮಿರವು ತೊಲಗಿ ಬೆಳಗಕ್ಕುಂ ||೧೩||

ಈತನಲೆ ಕೈಲಾಸದೊಳಗಾ |
ಭೂತನಾಥನ ವಿಮಲಸದ್ಯೋ |
ಜಾತಮುಖದವತರಿಸಿದಾತಂ ಸದ್ಗುಣೋಪೇತಂ ||
ಈತನಲೆ ದುಷ್ಕರ್ಮತೂಲಕೆ |
ವಾತನೀತನೆ ಶೈವಮತಜಲ |
ಜಾತಕುಲದಿನನಾಥನತಿವಿಖ್ಯಾತನುದ್ಗೀತಂ ||೧೪||

ಬೌದ್ಧಚಾರ್ವಾಕಾದಿನಿಗಮವಿ |
ರುದ್ಧಮತಗಳ ಖಂಡಿಸುತ್ತೆ ಜ |
ಗದ್ಧಿತವನೆಳಸುತಲಿ ಬಂದಪನಲ್ತೆ ಶಿವಮತವಂ ||
ಉದ್ಧರಿಸಿ ಭವಪಾಶದಿಂದಲಿ |
ಬದ್ಧರಾದರನೊಲಿದು ಕಾವ ಸ |
ಮೃದ್ಧವಿಭವಂ ಪೂರ್ಣಕರುಣಾಭಾವನೀ ದೇವಂ ||೧೫||

ಕೊಲ್ಲಿಪಾಕಿಕ್ಷೇತ್ರದೆಡೆಯಲಿ |
ಸಲ್ಲಲಿತಸೋಮೇಶಲಿಂಗದಿ |
ಮೆಲ್ಲನವತರಿಸುತ್ತೆ ಜಗಕಾ ಬ್ರಹ್ಮತತ್ತ್ವವನು ||
ಸೊಲ್ಲಿಸುತೆ ಶಿವಸಂಕಥಾನವ |
ವಲ್ಲರಿಯುದೆಲ್ಲೆಡೆಯೊಳುಂ ಸಲೆ |
ಪಲ್ಲವಿಸಿ ಬಗೆಗೊಳ್ವತೆರನನು ನೆಗಳೆ ಬಂದನಿವಂ ||೧೬||

ನಿಲಿಸಿ ದಹರಾಕಾಶದಲಿ ನಾ |
ವೊಲಿದದಾವಜ್ಯೋತಿಯಂ ಬೆಳ |
ಬೆಳಗುವಾ ಶಿವನಾಮದಲಿ ಜಾನಿಸುತಲಿರ್ದೆವೊ ಮೇಣ್ ||
ತಳೆದು ಯೋಗಪುವಾಕೃತಿಯನೀ |
ಗಳದುವೇ ವೈದೋರಿತೀಪರಿ |
ಯುಳಿದು ಚಂದ್ರಧರತ್ವಮುಖ್ಯಾಶೇಷಚಿಹ್ನೆಗಳ ||೧೭||

ಭಳಿರೆ ನಾವಲೆ ಪರಮಧನ್ಯರು |
ಭಳಿರೆ ನಾವಲೆ ಪರಮಮಾನ್ಯರು |
ಭಳಿರೆ ನಾವಲೆ ಪರಮಸುಕೃತಿಗಳೀ ಧರಾತಲದೆ ||
ಆಲಸದಾವೀ ಯೋಗಪುರುಷಗೆ |
ಸಲಿಸಿ ಪೂಜೆಯ ಭಕ್ತಿಯಿಂದಲಿ |
ನಲವಡಿಸಿ ನಮ್ಮಿಷ್ಟಸಿದ್ಧಿಯನಾಂತು ನಲಿನಲಿವಾ ||೧೮||

ಎನುತೆ ತವಸಿಗಳೊಡನೆ ಸೊಲ್ಲಿಸು |
ವನಿತರಲಿ ನಭದತ್ತಣಿಂದಂ |
ಘನಮಹಿಮ ರೇಣುಕಗಣಾಧಿಪನುರ್ವಿಗಿಳಿತರಲು ||
ಮನದೆ ಮೂಡಿದ ಹರ್ಷದಿಂದಲಿ |
ಮುನಿಪನಿದಿರೆದ್ದಾ ಮಹಾತ್ಮನ |
ನನುನಯದಿ ನುಡಿಸುತ್ತೆ ಕರಲಾಘವವ ತಾನಿತ್ತ ||೧೯||

ಸಡಗರದಿ ನೆಲೆವನೆಗೆ ಕರೆದು |
ಯ್ದೊಡನೆ ದರ್ಭಾಸನವನಿತ್ತಾ |
ಗಡೆ ಸಮರ್ಪಿಸುತರ್ಘ್ಯಪಾದ್ಯಾದಿಗಳ ಬಲವಂದು ||
ಪೊಡಮಡಲು ತವಸಿಗಳ ಸಂದಣಿ |
ಯೊಡನೆ ರೇಣುಕನಿಂತು ನುಡಿದನು |
ನಡೆವುದೇಂ ಕುಂದಿಲ್ಲದಂತಿರೆ ನಿಮ್ಮ ತಪಮೆನುತಂ ||೨೦||

ವ್ರತನಿಯಮದಾಚರಣೆ ನಿರ್ವಿ |
ಘ್ನತೆಯನಾಂತೊಪ್ಪಿರುವುದೇಂ ನಿ |
ಚ್ಚ್ಮತಿಥಿಪೂಜಾಕಾರ್ಯಮೆಡರಿಲ್ಲದೆ ವಿರಾಜಿಪುದೇಂ ||
ಶ್ರುತಿಸುಪಾಠಪ್ರವಚನಂಗಳ |
ನತಿವಿಧೇಯತೆಯಿಂದೆ ಶಿಷ್ಯ |
ಪ್ರತತಿ ನಡೆಯಿಸುತಿರ್ಪುದೇಂ ಶಿವಪೂಜೆ ಬಳೆಯುವುದೇಂ ||೨೧||

ಮೆರೆವುವೇಂ ತ್ರೇತಾಗ್ನಿ ಸುಮಫಲ |
ಭರಿತಮೇಂ ತರುನಿವಹಮುಜ್ವಲ |
ಸರಸಿಗಳ್ ತಿಳಿನೀರ ರಾಶಿಯಿನ್ನೈದೆ ಸೊಗಯಿಪುವೇಂ ||
ಪರಿಪರಿಯ ಮೃಗಪಕ್ಷಿವಿಸರವು |
ಮರಿಗಳೊಡವೆರೆಯುತ್ತೆ ನಲಿವುವೆ |
ವರಿವಸಿತರೇಂ ನೀವೆನುತ್ತಲಿ ಕುಶಲವನು ಕೇಳ್ದಂ ||೨೨||

ಆವುದಿರ್ಪುದು ನಿಮಗೆ ತಿಳಿಯದು |
ದೀ ವಸುಂಧರೆಯೊಳಗೆ ಭಾವಿಸೆ |
ಪಾವನರು ನೀವೀಶಸದ್ಯೋಜಾತಮುಖಭವರು ||
ದೇವ ನಿಮಗರಿದಾವುದಿರ್ಪುದು |
ನಾವು ಕುಶಲಿಗಳಲ್ತೆ ನಮ್ಮ ತ |
ಪೋವನದೆ ನೆಲಸಿರ್ಪುದೆಂದುಂ ಶಾಂತಿಸೌಭಾಗ್ಯಂ ||೨೩||

ಇಂದು ನಿಮ್ಮಯ ದರ್ಶನದೆ ನಲ |
ವೊಂದಿದೆವು ನೀವೀಯೆಡೆಗೆ ಸಾ |
ರ್ತಂದ ಕಾರಣವೇನು ನಮ್ಮೊಳು ದಯದೆ ಬೆಸಸುವುದು ||
ಎಂದಗಸ್ತ್ಯಮುನೀಂದ್ರನೊರೆಯಲು |
ಮಂದಹಾಸದೆ ರೇಣುಕನು ಮುನಿ |
ವೃಂದಪರಿವೃತನೊಡನೆ ನುಡಿದನು ಕೌತುಕವು ಬಳೆಯೆ ||೨೪||

ಏನು ಚೋದ್ಯವಿದೆಲೆ ಮುನೀಶ್ವರ |
ನೀನರಿಯದುದುಮುಂಟೆ ಜಗದೊಳ್ |
ಜ್ಞಾನದೃಷ್ಟಿಯಿನೆಲ್ಲವನು ನೀ ಬಲ್ಲೆಯದ ಬಲ್ಲೆ ||
ಸಾನುರಾಗದೆ ನಿನ್ನ ಶಿಷ್ಯವಿ |
ತಾನಮರಿಯಲಿ ನಿನ್ನ ಮೈಮೆಯ |
ಮಾನುಷಂ ಶಿವಭಕ್ತಶರಣರ ಕರ್ಣಪೀಯೂಷಂ ||೨೫||

ವಿಾರಿ ಬಳೆದಿನಶಶಿಗಳಾ ಸಂ |
ಚಾರವನು ವಿಂಧ್ಯಾದ್ರಿ ತಡೆಯಲು |
ಘೋರತಮವದು ಕವಿಯೆ ದಿವಿಜರು ನೋಯೆ ಧರೆ ಬೇಯೆ ||
ಧೀರ ನೀನದ ಮೆಟ್ಟಿ ಪೊರೆದೆಯು |
ದಾರಭಾವದೆ ಜಗವ ವಿಮಲಾ |
ಚಾರ ಕರುಣಾಸಾರ ಧರ್ಮವಿಹಾರ ಗಂಭೀರ ||೨೬||

ಕಾಮಿಸುತೆ ನಾಕಾಧಿಪತ್ಯವ |
ನಾಮದಾಂಧನು ನಹುಷ ಸುರಪನ |
ಕಾಮಿನಿಯ ಕೂಡಲ್ಕೆ ಸಪ್ತರ್ಷಿಗಳ ಪೆಗಲೇರಿ ||
ಮಾಮುಸಕದಲಿ ಸರ್ಪಸರ್ಪೆನ |
ಲಾ ಮರುಳನನು ಸರ್ಪವಾಗಿಸಿ |
ಭೂಮಿಗುರುಳಿಸಿ ಬುದ್ಧಿಗಲಿಸಿದರಾರು ನೀನಲ್ತೇ ||೨೭||

ಅಂದು ವಿಪ್ರರ ಭೋಜನದ ನೆವ |
ದಿಂದೆ ಕರೆದುಣಿಸಿಟ್ಟು ಬಳಿಯಂ |
ಕೊಂದವರ ಮಾಂಸಮನೆ ವಾತಾಪೀಲ್ವಲಾಸುರರು ||
ತಿಂದು ತೇಗುತ್ತಿರಲು ಕಂಡವ |
ರಂದವನು ಸುಟ್ಟುರಿಪಿ ತಾಪಸ |
ವೃಂದಕಾನಂದವನೊಡರ್ಚಿದರಾರು ನೀನಲ್ತೇ ||೨೮||

ತಳದೆ ಸಪ್ತಸಮುದ್ರವಾರಿಯ |
ತಳೆದು ಲೀಲಾಮಾತ್ರದಲಿ ಕುಡಿ |
ದಿಳೆಯ ಸಲಪಿದ ವೀರನಾರು ಸಮರ್ಥನೀನಲ್ತೇ ||
ಬಳಸಿ ನೋಡೆಯುಮಿಲ್ಲ ಭೂಮಿಾ |
ತಳದೆ ನಿನ್ನನು ಪೋಲ್ವ ಮಹಿಮರು |
ತಿಳಿದನುಂ ಬಲ್ಲಿದನುಮಿಾಶ್ವರಭಕ್ತನುಂ ನೀನೇ ||೨೯||

ಎಲ್ಲವನು ನೀ ಬಲ್ಲೆ ನಿನಗಳ |
ವಲ್ಲದುದು ಜಗದಲ್ಲಿ ನೋಡುವೊ |
ಡಿಲ್ಲವೊಂದುಂ ಮತ್ತೆ ಬಿತ್ತರಿಸುವೆನು ನಿನಗೀಗಳ್ ||
ಹೊಲ್ಲೆಹವ ಪರಿಹರಿಸಿ ಬಯಕೆಯ |
ಸಲ್ಲಿಪುದು ಸಲಪುವುದುಮೊಂದೇ |
ಸಲ್ಲಲಿತ ಶುಭಸದನ ಶಿವತತ್ತ್ವಾನುಸಂಧಾನ ||೩೦||

ಆರು ವರಗುರುಸತ್ಕಟಾಕ್ಷದ |
ಭೂರಿದೀಪ್ತಿಯೊಳೈದೆ ತತ್ತ್ವವಿ |
ಚಾರವನು ತಿಳಿಯುತ್ತೆ ಮುಕ್ತಿಯನೆಳಸಿ ಬಾಳ್ದಪರೋ ||
ಧಾರಿಣಿಯೊಳವರಲ್ತೆ ಧನ್ಯರು |
ತೋರುವಾ ಗುರುವಿಂದಮಧಿಕವು |
ಬೇರೆಯಾವುದುಮಿಲ್ಲಮಲ್ತೆ ಮುಮುಕ್ಷುಸಂತತಿಗೆ ||೩೧||

ಐದೆ ಯೋಗಸುಸಾಂಖ್ಯಪಾಶುಪ |
ತಾದಿಯೆನಿಸಿದ ಪಾಂಚರಾತ್ರವು |
ವೇದವುಂ ಗಡ ಜಗದೆ ಮೇಲೆನಿಸಿರ್ಪ ಪಂಚಮತಂ ||
ಐದನೆಯ ಮತದೊಳಗೆ ನುತ್ಯಮ |
ದಾದುದನಿಶಂ ಶೈವತಂತ್ರಂ |
ವೇದಮಯಸಿದ್ಧಾಂತವಿಲಸಿತಮಖಿಲಲೋಕಹಿತಂ ||೩೨||

ಆ ಮಹೋಜ್ವಲಶೈವತಂತ್ರದೆ |
ರಾಮಣೀಯಕಮೆನಿಸಿ ತೊಳಗುವ |
ವಾಮದಕ್ಷಿಣಮಿಶ್ರಸಿದ್ಧಾಂತಗಳು ನಾಲ್ಕೆನಿಕುಂ ||
ಸೋಮಶೇಖರವದನಸಮುದಿತ |
ಮಿಾ ಮಹಿಯೊಳೆಸೆವಷ್ಟವಿಂಶತಿ |
ಕಾಮಿಕಾದ್ಯಾಗಮಕೆ ತಾಯ್ವನೆ ಶೈವಸಿದ್ಧಾಂತಂ ||೩೩||

ವರಶಿವಾಗಮಸಾರವೆನಿಪೀ |
ಪರಮಸಿದ್ಧಾಂತಾಗಮದೆ ನೆರೆ |
ಮೆರೆವ ಜೀವಬ್ರಹ್ಮರೈಕ್ಯವೆನಿಪ್ಪ ಮರುವೆಸರಿಂ ||
ಸ್ಫುರಿಸುತಿಹ ಲಿಂಗಾಂಗಸಮರಸ |
ದರಿವು ಷಟ್ಸ್ಥಲದಿರವು ಸೌಖ್ಯದ |
ತೆರವು ದುರಿತನಿಧನವು ಕೈವಲ್ಯಕ್ಕೆ ಸಾಧನವೂ ||೩೪||

ಸ್ಥಲಮೆನಿಪ್ಪಾ ಬ್ರಹ್ಮಮದುವೇ |
ತಿಳಿಯಲಾ ಪರಮಾತ್ಮನವನೇ |
ಸಲುವನಧಿಕಶಿವಾಂಶದಲಿ ತಾಂ ಲಿಂಗಮೆನಿಸುತಲಿ ||
ತೊಳಗುತಂ ನ್ಯೂನಾಂಶದಲಿ ಕಂ |
ಗೊಳಿಸುವಂಗಮೆನಿಪ್ಪ ಪೆಸರಿಂ |
ವಿಲಸದೀಶನೆ ಲಿಂಗ ಜೀವನೆಯಂಗವಿದನರಿಯಾ ||೩೫||



ಶ್ರೀ ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ
ಶಿವತತ್ತ್ವೋಪದೇಶವನ್ನು ಮಾಡುವುದು.

ಲಿಂಗವಾರಯಲಿಷ್ಟಲಿಂಗಂ |
ಕಂಗೊಳಿಸುವಾ ಪ್ರಾಣಲಿಂಗಂ |
ಸಿಂಗರದ ಸಿರಿ ಭಾವಲಿಂಗಮೆನುತ್ತೆ ಮೂವಗೆಯ್ಯೆ ||
ಅಂಗಮುಂ ತ್ಯಾಗಾಂಗಮುರೆ ಭೋ |
ಗಾಂಗಮಾ ಯೋಗಾಂಗಮೆನುತೆ ಮ |
ನಂಗೊಳಿಸುವುದು ಮೂರು ಬಗೆಯಿಂದಿದರ ನೆಲೆಯರಿಯಾ ||೩೬||

ಮತ್ತೆ ರಾಜಿಸುವಿಷ್ಟಲಿಂಗದೆ |
ಬಿತ್ತರಿಪೊಡಾಚಾರಲಿಂಗವ |
ದುತ್ತಮದ ಗುರುಲಿಂಗಮೆಂಬೆರಡಾದುವಾರಯಲು ||
ಕಿತ್ತಡಿಗಳಿದನರಿದು ನಲಿನಲಿ |
ಯುತ್ತೆ ಮುಕ್ತಿಯು ಪಡೆಗೆ ಸುಖಸಂ |
ಪತ್ತಿಯೊಂದುಗೆ ಸಕಲಭಕ್ತಗ್ರಾಮಮಭಿರಾಮಂ ||೩೭||

ಆದಮೆಸೆವಾ ಪ್ರಾಣಲಿಂಗದಿ |
ನಾದುದಲೆ ಶಿವಲಿಂಗಮತಿಶಯ |
ಮಾದ ಪೆಸರಾಂತಿರ್ಪ ಜಂಗಮಲಿಂಗಮೆಂಬೆರಡುಂ ||
ಮೇದಿನಿಯೊಳಾ ಭಾವಲಿಂಗದಿ |
ನಾದುದಲೆ ರಮಣೀಯಮೆನಿಪ ಪ್ರ* |
ಸಾದಲಿಂಗವು ಮಿಗೆ ಮಹಾಲಿಂಗಂಗಳೆಂಬೆರಡುಂ ||೩೮||

ಮೆರೆಯುವಾ ತ್ಯಾಗಾಂಗದಲಿ ಧರೆ |
ಯರಿಯೆ ಭಕ್ತಮಹೇಶಮೆಂಬೀ |
ಯೆರಡುಮತಿಶಯದಾ ಪ್ರಸಾದಿಪ್ರಾಣಲಿಂಗಿಗಳು ||
ಎರಡುಮಾ ಭೋಗಾಂಗದಲಿ ಮುಂ |
ಬರಿದುವಾ ಯೋಗಾಂಗದಲಿ ನೆರೆ |
ಶರಣಮೈಕ್ಯಮೆನಿಪ್ಪುವೆರಡುಂ ನೋಡೆ ಷಟ್ಸ್ಥಲಮೈ ||೩೯||

ನಿಯತಭಕ್ತಸ್ಥಲದೆ ಭಕ್ತಿವಿ |
ಜಯ ಮಹೇಶಸ್ಥಲದೆ ಕರ್ಮ |
ಕ್ಷಯವು ಮೆರೆವ ವರಪ್ರಸಾದಿಸ್ಥಲದೆ ಶಿವನರಿವೂ ||
ನಯದೆ ಮೆರೆವಾ ಪ್ರಾಣಲಿಂಗ್ಯಾ |
ಹ್ವಯಲಸತ್ಸ್ಥಲದಲ್ಲಿ ತತ್ತ್ವದ |
ಬಯಕೆ ಶರಣಸ್ಥಲದಹಂಕೃತಿಲಯವು ಸಮನಿಪುವು ||೪೦||

ನಿಚ್ಚಮೈಕ್ಯಸ್ಥಲದೆ ಕಾಣಿಪು |
ದಚ್ಚಳಿಯದೆಸೆದಿರ್ಪ ಮಿಗಿಲಹ |
ಸಚ್ಚಿದಾನಂದಸ್ವರೂಪವು ಪೊಗಳಲಸದಳವು ||
ಎಚ್ಚರಿಂದಾಲಿಪುದು ಮುಕ್ತಿಯೊ |
ಳಿಚ್ಛೆಯುಳ್ಳವನಾವನಾಗಲಿ |
ಯಚ್ಚರಿಯ ಷಟ್ಸ್ಥಲವಿಚಾರವನಿದನು ಭಕ್ತಿಯಲಿ ||೪೧||

ಭೂಮಿ ಸಲಿಲವು ವಹ್ನಿ ವಾತಂ |
ವ್ಯೋಮಮಾತ್ಮಮಿವಾರು ತತ್ತ್ವವು |
ತಾಮೆ ಭಕ್ತಾದಿಸ್ಥಲಂಗಳಲೈದುವುವು ಲಯಮಂ ||
ಪ್ರೇಮದಿಂದಾಲಿಪುದು ಭಕ್ತ |
ಗ್ರಾಮವಿಾ ಷಟ್ಸ್ಥಲಮೆ ಬಗೆಯಲು |
ಮಾಮಸಕದಾಚಾರಲಿಂಗಾದಿಗಳಲಡಗುವುದು ||೪೨||

ಮಿಗೆ ತೊಳಗುವಾಚಾರಲಿಂಗಾ |
ದಿಗಳು ನಾಸಿಕೆ ಜಿಹ್ವೆ ಲೋಚನ |
ಮಿಗಿಲಹಾ ತ್ವಕ್ಕರ್ಣಚಿತ್ತಂಗಳಲನುಕ್ರಮದೆ ||
ಸೊಗಸಿನಿಂ ಗ್ರಹಿಸುವುವು ಗಂಧಾ |
ದಿಗಳನಾ ಪರಶಿವನೆ ಕಡಲೊಳ |
ಗೊಗೆದಲೆಗಳಾತೆರದೊಳಲ್ಲಲ್ಲೆ ಸೆವನಡಗುವನು ||೪೩||

ಚಂದದಿಂದಾಚಾರಲಿಂಗವ |
ದೊಂದುವುದು ಗುರುಲಿಂಗವನು ಪೆಂ |
ಪಿಂದವಾ ಗುರುಲಿಂಗ ಶಿವಲಿಂಗವನೆ ಪೊಂದುವುದು ||
ಪೊಂದುವುದು ಶಿವಲಿಂಗವದು ತಾ |
ನೊಂದುವುದು ಚರಲಿಂಗವನು ನಲ |
ವಿಂದವಾಚರಲಿಂಗವೈದೆ *ಪ್ರಸಾದಿಲಿಂಗವನು ||೪೪||

ಅದು ಮಹಾಲಿಂಗವನು ಪೊಂದುವು |
ದದುವೆ ಘನಲಿಂಗವನು ಪೊಂದುವು |
ದಿದುವೆ ಲಿಂಗಾಂಗಗಳ ಸಮರಸಭಾವಸಿದ್ಧಿಯಲಾ ||
ಪದುಳದಿಂದಿದನರಿದು ತಪವೆಸ |
ಗಿದನೆ ಮುಕ್ತನು ಬಣ್ಣಿಸಲ್ಕೀ |
ಹದನೆ ವಿಶ್ರುತವಾತ್ಮವಿಜ್ಞಾನದೆ ಶಿವೈಕ್ಯವೆನೇ ||೪೫||

ತೊಳಗುವಂಗಸ್ಥಲದ ಭೇದಂ |
ಗಳಲಿ ನಾಲ್ವತ್ತೊಂದಿ ನಾಲ್ಕುಂ |
ತಿಳಿಯೆ ಲಿಂಗಸ್ಥಲದಿನೈವತ್ತೇಳುವಿಾ ಬಗೆಯಿಂ ||
ವಿಲಸದೇಕೋತ್ತರಶತಸ್ಥಲ |
ವಿಳೆಯೊಳೊಪ್ಪಿರ್ದಪುವು ಪಿಂಡ |
ಸ್ಥಲದೆ ಮೊದಲಾ ಜ್ಞಾನಶೂನ್ಯಾಂತಸ್ಥಲಂಬರೆಗಂ ||೪೬||

ಇದುವೆ ನಿಗಮಾಗಮರಹಸ್ಯವು |
ಪುದಿದ ಭವರೋಗಕೆ ಮಹೌಷಧ |
ವಿದುವೆಯಜ್ಞಾನಾಂಧಕಾರಕೆ ಚಂಡಮಾರ್ತಂಡಂ ||
ಇದುವೆ ಶೈವರ ಭಾಗ್ಯಕಲ್ಪವು |
ಚದುರನೀನಿದನಿಳೆಗೆ ಬೋಧಿಸು |
ವುದು ಕಣಾ ಕರ್ತವ್ಯಮಿನ್ನಾಂ ಪೋಗಿ ಬಂದಪೆನು ||೪೭||

ಇಂತು ರೇಣುಕನೊರೆದು ಗಿರಿಜಾ |
ಕಾಂತನಾಮಸ್ಮರಣೆಯೆಸಗುತೆ |
ಸಂತಸದಿ ದಿವಕಡರೆ ಕುಂಭಜಮುಖ್ಯಮುನಿವರರು ||
ಆಂತು ಶಾಂತಿಯನಂತರಂಗದೆ |
ಚಿಂತಿತಾರ್ಥಪ್ರದ ಪರಾತ್ಪರ |
ಕಂತುಹರ ಗರಪುರಮನೋಹರ ಎನುತೆ ನುತಿಸಿದರು ||೪೮||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಐದನೆಯ ಸಂಧಿ.

ಸೂ|| ಭರದೆ ಲಂಕೆಯ ಸಾರ್ದು ರೇಣುಕ |
ಗುರುವರನು ಮುಕ್ಕೋಟಿಲಿಂಗವ |
ವರವಿಭೀಷಣನಿಂ ಪ್ರತಿಷ್ಠೆಯಗೈಸಿ ಮನ್ನಿಸಿದಂ ||

ಮಲಯಪರ್ವತಮಧ್ಯಭಾಗದೆ |
ಬಳಸಿ ಬಹ ಭದ್ರಾನದಿಯ ತಟ |
ದಲಿ ವಿರಾಜಿಸುತಿರ್ಪ ರಂಭಾಪುರಿಯ ಪೀಠವನು ||
ಘಳಿಲನಾ ರೇಣುಕನು ದರ್ಶಿಸಿ |
ಬಳಿಯಮಲ್ಲಿಂ ತೆರಳೆ ಪೀನಂ |
ಜಲನಿಧಾನಂ ವಿಶದಫೇನಂ ಮೆರೆದುದನ್ಯೂನಂ ||೧||

ಇಂದಿರೆಯೆ ನಿಜತನುಜೆ ಮೆರೆವ ಮು |
ಕುಂದನಳಿಯನು ಚಂದಿರನೆ ನಿಜ |
ನಂದನನು ತಾನಲ್ತೆ ರತ್ನಾಕರನು ತನ್ನೆಡೆಯೊಳ್ ||
ಅಂದು ಮೈನಾಕನು ಭಯಾರ್ತನು |
ಪೊಂದಿ ತಾನಾಶ್ರಯವ ಬದುಕಿದ |
ನೆಂದೊಡೆನಗಾರೆಣೆಯೆನುತ್ತಲಿ ಮೆರೆದುದಂಬುನಿಧೀ ||೨||

ಆ ಸಮುದ್ರಪ್ರಾಂತದಲಿ ವರ |
ವಾಸರಾಧಿಪವಂಶಭವರ |
ಗ್ರೇಸರನು ರಘುವೀರನಾತ್ಮಾಂಗನೆಯನೆಳೆದುಯ್ದ ||
ಮೋಸಗಾರನ ರಾವಣನ ಸದೆ |
ದೈದೆ ಘಟಿಸಿದ ದುರಿತರಾಶಿಯ |
ನೋಸರಿಸೆ ನಿರ್ಮಿಸಿದ ಸೈಕತಲಿಂಗಮಿರದೆಸೆಗುಂ ||೩||

ಅಲ್ಲಿ ರಾಮೇಶ್ವರನ ನುತಿಸಲಿ |
ಕೆಲ್ಲ ದೆಸೆಗಳಿನ್ನೈದೆ ಸಾರ್ತಂ |
ದುಲ್ಲಸನ್ನಿಜಭಕ್ತಿಭರದಲಿ ಪೂಜಿಸುವ ಧರೆಯಾ ||
ಬಲ್ಲಿದರ ಭಾವುಕರ ಭಕ್ತರ |
ಬಲ್ಲಹರ ಮಂಡಳಿಗೆ ಭವಭಯ |
ವಿಲ್ಲವೆನಲಾಕ್ಷೇತ್ರಮಹಿಮೆಯನೇನ ಬಣ್ಣಿಪೆನು ||೪||

ಹರಿಸದಿಂದರ್ಚಿಸುತೆ ರಾಮೇ |
ಶ್ವರನನಖಿಲೇಷ್ಟಾರ್ಥಮೊಂದುವ |
ಸುರನರೋರಗಕಿನ್ನರರ್ಕಳ ನೆರವಿ ರೋದಸಿಯಂ ||
ಭರದೆ ತುಂಬಲು ದುರಿತರಾಶಿಯ |
ಪರಿಹರಿಸಿ ಭಜಕರ್ಗೆ ಭವ್ಯಮ |
ನುರದೆ ಕರುಣಿಪ ಭರ್ಗನೆಸೆದನು ಭಕ್ತವತ್ಸಲನೂ ||೫||

ಆನೆಲೆಯೊಳೊಪ್ಪಿರ್ದ ಭಕ್ತವಿ |
ತಾನಕೊಲವಿಂ ದರ್ಶನವನಿ |
ತ್ತಾನತರ ಜಾಲವನು ಮನ್ನಿಸಿ ಮುಂದಕೈತರುತೆ ||
ಭಾನುಕುಲಜನು ನಿರ್ಮಿಸಿರ್ದಸ |
ಮಾನಸೇತುವ ಕಂಡು ಸಂತಸ |
ವಾನುತಲಿ ರೇಣುಕಗಣಾಧಿಪ ಸಾರ್ದ ಲಂಕೆಯನು ||೬||

ಆರ ಪೆಸರನು ಕೇಳ್ದಮಾತ್ರದೆ |
ಮೂರು ಲೋಕವು ನಡುಗುತಿರ್ದುದೊ |
ನಾರಿಯೊರ್ವಳಿಗಾಗಿ ಪರಣವನಾವ ನೀಗಿದನೋ ||
ಆರ ಮನೆವಾಳ್ತೆಯಲಿ ವಹ್ನಿಸ |
ಮೀರರೇ ಪರಿಚಾರಕರೊ ಮುಂ |
ತೋರುತಿರ್ದುದು ರಾಜಧಾನಿಯದಾದಶಾನನನ ||೭||

ಅಗ್ರಜಾತನ ಬಯ್ಕೆಯೆಂದು ಸ |
ಮಗ್ರಮಪ್ಪುದೊ ಎನುತೆ ಶರ್ವನ |
ನುಗ್ರಹವನೆಳಸುತ ವಿಭೀಷಣನೆಲ್ಲಿ ಪಗಲಿರುಳುಂ ||
ಉಗ್ರಪೂಜೆಯನೆಸಗುತಿರ್ದನೊ |
ನಿಗ್ರಹಾನುಗ್ರಹಸಮರ್ಥಂ |
ವ್ಯಗ್ರತೆಯ ಪರಿಹರಿಸೆ ರೇಣುಕನಲ್ಲಿಗೈತಂದಂ ||೮||

ಅತ್ತಲತಿಮುದದಿಂದೆ ಸಂಚರಿ |
ಸುತ್ತಲಿರ್ದಾ ಗುರುವರನ ಸ |
ದ್ವೃತ್ತವನು ದನುಜೇಂದ್ರನಾಲಿಸಿ ತಳೆದು ಸಂತಸವ ||
ಚಿತ್ತಜಾರಿ ತನತ್ತು ತಪಕಿಂ |
ದಿತ್ತನನುಪಮಫಲವ ಕರೆತಹೆ |
ನುತ್ತಮೋತ್ತಮನನು ಮದೀಪ್ಸಿತದಾಯಕನನೆನುತ ||೯||

ಬಂದು ಕಂಡನು ರೇಣುಕನ ದಶ |
ಕಂಧರನ ಸಹಜಾತ ನಿತ್ಯಾ |
ನಂದಕಂದನ ಗಿರಿಶಸದ್ಯೋಜಾತಮುಖಭವನ ||
ವಂದಿಸಿದನುಪಚಾರಮೆಸಗಿದ |
ನಂದದಿಂ ಸ್ತುತಿಗೈದ ಗುರುವೇ |
ಇಂದೆ ಸುದಿನವು ಧನ್ಯನಾದೆನು ನಿನ್ನ ಕಂಡೆನುತ ||೧೦||

ಜಯ ಗುರೂತ್ತಮ ಭಕ್ತಸಂಭ್ರಮ |
ಜಯ ಗುರೂತ್ತಮ ದಳಿತವಿಭ್ರಮ |
ಜಯ ಗುರೂತ್ತಮ ಭೀಮಭವಭಯಹರಣ ನಿಸ್ಸೀಮ ||
ಜಯ ಗುರೂತ್ತಮ ದಿವ್ಯನಾಮಾ |
ಜಯ ಗುರೂತ್ತಮ ಸಾವಧಾನವು |
ಜಯ ಗುರೂತ್ತಮ ರೇಣುಕಾರ್ಯ ಪರಾಕು ಪದಯುಗಕೆ ||೧೧||

ದೇವ ನನ್ನಾಲಯಕೆ ಬಿಜಯಿಸು |
ಪಾವನೋಜ್ವಲಚರಿತ ನಿನಗಾಂ |
ಗೈವ ಪೂಜೆಯ ನಾಡೆ ಕೈಗೊಳುತೆನ್ನ ಪೊರೆ ಕೃಪೆಯಿಂ ||
ಕಾವರಿಲ್ಲವು ನಿನ್ನನುಳಿವೊಡೆ |
ಭೂವಲಯದೊಳಗನ್ಯರೆಲೆ ಭವ |
ದಾವಜಲಧರ ದಯೆಯ ತೋರೆಂದನು ವಿಭೀಷಣನು ||೧೨||

ಆನುಡಿಯನಾಲಿಸುತೆ ರೇಣುಕ |
ಮಾನಸದೆ ಸಂತುಷ್ಟನಾಗುತೆ |
ದಾನವೇಂದ್ರನ ಪಿಂತೆ ನಡೆದನು ತನ್ನಿಕೇತನಕೆ ||
ಏನೊರೆವೆ ಗುರುಪೂಜೆಯಾ ಸುವಿ |
ಧಾನವನು ಸಂಭ್ರಮವನನುವನು |
ಸಾನುರಾಗದೆ ಸೊಲ್ಲಿಸಿದ ಗುರು ಭಕ್ತಗೊಲಿಯುತಲಿ ||೧೩||

ಮೆಚ್ಚಿದೆನು ನೀಂ ಗೈದ ಪೂಜೆಗೆ |
ಸಚ್ಚರಿತ ಕೇಳ್ನಿನ್ನ ಮನದು |
ಳ್ಳಿಚ್ಛೆಯಾವುದು ಬೇಡು ನೀಡುವೆನೆನುತೆ ಗುರುವುಸಿರೆ ||
ತಚ್ಚರಣಕೆರಗುತೆ ವಿಭೀಷಣ |
ಚಚ್ಚರದೆ ತಾನಿಂತು ನುಡಿದ ವಿ |
ಯಚ್ಚರಾವಳಿ ನಿಂದು ಬೆರಗಿಂದೀಕ್ಷಿಸುತ್ತಿರಲು ||೧೪||

ಗುರುವೆ ಲೋಕತ್ರಯವ ಗೆಲ್ದಾ |
ಸುರನರೋರಗವೃಂದದಿಂ ಪರಿ |
ಚರಿಯೆಯೊಂದುತ್ತಿರ್ದನೆನ್ನಗ್ರಜನು ರಾವಣನು ||
ಪರಮಶಿವಭಕ್ತಾಗ್ರಗಣ್ಯನು |
ಸರಿಯೆ ತನಗಿಲ್ಲೆಂದು ಧರೆಯೊಳ್ |
ಬೆರೆತು ಬೀಗುತ್ತಿರಲು ಸಮನಿಸಿತೊಂದು ದುಷ್ಕಾಲಂ ||೧೫||

ಜಲಜವಲ್ಲಭವಂಶಭವನಾ |
ನೆಲನಣುಗಿಯೊಡವೆರೆದು ಸತ್ಯವ |
ಸಲಹೆ ಸಹಭವಸಹಿತಲೈತಂದನು ವನಾಂತರಕೆ ||
ಚೆಲುವೆಯಾ ರೂಪಿಂಗೆ ಮನವದು |
ಚಲಿಸಲೆನ್ನಗ್ರಜನು ಮೋಸದೆ |
ತಳೆದು ವೇಷಾಂತರವನವಳನು ತಂದನಪಹರಿಸಿ ||೧೬||

ಅರಿದದನು ಕಡುಕೋಪದಿಂದಲಿ |
ತರಣಿವಂಶಜರಾಮನಾ ವಾ |
ನರಪತಾಕಿನಿಗೂಡಿ ಸೇತುವ ರಚಿಸಿ ಜಲನಿಧಿಗೆ ||
ಭರದೆ ಲಂಕೆಯ ಪೊಕ್ಕು ಕದನದೆ |
ತರಿದು ರಾಕ್ಷಸಬಲವನೆನ್ನಯ |
ವರಜನನು ನಿಶಿತಾಸ್ತ್ರಕುಲದಿಂ ಧರೆಗುರುಳ್ಚಿದನು ||೧೭||

ಅಸು ತೆರಳ್ವಾ ಸಮಯದಲಿ ರಾ |
ಕ್ಷಸಕುಲಾಧಿಪನೆನ್ನ ಕರೆಯುತ |
ಲುಸಿರ್ದ* ಲಿಂಗವನಾರುಕೋಟಿಯ ಹದಿಟೆಗೈದಿಹೆನು ||
ರಸೆಯೊಳುಳಿದಾ ಮೂರುಕೋಟಿಯ |
ನೊಸೆದು ನೀನೇ ಸಂಪ್ರತಿಷ್ಠಿಸು |
ಜಸಮನೊಂದು ಮದೀಯಸಂಕಲ್ಪವನು ಕೊನೆಸಾರ್ಚೆ ||೧೮||

ಎನುತುಸಿರಲವಗರಿಕೆಯನು ಗೈ |
ದೆನೆಲೆಯಗ್ರಜ ನಿನ್ನ ಪೆಸರಿಂ |
ಮನವೊಲಿಯುತೊಂಭತ್ತುಕೋಟಿಯ ವಿಷ್ಣುಮೂರ್ತಿಗಳ ||
ಅನುವರಿದು ನಾಂ ಹದಿಟೆಮಾಳ್ಪೆನು |
ನಿನಗೆ ಸದ್ಗತಿಯಾಗಲೆನಲವ |
ನನುಜ ಕೇಳಂತಲ್ತು ಲಾಲಿಸು ಸೊಲ್ಲಿಸುವೆನೆಂದಂ ||೧೯||

ಘೋರಸೋಮುಕದೈತ್ಯನನು ಸಂ |
ಹಾರಮೆಸಗಲು ಮತ್ಸ್ಯರೂಪದೆ |
ನೀರಧಿಯೊಳವತರಿಸಿ ಬಿಹರಿಸಿದಾಹೃಷೀಕೇಶಂ ||
ಮಾರಹರನೆ ಪರಾತ್ಪರನೆನು |
ತ್ತಾರಯುತೆ ಮತ್ಸ್ಯೇಶನಾಮುಕ |
ಚಾರುಲಿಂಗವ ಹದಿಟಿಗೈದರ್ಚಿಸಿದನೀಪುರದೇ ||೨೦||

ಧರೆಯೊಳಭವನೆ ದೇವದೇವನು |
ಸರಿಯಹರು ಬೇರಿಲ್ಲವಾತಂ |
ಗರಿದು ನೀನಿದನದರಿನಿಂ ಮುಕ್ಕೋಟಿಲಿಂಗಗಳ ||
ಹರಿಸದಿಂದಲಿ ಹದಿಟಿಗೈಯುತೆ |
ವಿರಚಿಸೆನ್ನ ಕೃತಾರ್ಥನನೆನುತ |
ಲೊರೆದು ಹರನನು ನೆನೆದು ತೊರೆದನು ತನ್ನ ಹರಣವನು ||೨೧||

ಬಳಿಯವಿಾಪೆರ್ಗಜ್ಜಮೆಸಗಲು |
ತಿಳಿಯದೇನುಮುಪಾಯವನು ನಾಂ |
ತಳರ್ದೆ* ಜನಕನ ವಿಶ್ರವಸ್ಸಿನ ಬಳಿಗೆ ತುರಿಪದಲಿ ||
ಎಳಸಿದಗ್ರಜನೆಳಪು ಫಲಿಸ |
ಲ್ಕೊಲಿದು ಸಾಹ್ಯಮೊಡರ್ಚೆ ಬೇಡಿದೆ |
ನಲಸದಾತನು ನಕ್ಕು ನುಡಿದನು ಮಗನೆ ಕೇಳೆನುತ ||೨೨||

ಬರಿದೆ ಬೇವಸವೊಂದಲೇತಕೆ |
ತರಳ ನಿಮ್ಮಯ ಲಂಕೆಯೊಳ್ ನೆಲ |
ಸಿರುವ ಮತ್ಸ್ಯೇಶ್ವರನ ನೀನರ್ಚಿಸಲು ಬಯ್ಕೆಯಿದು ||
ಭರದೆ ಕೈಸೇರುವುದೆನುತ್ತಲಿ |
ಪರಸಿ ಕಳುಪಲು ಮರಳ್ದೆ* ಮತ್ಸ್ಯೇ |
ಶ್ವರನನಂದಿಂದರ್ಚಿಸಿದೆನಿಂತಿರಲದೊಂದುದಿನ ||೨೩||

ಪವಡಿಸಲು ನೆನೆಯುತೆ ಮಹೇಶನ |
ವಿವಿಧಲೀಲಾವಿಭವಗಳ ಪರ |
ಶಿವನು ಮತ್ಸ್ಯೇಶ್ವರನ ರೂಪಿಂದೆನಗೆ ವ್ಯೆದೋರಿ ||
ಕುವರ ನೀಂ ಚಿಂತಿಸದಿರಿನಿಸುಂ |
ಸವನಿಪುದು ನಿನ್ನೆಳಪು ಕೆಲವುಂ |
ದಿವಸಕ್ಕೆತಹನೆನ್ನ ವದನೋದ್ಭವನು ರೇಣುಕನು ||೨೪||

ಮರೆಹೊಗುವೊಡಾತನನು ಚಳಕದೆ |
ದೊರೆವುದೈ ನಿನ್ನಿಷ್ಟಸಿದ್ಧಿಯು |
ನಿರುತವೀ ನುಡಿಯೆಂದು ನುಡಿದು ಮಹೇಶ ಮೈಗರೆಯೆ ||
ಗುರುವೆ ನಾನಾದಿನದಿ ನಿನ್ನಯ |
ಚರಣಕಮಲವೆ ಗತಿಯೆನುತ್ತಂ |
ಸ್ಮರಿಸುತಿರ್ದೆನು ತಂದೆ ಬಂದ್ಯೆ ಶರಣವತ್ಸಲನೇ ||೨೫||

ಬಂದುದೇ ನನ್ನೆಳಪು ಚಿತ್ತಕೆ |
ಬಂದುದೇ ಭಕ್ತಾಗ್ರಗಣ್ಯರ |
ಬೃಂದದೀಪ್ಸಿತದಾನವಿಲಸನ್ನಾಕಮಂದಾರ ||
ಸಂದುದೇ ಸೋದರಮನೋರಥ |
ತಂದೆ ರೇಣುಕ ಶ್ಯೆವಭಾಗ್ಯವ |
ತಂದೆಯೆನುತಲಿ ಪೊಗಳಿ ನಲಿನಲಿದಾಡಿ ಪಾಡಿದನು ||೨೬||

ಎಂತು ಸತ್ಕರಿಸುವೆನೊ ನಿನ್ನನ |
ದೆಂತತಿಥಿಪೂಜೆಯನು ಗ್ಯೆವೆನೊ |
ಎಂತು ನಿನ್ನೊಲವಿಂಗೆ ಮುಯ್ಯ ಸಮರ್ಪಿಪೆನೊ ತಿಳಿಯೆಂ ||
ಎಂತು ಮೇಣ್ ಬಣ್ಣಿಪೆನೊ ಹೃದಯದ |
ಸಂತಸವ ಗುರುದೇವ ದೇವಾ |
ಎಂತುಟೋ ನಿನತೆಸೆವಮೂಲ್ಯಂ ಭಕ್ತವಾತ್ಸಲ್ಯಂ ||೨೭||

ನನ್ನ ಭಾಗ್ಯವೊ ನಿನ್ನ ದಯೆಯೋ |
ನನ್ನ ಕರ್ಮವೊ ನಿನ್ನ ಧರ್ಮವೊ |
ನನ್ನ ಪೂಜಾಫಲವೊ ಭವಭಯದೂರ ನಿನ್ನೊಲವೋ ||
ನನ್ನ ಭಕ್ತಿಯೊ ನಿನ್ನ ಶಕ್ತಿಯೊ |
ನನ್ನ ಚಲವೋ ನಿನ್ನ ಗೆಲವೋ |
ಸನ್ನುತನೆ ನೀನೆಂತೊ ದೊರೆತ್ತೈ ಧನ್ಯನಾನೆಂದಾ ||೨೮||

ಒಡನೆ ರೇಣುಕ ನಗುತೆ ನುಡಿದನು |
ನೃಡನ ವಾತ್ಸಲ್ಯವದು ನಿನ್ನಲಿ |
ಕಡುವಿರಿದು ನೋಡತ್ತ ನಿನ್ನಯ ಬಯ್ಕೆ ತೀರಿರ್ಕುಂ ||
ಸಡಗರದಿ ಮುಕ್ಕೋಟಿಲಿಂಗಗ |
ಳೆಡೆಗೊಳುತೆ ಭವದೀಯಪೂಜೆಯ |
ಪಡೆದು ಮೆರೆಯುತ್ತಿಹವು ಮತ್ತೇನೆಳವು ಪೇಳೆಂದಂ ||೨೯||

ಸುತ್ತಲುಂ ಮುಕ್ಕೋಟಿಲಿಂಗಗ |
ಳುತ್ತಮದ ಪೂಜೆಯನು ಮಿಗೆ ತ |
ನ್ನತ್ತಣಿಂ ಕೈಗೊಂಡು ಮೆರೆದಿಹುದನು ವಿಭೀಷಣನು ||
ಬಿತ್ತರದೆ ನಿರುಕಿಸುತೆ ನಾಡೆ ಗು |
ರೂತ್ತಮನು ಮುಕ್ಕೋಟಿಲಿಂಗಗ |
ಳತ್ತಲುಂ ನೆಲಸಿರ್ಪ ಬಗೆಯನು ಕಂಡು ಬೆರಗಾದಂ ||೩೦||

ಅದನಭೀಕ್ಷಿಸಿ ರೇಣುಕನು ಸಂ |
ಮುದದೆ ನುಡಿದನೆಲೈ ವಿಭೀಷಣ |
ಹೃದಯದಲಿ ನೀನಾವ ಭಾವವನಾಂತು ನೋಂತೆಯೊ ಕೇಳ್ ||
ಅದುವೆ ನಿನ್ನಿದಿರಾಗಿ ಪ್ಯೆದೋ |
ರಿದುದು ವಿಸ್ಮಯವೇಕೆ ನಿನಗಿಂ |
ದೊದವಿ ಕೈಸೇರಿತ್ತು ಪರಶಿವಭಕ್ತಿಸಾಮ್ರಾಜ್ಯಂ ||೩೧||



ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ಮೂರುಕೋಟಿ
ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು
ಸ್ಥಾಪಿಸುವುದು.

ಅರಿವೊಡಾ ಷಟ್ಸ್ಥಲವಿಚಾರವ |
ನರಿವೊಡಷ್ಟಾವರಣವಿಷಯುವ |
ನರಿಯೆ ಪಂಚಾಚಾರಮುರ್ಮವನೆಲೆ ವಿಭೀಷಣ ಕೇಳ್ ||
ಅರಿದದಾವುದು ಧರೆಯೊಳಿರ್ಪುದು |
ಪರಮಶಿವಸಿದ್ಧಾಂತತತ್ತ್ವವಿ |
ದರೊಳಗಗ್ರಣಿಯಾಗು ನೀನೆಂದೊಲಿದು ಪರಸಿದನು ||೩೨||

ಇನ್ನು ನೀಂ ಶಿವಭಕ್ತಿಸುಧೆಯನು |
ನಿನ್ನ ರಾಜ್ಯಕ್ಕೆರೆದು ಮುಂದಿಯು |
ನುನ್ನತದ ಮಾಂಗಲ್ಯವೀಧಿಯೊಳ್ಮೆದೆ ಮೆರೆಯಿಸುತೆ ||
ಚೆನ್ನೆನಲು ಸೊಗವಾಳು ಗುಣಸಂ |
ಪನ್ನನೆನಿಸಿರು ರವಿಶಶಿಗಳಿ |
ರ್ಪನ್ನೆವರಮೆಸೆದಿರಲಿ ಧರೆಯಲಿ ನಿನ್ನ ವಿಮಲಯಶಂ ||೩೩||

ಇಂತು ರಾಕ್ಷಸಸಾರ್ವಭೌಮನ |
ಚಿಂತೆಯನು ಪರಿಹರಿಸಿ ಪರಸುತೆ |
ಸಂತಸವ ತಾಳುತ್ತೆ ಮುಂತಣ ಕಜ್ಜವನು ಬಗೆದು ||
ಅಂತರಂಗದೆ ಶೈಲತನಯಾ |
ಕಾಂತನನು ಜಾನಿಸುತೆ ತಳರ್ದ*ನು |
ನೋಂತರಗ್ರಣಿ ಗರಪುರಾಧಿಪಭಕ್ತಬಹುಕರುಣಿ ||೩೪||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಆರನೆಯಸಂಧಿ.

ಸೂ|| ಸುರಧುನಿಯ ಸಾನ್ನಿಧ್ಯದಿಂದಲಿ |
ಮೆರೆವ ಕಾಶೀಕ್ಷೇತ್ರದಲಿ ಸ |
ದ್ಗುರುವು ವಿಶ್ವಾರಾಧ್ಯನೊಡವೆರೆದೈದೆ ಸೊಲ್ಲಿಸಿದಂ ||

ದಿನಪಕುಲಮಣಿ ಸಗರ ಸಂಕ್ರಂ |
ದನನ ಪದವಿಯನೆಳಸಿ ಮುಖವನು |
ಮನವೊಲಿದು ವಿರಚಿಸಲು ಬಿಟ್ಟಾತುರಗವನು ಕಂಡು ||
ಮುನಿದು ಸುರಪತಿಯುಯ್ದದನು ತೊ |
ಟ್ಟನೆ ರಸಾತಲದಲ್ಲಿ ಕಟ್ಟಿದ |
ಮುನಿಪ ಕಪಿಲನ ಪಿಂಗಡೆಯೊಳದನೇನ ಪೇಳುವೆನು ||೧||

ಮರಳದಿರೆ ಮುಖತುರಗಮಾಭೂ |
ವರಶಿಖಾಮಣಿ ಸಗರ ಚಿಂತಿಸಿ |
ಕರೆದು ತನ್ನರುವತ್ತುಸಾಸಿರುವರ ತನೂಭವರ ||
ಭರದೊಳಾಣತಿಯಿಾಯೆ ತುರಗವ |
ನರಸಿ ತಹುದೆಂದೊಡನೆ ತೆರಳಿದ |
ರರಗುವರರಥಟೆಂದೆ ಪಿತ್ರಾಜ್ಞೆಯನು ಪಾಲಿಸಲು ||೨||

ಧರೆಯನೆಲ್ಲವನರಸಿದರು ಗೋ |
ಚರಿಸದಾಗೆ ಮುಖಾಶ್ವವಲ್ಲಿಂ |
ತೆರಳ್ದ*ರಾ ಬಲಿಸದ್ಮಕಿಳೆಯನು ಕೊರೆದು ನಖಮುಖದಿ ||
ಪರಮಕೋಪಿಯ ಕಪಿಲಮುನಿಯಾ |
ಸರಿಸದಲಿ ಕಂಡದನು ಸರ್ರನೆ |
ಕೆರಳಿ ಬಯ್ದರು ಪೊಯ್ದರವನನು ಕಲ್ಲುಮಣ್ಣುಗಳಿಂ ||೩||

ಎಲವೆಲವೊ ಹಯಚೋರ ನೀನೀ |
ತಳದೊಳವಿತಿರೆ ಬಿಡುವೆವೇಂ ಫಡ |
ಖಳ ದುರಾತ್ಮ ನಿನತ್ತು ಶೌರ್ಯವು ಚೌರ್ಯದೊಳಗಾಯ್ತೆ ||
ತಳೆದಿಹೈ ದೀಕ್ಷೆಯನಿದರ್ಕೆಂ |
ದೆಲವೊ ನಾಣಿಲಿಯಂಜುಕುಳಿ ಚಿಃ |
ಬಳಸುದೊಳ್ತಿರ ಕೂಸೆ ಎನುತಲಿ ಪಳಿದು ಗಜರಿದರು ||೪||

ಮುಂದರಿಯದತಿಕೋಪದಿಂದಲಿ |
ಮಂದಮತಿಗಳು ಮುನಿಕುಲೇಂದ್ರನ |
ನಿಂದಿಸಲು ತಪಕಾಯ್ತು ವಿಘ್ನವು ತವಸಿ ಕಣ್ದೆರೆಯೇ ||
ಮುಂದೆ ನಿಂದರುವತ್ತುಸಾಸಿರ |
ಮಂದಿಯುಂ ಸುಟ್ಟುರಿದು ಪೋದರು |
ಬಾಂದಳದೆ ಬಿಡುಗಣ್ಣರೆರೆಯನು ಕಂಡು ನಲಿದಾಡೇ ||೫||

ಪ್ರೇತರೂಪವನಾಂತು ನೃಪತನು |
ಜಾತರಲೆಯುತ್ತಿರಲು ತತ್ಕುಲ |
ಜಾತರದ ಪರಿಹರಿಸಲಾರದೆ ಮಡಿಯೆ ಪಲಬರು ಮೇಣ್ ||
ಖ್ಯಾತನೆನಿಪ ಭಗೀರಥನು ಮಹಿ |
ಮಾತಿಶಯಯುತಕಪಿಲನನು ತಾ |
ನೋತು ಸೇವಿಸಿ ಸದುಪದೇಶವನಾತನಿಂ ಪಡೆದಂ ||೬||

ತಳರ್ದು* ಹಿಮಶೈಲವನು ಭರ್ಗನ |
ನಲಸದತಿಶಯಭಕ್ತಿಯಿಂದಲಿ |
ಪಲವಗೆಯಿನಾರಾಧಿಸುತ್ತಿರಲಾ ಶಿವಾಧವನು ||
ಎಳೆಯನೆನ್ನನು ಕಾಂಬ ತವಕದೆ |
ಬಳಲುತಿರ್ದಪನಿವನ ಬಯ್ಕೆಯ |
ಸಲಿಸವೇಳ್ಕುಮೆನುತ್ತೆ ಮೈದೋರುತಲಿ ಮದನಾರಿ ||೭||

ಬಿಡುಬಿಡೈ ಚಿಂತೆಯ ಭಗೀರಥ |
ನಡೆ ಭವತ್ಪಿತೃವರ್ಗಕಿಲ್ಬಿಷ |
ಮಡಗಿದುದು ಸುರನದಿಯ ಕಳುಪುವೆ ನಿನ್ನ ಪಿಂಗಡೆಯೊಳ್ ||
ಪೊಡವಿ ಪಾವನೆಯಾಗಲೆಂದಾ |
ಮೃಡನು ಸೊಲ್ಲಿಸಿ ವ್ಯೈಗರೆಯಲಾ |
ಗಡೆ ಮಹಾದ್ಯುತಿವೆರಸಿ ನಿನದವು ತುಂಬಿತಂಬರವಂ ||೮||

ಪೊಂದಲಂತರ್ಧಾನವನು ಹರ |
ನೊಂದು ಮನದೆ ಭಗೀರಥನು ಬಳಿ |
ಸಂದ ಗಂಗೆಯ ಕಂಡು ಮಗುಳ್ದು*ತ್ಸಾಹವನು ತಾಳಿ ||
ಬಂದೆಯಾ ಕರುಣಾಂತರಂಗೇ |
ಬಂದೆಯಾ ಪಾವನತರಂಗೇ |
ಬಂದೆಯಾ ಸುರಗಂಗೆಯೆನುತೆರಗಿದನು ಭಕ್ತಿಯಲಿ ||೯||

ತೆರೆವನಿತರಲಿ ಮುಗಿದ ಕಣ್ಗಳ |
ನರರೆ ಜಲಮಯಮಾಯ್ತು ಧರೆಯದ |
ನರಿಯದಾದನು ನಾಡೆ ದಿಗ್ಭ್ರಮೆಗೊಂಡನೇವೊರೆವೇ ||
ಹರಹರಾ ಮಾದೇವ ಪುರಹರ |
ಪೊರೆವುದೆಲೆ ಹರಿಣಾಂಕಶೇಖರ |
ಪರಮಶುಭಕರ ಎನುತೆ ಕುಣಿಕುಣಿದಾಡಿ ಪಾಡಿದನು ||೧೦||

ತಗ್ಗಿದುದು ಧರೆ ನದಿಯ ವೇಗಕೆ |
ಜಗ್ಗಿದುದು ಫಣಿಪರಿವೃಢನ ಪೆಡೆ |
ಬಗ್ಗಿದುದು ಬೆನ್ನೈದೆ ಕಮಠಗೆ ಪೇಳಲೇನದನು ||
ನುಗ್ಗನುಚ್ಚಾಯ್ತುಷ್ಟಸಂಖ್ಯೆಯ |
ದಿಗ್ಗಜಂಗಳ ದಂತಯುಗಳವು |
ಸಗ್ಗಿಗರು ಭಯಗೊಂಡು ಮರೆವೊಕ್ಕರು ಕಪರ್ದಿಯನು ||೧೧||

ಸಿರವನೊಡ್ಡುತಲಾ ಗಿರೀಶನು |
ಧರಿಸಿ ಗಂಗೆಯ ತನ್ನ ಜಡೆಯಲಿ |
ಮೆರೆಯಲಡಗಿದಳಲ್ಲಿ ಭಾಗೀರಥಿ ಮಹಾಭಾಗೆ ||
ಆರರೆ ನನ್ನಯ ಬಯ್ಕೆ ಬೀತುದೆ |
ಹರಹರಾ ಸರ್ವಜ್ಞ ಸಲಹೈ |
ಕರುಣಿಸೈಯೆನುತಾ ಭಗೀರಥ ಮರಳ್ದು* ನುತಿಸಿದನು ||೧೨||

ಮೂಡಿದುದು ಕೃಪೆ ವಾಮದೇವಗೆ |
ನೀಡಿದನು ನಿಜಭಕ್ತನಿಷ್ಟವ |
ಕಾಡದೀತನ ಪಿಂದೆ ತೆರಳುವುದೆನುತಲಾಣತಿಯ ||
ಮಾಡಿದನು ಸುರತಟನಿ ನಡೆದಳು |
ನಾಡುಕಾಡುಗಳೆಂಬ ಭೇದವ |
ನೋಡದೆಲ್ಲವ ಪಾವನಂಗೊಳಿಸುತಲಿ ನಿಜತನುವಿಂ ||೧೩||

ಮುಂದುಮುಂದೈತರೆ ಭಗೀರಥ |
ಪಿಂದುಪಿಂದೈತರುತೆ ಸುರಧುನಿ |
ಯೊಂದೆಡೆಯೊಳಾ ಜಹ್ನುಮುನಿಪತಿಯಾಶ್ರಮವ ಬಳಸಿ ||
ದಂದುಗಕ್ಕೆಡೆಮಾಡೆ ತವಸಿಯ |
ನಂದು ಖತಿಗೊಂಡಾ ಮುನೀಂದ್ರನು |
ಬಿಂದುಮಾತ್ರವುಮುಳಿಯದಂತಿರೆ ಮುಳಿದು ಪೀರಿದನು ||೧೪||

ಮತ್ತೆ ಸುರಧುನಿ ಮೈಗರೆದಳಲೆ |
ಸುತ್ತಲುಂ ನಡೆನೋಡಿ ಜನಪಾ |
ಲೋತ್ತಮನು ಚಿತ್ತದಲಿ ತಳ್ಳಂಕವನು ತಾ ತಾಳಿ ||
ಕಿತ್ತಡಿಯ ಮೈಮೆಯನು ಬಗೆಗಾ |
ಣುತ್ತೆ ತಚ್ಚರಣಾಬ್ಜಕೆರಗಲು |
ತತ್ತಪೋನಿಧಿ ನಕ್ಕು ಮನ್ನಿಸೆ ಗಂಗೆ ಕಂಗೆಸೆದಳ್ ||೧೫||

ಬಳಿಯುಮಾಜಾಹ್ನವಿಯು ಬಳಿಗೊಂ |
ಡಿಳೆಯೊಡೆಯು ಮುಂಬರಿದು ಬಂದನು |
ಘಳಿಲನಾನಿಜಪಿತೃಗಳುರಿದಾ ಭಸ್ಮವಿದ್ದೆಡೆಗೆ ||
ಬಳಸಿದಳು ಮಡಿಲಲ್ಲಿ ತಳೆದಳು |
ಕಳೆದಳವರಘರಾಶಿಯನು ಕೈ |
ಗೊಳಿಸಿ ಕೈವಲ್ಯವನು ಸಗರಸುತರ್ಗೆ ಸುರಗಂಗೆ ||೧೬||

ಈತೆರದೆ ಬಹುಯತ್ನದಿಂದಲಿ |
ಭೂತಲಕೆ ಪರಿತಂದು ಮಿಂದರ |
ಪಾತಕವ ಪರಿಹರಿಸಿ ಪಶುಪಕ್ಷ್ಯಾದಿವರ್ಗಮುಮಂ ||
ಓತು ಸಲಹುವ ಗಂಗೆ ಪರಿಯಲ್ |
ಖ್ಯಾತಕಾಶೀಕ್ಷೇತ್ರಮುಪಮಾ |
ತೀತ ದಿವ್ಯಚರಿತ್ರಮೆಸೆದುದು ಶೈವನುತಿಪಾತ್ರಂ ||೧೭||

ನೆನೆವರಘವನು ಸುಟ್ಟುರಿಪಿ ಬಗೆ |
ಗನುವಿನಮೃತವನೂಡಿ ಸಂಜೀ |
ವಿನಿಯೆನಿಸಿ ಭವಸುಖವನಿಮ್ಮಡಿಗೊಳಿಸಿ ಕಂಗೊಳಿಸಿ ||
ಮುನಿಕುಲವನುದ್ಧರಿಸಿ ಸಲಹುವ |
ನೆನಹಿನಂಬರತಟನಿ ಸುರಧುನಿ |
ಮಿನುಗುವೆಡೆ ಶಾಂಕರಮದಲ್ಲವೆ ಕಾಶಿ ಸುಖರಾಶಿ ||೧೮||

ಗುರುಕುಲಕೆ ಶುಶ್ರೂಷೆಯೆಸಗುತೆ |
ಪರಮಶಿವಸಿದ್ಧಾಂತಮರ್ಮವ |
ನರಿಯೆ ತವಕವ ಪಡುವ ಶೈವಬ್ರಹ್ಮಚಾರಿಗಳುಂ ||
ನಿರವಧಿಕಸುಖಕೆಳಸಿ ಸಾರ್ತರು |
ತಿರುವ ಪರಮಮುಮುಕ್ಷುಗಳುಮಾ |
ದರದೆ ನೆಲಸಿರೆ ಕಾಶಿ ದುರಿತವಿನಾಶಿ ಸೊಗಯಿಸಿತು ||೧೯||

ವಿವಿಧವಾದಾ ದುಷ್ಕೃತಂಗಳ |
ಸವೆದು ದುರ್ಭರರೆನಿಸುತವನಿಗೆ |
ಭವದೆ ತೊಳಲುವ ಪಾಪಿಗಳನುದ್ಧರಿಪ ಮನದಿಂದೆ ||
ಪ್ರವಿದಿತಾಸ್ಯಾದೃಶಮಹಿಮ ಪರ |
ಶಿವನು ನೆಲಸಿಹನಲ್ಲಿ ಬಹುವೈ |
ಭವಯುತನು ಚಿನ್ಮೂರ್ತಿ ವಿಶ್ವೇಶ್ವರಸಮಾಖ್ಯೆಯಲಿ ||೨೦||

ಪರಶಿವನ ಮತತತ್ತ್ವಸಾರವ |
ಧರೆಗರುಹಲೆಂದಂದು ವಿಶ್ವೇ |
ಶ್ವರನ ಲಿಂಗದಿನೊಗೆದ ವಿಶ್ವಾರಾಧ್ಯನನವದ್ಯಂ ||
ಮೆರೆದಿಹನು ಶರಣಾಗತಾವನ |
ನಿರತನೀಪುರವರದೆ ಶಿಷ್ಯವಿ |
ಸರಸದಾನುಗ್ರಹಮತಿ ಶ್ರೀಸ್ಕಂದಗೋತ್ರಪತಿ ||೨೧||

ಏವೊರೆವೆನಾ ಗುರುವರೇಣ್ಯನ |
ಪಾವನಾಶ್ರಮವೊಪ್ಪುವುದು ತಾ |
ನಾವಗಂ ತತ್ತ್ವಾರ್ಥಜಿಜ್ಞಾಸುಗಳ ಸಂಕುಲದಿಂ ||
ಶೈವಸಿದ್ಧಾಂತಿಗಳಿನಿದುವೇ |
ಭಾವಜಾರಿಯ ವಾಸಗೃಹಮೆನೆ |
ಭಾವಿಸಲು ಸರ್ವಜ್ಞನಿಲಯವು ಭಕ್ತಶುಭಕರವು ||೨೨||

ಅಲ್ಲಿಹರು ಚತುರಾಸ್ಯರಾರಯು |
ಲೆಲ್ಲರುಂ ಪುರುಷೋತ್ತಮರು ಮೇ |
ಣೆಲ್ಲರುಂ ಬಿಡುಗಣ್ಣರಾನಂದಿಗಳು ಸುಮನಸರು ||
ಉಲ್ಲಸನ್ನಿಗಮೋಕ್ತಿಯಿಂಚರ |
ಮೆಲ್ಲಿಯುಂ ತೀವಿರಲು ಬಣ್ಣಿಸ |
ಬಲ್ಲನಾವಂ ಮೆರೆವ ವಿಶ್ವಾರಾಧ್ಯನಾಶ್ರಮವ ||೨೩||

ಸದಮಲಜ್ಞಾನಾಬ್ಧಿ ಶೈವಾ |
ಭ್ಯುದಯ ಚಿಂತಾರತ್ನ ಭವ್ಯ |
ಪ್ರದನು ರೇಣುಕ ಗಗನದೆಡೆಯಿಂದಲ್ಲಿಗೈತರಲು ||
ಪದುಳದಲಿ ಶಿಷ್ಯಾಳಿಯೊಡವೆರೆ |
ದಿದಿರುಗೊಂಡಾತನನು ಸತ್ಕರಿ |
ಸಿದನು ವಿಶ್ವಾರಾಧ್ಯನಾಸಡಗರವನೇವೇಳ್ವೆ ||೨೪||

ಇರ್ವರುಂ ಪರಿಪೂರ್ಣಕಾಮರು |
ಶರ್ವವದನೋದ್ಭವರು ಸನ್ನುತ |
ರಿರ್ವರುಂ ಜಗದವನದೀಕ್ಷಿತರೊರ್ವರೊರ್ವರು ತಾವ್ ||
ನಿರ್ವಹಿಪ ಕಜ್ಜಗಳನುಸಿರುತ |
ಖರ್ವಮಹಿಮಾಶಾಲಿಗಳು ನಲಿ |
ದಿರ್ವರುಂ ಶಿವತತ್ತ್ವಸಾರವನಿಳೆಗೆ ತಿಳುಹಿದರು ||೨೫||

ಕೆಲದಿವಸವಿಾತೆರದೊಳಾಯೆಡೆ |
ಯೊಳಗೆ ರೇಣುಕ ಕಳೆದು ಕಾಲವ |
ಬಳಿಯವಾಗರಪುರವಧೀಶ್ವರನಾಣತಿಯ ಬಗೆದು |
ತಳರ್ದ*ನಲ್ಲಿಂ ಮುಂದೆ ಭಕ್ತರ |
ಕುಲವ ಕಾಪಿಡಲೆಂದು ಕರುಣಾ |
ನಿಲಯನಾಶ್ರಿತಗೇಯನುಜ್ವಲಕಾಯ ಗುರುರಾಯ ||೨೬||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಏಳನೆಯಸಂಧಿ

ಸೂ|| ಪ್ರೇಮದಲಿ ಗುರುವರ್ಯನೇಕೋ |
ರಾಮನಲಿ ನುಡಿಗುಡುತೆ ತೆರಳುತೆ |
ಸೌಮನಸ್ಯದಿ ಋಷ್ಯಶೃಂಗನ ಬಳಿಯನೈದಿದನು ||

ಪರಮಕರುಣಾಪೂರಿತಾಂತಃ |
ಕರಣ ರೇಣುಕನಭ್ರಮಾರ್ಗದೆ |
ತೆರಳ್ದು* ತುಹಿನಾದ್ರಿಯಲಿ ಕಂಡನು ಮುನಿಪಮಂಡಲಿಯ ||
ಎರಗಿದರು ಗುರುವರ್ಯನಂಘ್ರಿಗೆ |
ಸರಳಹೃದಯರು ದೈವಭಕ್ತಿ |
ಸ್ಫುರಿತಭಾವರು ತಮ್ಮ ಸುಕೃತದ ಫಲವು ಕೈಸೇರೆ ||೧||

ಸಂತವಿಸಿದನು ನಗುತೆ ರೇಣುಕ |
ನಂತವರನೆಲೆ ಶೈಲತನಯಾ |
ಕಾಂತಪೂಜಾಮುದಿತವಿಮಲಸ್ವಾಂತರಿರ ನೀವೀ ||
ನೋಂತ ನೋಂಪಿಗೆ ಮೆಚ್ಚುತಭವನು |
ಸಂತಸಂದಳೆದೆನ್ನ ಕಳುಪಿಹ |
ನಿಂತಳುವದಿಳೆಗರುಹೆ ಶಿವಸಿದ್ಧಾಂತತತ್ತ್ವವನು ||೨||

ಮರೆಯಲಾಗದು ಶಿವನ ನಾಮವ |
ತೊರೆಯಲಾಗದು ಶಿವನ ಜಾನವ |
ನೊರೆಯಲಾಗದು ಶಿವನ ಭಕ್ತವ್ರಾತದಲಿ ಪಳಿವ ||
ನೆರೆಯಲಾಗದು ನಾಸ್ತಿಕರಲಿದೆ |
ಪರಮಶಿವಸಿದ್ಧಾಂತತತ್ತ್ವವು |
ಪೊರೆಯದಿರಲಾಗದು ಕಣಾ ಮರೆವೊಕ್ಕ ಮನುಜರನು ||೩||

ಶಿವನ ಪೂಜಿಪುದೇಗಳುಂ ಪರ |
ಶಿವನ ನುತಿಸುವುದಾಗಳುಂ ನಗ |
ಭವೆಯ ರಮಣನ ಪಾಡಿ ಬೇಡುವುದಲ್ತೆ ಪಗಲಿರುಳುಂ ||
ಅವಿರತವು ಕೈವಲ್ಯಕಾಮಿಗ |
ಳವನಿಯೊಳಗೀತತ್ತ್ವವನು ಸಾ |
ರುವುದು ನಲಿವುದು ನಾಡುನಾಡಿನೊಳಿಲ್ಲ ಪಾಡುವುದು ||೪||

ಈವಗೆಯೊಳಾಸ್ತಿಕ್ಯಮಾರ್ಗದಿ |
ನಾವಗಂ ಚರಿಸುವುದು ನಿರ್ಮಲ |
ಭಾವರೆನಿಸುತೆ ದೇವದೇವನನುಗ್ರಹವ ಪಡೆದು ||
ಭಾವುಕವ ಪೊಂದುವುದೆ ತತ್ತ್ವವು |
ನೀವಿದನು ತಿಳಿಯುತಲಿ ಸುಖಿಸಿರಿ |
ಶೈವವಿದ್ಯಾಪರಿಣತರಿರಾ ಎಂದ ರೇಣುಕನು ||೫||

ಲಾಲಿಸುತೆ ಗುರುವಾಕ್ಯವನು ಮುನಿ |
ಜಾಲಮತಿಶಯಮಾದ ಹರ್ಷವ |
ತಾಳಿ ಸಾಷ್ಟಾಂಗಪ್ರಣಾಮವನೆಸಗಿ ಕೈಮುಗಿದು ||
ಕೇಳಿಹೆವು ಮುನ್ನೀಪ್ರದೇಶದೆ |
ಬಾಲಶಶಿಧರ ಮಹಿಷರೂಪವ |
ತಾಳಿ ಚರಿಸಿದನೆಂದು ನಮಗಾಕಥೆಯನೊರೆಯೆನಲು ||೬||

ಆಗಳಾ ಗುರುವರ್ಯ ನಸುನಗು |
ತಾಗಲೆನ್ನುತೆ ಪೂರ್ವವೃತ್ತವ |
ಬೀಗಿ ಬಿತ್ತರಿಸಿದನು ಕೇಳ್ವರ ದುಷ್ಕೃತವು ಪರಿಯೆ ||
ಭಾಗಧೇಯವು ಭಕ್ತಬೃಂದಕೆ |
ಭೋಗಿಭೂಷನ ದಿವ್ಯಚರಿತವಿ |
ದಾಗಳುಂ ಪಾವನವು ಪರಿಕಿಸೆ ಮೋಕ್ಷಸಾಧನವು ||೭||

ಶಮನತನುಭವಮುಖ್ಯಪಾಂಡವ |
ರಮಿತವಿಕ್ರಮರಂದು ಕಲಿಯುಗ |
ಸಮನಿಸುವುದಿನ್ನಿರಲು ತಗದೀಧರೆಯೊಳೆಂದೆನುತೆ ||
ಯಮದುರಂತಮದಾಪಹನನಾ |
ಪ್ರಮಥನಾಥನ ಸೇವಿಸುತ್ತಲಿ |
ವಿಮಲಮುಕ್ತಿಯನೊಂದೆ ಶೀತಾದ್ರಿಯನು ಸಾರಿದರು ||೮||

ಕೃತ್ತಿವಾಸನನರಸಿ ಕಾಣದೆ |
ಯೆತ್ತಲುಂ ಪಾಂಡವರು ತೊಳತೊಳ |
ಲುತ್ತಿರಲು ಮಿಗೆ ಭೀಮಸೇನನು ಶಿಖರವೇರುತಲಿ ||
ಸುತ್ತಲುಂ ನಿಟ್ಟಿಸಲು ಸಾನುವಿ |
ನೊತ್ತಿನಲಿ ವನಮಹಿಷಯೂಥಮ |
ದಿತ್ತುದಲೆ ಕಂಗಳಿಗೆ ಕಡುನಲಿವನು ವೃಕೋದರನ ||೯||

ತೊರೆದು ಹಿಂಡನದೊಂದು ಮಹಿಷವು |
ಭರದೆ ಮುಂದೈತರುತೆ ಭೀಮನ |
ನಿರುಕಿಸುವುದೆಂಬಂತೆ ಮೊಗಮೆತ್ತೀಕ್ಷಿಸುತ್ತಿರಲು ||
ಅರರೆ ಎನ್ನನೆ ನೋಳ್ಪುದೇನ |
ಚ್ಚರಿಯಿದರ ಮೈವೆಳಗು ಕಂಗಳ |
ಸೆರೆವಿಡಿವುದೆಂದಗ್ರಜಾತಗೆ ತೋರುವನಿತರಲಿ ||೧೦||

ಪೊಡವಿಗೊತ್ತುತೆ ಮುಸುಡ ಬಾಲವ |
ನೆಡೆವಿಡದೆ ಮೇಲೆತ್ತಿ ಜವದಿಂ |
ಕೊಡಹುತಿರೆ ಜಾವಳವಿದಲ್ತಾ ಮ್ಮಡನೆ ನಮಗೀಗಳ್ ||
ಕಡುದಯದೆ ಮೈದೋರಿರುವನೆಂ |
ದಡಿಗಡಿಗೆ ಪೊಡಮಟ್ಟು ನಲಿಯುತೆ |
ದೃಢಮನದೆ ಸಂಪ್ರಾರ್ಥಿಸಿದ ಕೈಗಳನು ಮುಗಿಯುತಲಿ ||೧೧||

ಘೋರಪಾಪಧ್ವಂಸಕಾರೀ |
ವಾರಣಾಜಿನಚೇಲಧಾರೀ |
ಚಾರುತರಕೈವಲ್ಯಲಾಭದೃಗಿಷ್ಟಸುಖಲಹರೀ ||
ಮಾರನಿರ್ಭರಗರ್ವಹಾರೀ |
ಗೌರಿಯಂತಃಪುರವಿಹಾರೀ |
ಬಾರಿಬಾರಿಗು ನಮಿಪೆನೆನ್ನನು ಸಲಹು ವೈದೋರಿ ||೧೨||

ನಿನ್ನನೀಕ್ಷಿಪ ಕುತುಕದಿಂದಲಿ |
ಬನ್ನಬಟ್ಟಿವು ಬವಣೆಗೊಂಡೆವು |
ಸನ್ನುತನೆ ವೈದೋರಿ ರಕ್ಷಿಸು ಬೆಸಸು ಕಜ್ಜವನು ||
ಖಿನ್ನತೆಯ ಪರಿಹರಿಸಿ ನಮ್ಮನು |
ಮನ್ನಿಸೈ ಪ್ರಮಥಾಧಿಪತಿ ಗತಿ |
ಯಿನ್ನದಾರೈ ನೀಂ ಕಟಾಕ್ಷಿಸದಾಗೆ ನೊಂದೆಮಗೆ ||೧೩||

ಮೊರೆಯಿಡುತ್ತಿರಲಿಂತು ಧರ್ಮಜ |
ನಿರದೆ ಮಹಿಷವು ತನ್ನ ಬಾಲವ |
ತಿರುಗಿಸುತ್ತುತ್ತರವ ತೋರಲ್ಕದರ ಸಂಜ್ಞೆಯನು ||
ಅರಿದು ಪಾಂಡುತನೂಜರೆಸೆವು |
ತ್ತರದಿಶೆಯನೈದಿದರು ಪಾವನ |
ತರಮೆನಿಪ್ಪೊಂದೆಡೆಯೊಳಾಯ್ಕನೆ ತಪವನೆಸಗಿದರು ||೧೪||

ರಾಯಗುವರರ ಭಕ್ತಿಯನು ಕಂ |
ಡಾ ಯಮೀಶ್ವರಮಂಡಲಾಗ್ರಣಿ |
ಗೇಯ ಮೃತ್ಯುಂಜಯನನುಗ್ರಹವೇರೆ ವೈದೋರೆ ||
ಆಯತದ ವೈಭವದ ಮುಕ್ತಿ |
ಶ್ರೀಯ ಕೈಗೊಂಡೆಸೆದರವರ್ಗ*ಳ |
ನೇಯಮಹಿಮಗೆ ಶಿವಗದೆಂತುಟೊ ಭಕ್ತವಾತ್ಸಲ್ಯಂ ||೧೫||

ಇದುವೆ ಮಹಿಷನ ವೃತ್ತವೆಲೆ ಕೋ |
ವಿದರಿರಾ ನೀವತಿಪವಿತ್ರರು |
ಚದುರರಿದನಾಲಿಸಿದಿರಲೆ ನಿಮ್ಮಘವು ತೇಲಿದುದು ||
ಮದನವೈರಿಯ ಜೆಸನನೆಸಗಲು |
ಪದೆದು ಸಾರ್ದಪೆನಿನ್ನೆನುತ್ತಲಿ |
ಸದಯ ರೇಣುಕ ತೆರಳ್ದ*ನೇಕೋರಾಮನಾಶ್ರಮಕೆ ||೧೬||

ಪಲಬರಂತೇವಾಸಿಗಳು ಕೆಲ |
ಬಲದೊಳೊಪ್ಪಿರೆ ಶೈವತತ್ತ್ವವ |
ನೊಲಿದು ಬಣ್ಣಿಸಿ ಮೆರೆಯುವೇಕೋರಾಮ ಲೋಕಗುರು ||
ಕುಳಿರ ಬೆಟ್ಟದ ನಡುವೆ ತೊಳತೊಳ |
ತೊಳಗುವಾ ವೈರಾಗ್ಯಪೀಠದೆ |
ನೆಲಸಿ ಶಿಷ್ಯರ್ಗೊರೆಯುತಿರ್ದನು ಶೈವತತ್ತ್ವವನು ||೧೭||

ಮಾರಹರನುರೆ ಮೆರೆವ ದಿವ್ಯಾ |
ಘೋರಮುಖಭವನಾಗಿ ಶಿವಸುಖ |
ವಾರಿನಿಧಿಸಂಮಗ್ನನೀಶಾಜ್ಞೆಯಲಿ ಹಿಮಗಿರಿಯೊಳ್ ||
ತೋರುತಿರುವಾ ರಾಮಲಿಂಗದೆ |
ಧಾರಿಣಿಯನುದ್ಧರಿಸೆ ಮೂಡಿದ |
ಧೀರನೇಕೋರಾಮನೆಸೆದನು ಭೃಂಗಿಗೋತ್ರಪತಿ ||೧೮||

ಅರಿದು ರೇಣುಕನಾಗಮಿಪ್ಪುದ |
ಪರಮಮುದದಿಂ ಶಿಷ್ಯಮಂಡಲಿ |
ಗೊರೆದನೆಲೆ ಮಕ್ಕಳಿರ ಸದ್ಯೋಜಾತಮುಖಜಾತಂ ||
ನಿರುಪಮಿತನಿಜಮಹಿಮನಿಂದ್ಯೆ |
ತರುವನೆಮ್ಮೊಂದಿಗನು ಭರದಿಂ |
ದೊರೆತುದಲ್ತೆ ಸುಯೋಗಮೆಂದೊಕ್ಕಣಿಸುವನಿತರಲಿ ||೧೯||

ಹಿಮನಗೇಂದ್ರದೆ ಪಸರಿಸುತ್ತಿರೆ |
ವಿಮಲದೀಧಿತಿ ಸರ್ವಮುಂ ಸಂ |
ಭ್ರಮಿಸೆ ಲೋಕಮಪೂರ್ವಮಿದೆನಲ್ ಶಾಂತಿಮಯಮಾಗೇ ||
ಅಮಮ ರೇಣುಕನಲ್ಲಿಗೊಲಿದಾ |
ಗಮಿಸಿದನು ಬಳಿಸಂದು ನುಡಿಸಿದ |
ನಮಿತತೇಜೋನಿಧಿ ದಯಾಂಬುಧಿ ಶೈವಸುಖವೀಧಿ ||೨೦||

ಬಳಿಯಮಿರ್ವರುಮಲ್ಲಿ ಸಂತಸ |
ಗೊಳುತಮಲಶಿವಯೋಗಸೌಖ್ಯವ |
ತಳೆದು ಕೆಲದಿನಮಿರ್ದರಂತೇವಾಸಿಜನದೊಡನೆ ||
ಇಳೆಯೊಳೆತ್ತಲು ಪಸರಿಸಿತ್ತಾ |
ಗಳೆ ಶಿವೋಜ್ವಲದಿವ್ಯಮತವ |
ಗ್ಗಳವು ಶಿವಯೋಗಿಗಳ ಮೈಮೆಯು ಪೊಗಳಲಸದಳವು ||೨೧||

ತೆರಳ್ದ*ನಲ್ಲಿಂ ಬಳಿಯಮಭ್ರದೆ |
ಗುರುವರನು ಭರದಿಂ ಕಕುದ್ಗಿರಿ |
ಗಿರದೆ ಕಂಡನು ಋಷ್ಯಶೃಂಗನ ಮೌನಿಪುಂಗವನ ||
ಪರಮಸಂತುಷ್ಟಾಂತರಂಗನು |
ಸರಳಹೃದಯನು ಶಿಷ್ಯಮಂಡಲ |
ಪರಿವೃತನು ಕರೆದುಚಿತಪೀಠವನಿತ್ತು ನುಡಿಸಿದನು ||೨೨||

ಚಿತ್ತವಿಪ್ಪುದು ರೇಣುಕನೆ ನೀಂ |
ಚಿತ್ತಜಾರಿಯ ದಿವ್ಯಸಮ್ಮುಖ |
ದತ್ತಣಿಂದ್ವೈತಂದೆಯಲೆ ಭೂತಲವನುದ್ಧರಿಸೆ ||
ಮತ್ತಪೋವನವಾಯ್ತು ಪಾವನ |
ವಿತ್ತಲಿಹ ಶಿವಶರಣಜಾಲಕೆ |
ಬಿತ್ತರಿಸು ದಯೆಗೆಯ್ದು ವೃತ್ತವನೀ ಕಕುದ್ಗಿರಿಯಾ ||೨೩||

ಎನಲು ರೇಣುಕ ಮಂದಹಾಸವು |
ಜನಿಸೆ ಮುಖದಲಿ ನುಡಿದ ಕೇಳ್ಳೈ |
ಮುನಿಪ ಪೂರ್ವದೊಳೆಸೆದನೊರ್ವ ಕಣಾದನೆಂಬುವನು ||
ಘನಗುಣಾನ್ವಿತನನುಪಮನು ಮೇ |
ದಿನಿಯೊಳನಘನು ತಪವನೆಸಗಿದ |
ನನವರತ ವಾತಾಂಬುಪರ್ಣಾಶನನು ತಾನೆನಿಸಿ ||೨೪||

ಮಾಸವೆಲ್ಲವು ವಿರಚಿಸುತ್ತುಪ |
ವಾಸವನು ತಾನಿನಿಸು ಬಳಲದೆ |
ಬೇಸರದೆ ಕಡೆಯಲ್ಲಿ ಪೀರ್ದು ತೃಣಾಗ್ರದೊರ್ಕಣವ ||
ಭಾಸಿಸುವ ಪಂಚಾಗ್ನಿಮಧ್ಯದೊ |
ಳೋಸರಿಸದೆಯೆ ತಪವನೆಸಗಿದ |
ದೂಸರಿಂದೆ ಕಣಾದನೆಂದು ನೆಗಳ್ತೆವಡೆದೆಸೆದಂ ||೨೫||

ಉಗ್ರತಪವೆಸಗುವ ತಪಸ್ವಿಗ|
ಳಗ್ರಗಣ್ಯನ ಸುದೃಢಚಿತ್ತವ |
ನುಗ್ರನೀಕ್ಷಿಸಿ ಕರುಣೆವೆರಸುತಲೊಯ್ಯನೈತಂದು ||
ವ್ಯಗ್ರಮನನಾಗದಿರು ತಪವು ಸ |
ಮಗ್ರವಾದುದು ಭಾಪೆನುತ್ತಲ |
ನುಗ್ರಹಿಸಿ ಬಾಲೇಂದುಶೇಖರನಿತ್ತನೀಪ್ಸಿತವ ||೨೬||

ಇಂತು ಮೃತ್ಯುಂಜಯುನನುಗ್ರಹ |
ನಾಂತು ಮೆರೆದ ಕಣಾದಮುನಿಯಿಂ |
ಕಾಂತಮೆನಿಸಿಹುದೀ ಮನೋಜ್ಞಕ್ಷೇತ್ರಸುಚರಿತ್ರಂ ||
ಚಿಂತಿತಾರ್ಥಪ್ರದನ ಸದಯನ |
ಕಂತುಹರನಾ ಕೃಪೆಯ ವ್ಯೈಮೆಯ |
ದಂತುಟೆಂತುಟೆನುತ್ತೆ ಬಣ್ಣಿಸಬಲ್ಲರಾರಿಹರೋ ||೨೭||

ಎಂದಿನಿತು ಬಿತ್ತರಿಸಿ ರೇಣುಕ |
ನಂದೆಸೆವ "ತತ್ತ್ವಮಸಿ" ಮೊದಲಹ |
ಸಂದ ವರವಾಕ್ಯಾರ್ಥಜಾಲವನಿಳಿಗೆ ಬೋಧಿಸುತೆ ||
ಪೊಂದಿಸಿದನತಿಶಯದ ನಿತ್ಯಾ |
ನಂದವನು ಮುನಿಬೃಂದಸನ್ನುತ |
ನಿಂದುಧರನಾ ಪಂಚವಿಂಶತಿಲೀಲೆಗಳನೊರೆದ ||೨೮||

(ಚಂದ್ರಧರಲೀಲೆ)

ಸುರರಿಗೋರ್ರೋರ್ವರನು ಸುತೆಯರ |
ನಿರದೆ ಚಂದ್ರಗೆ ಸಪ್ತವಿಂಶತಿ |
ವರತನುಜೆಯರನಿತ್ತು ಸಮಭಾವದಲಿ ನೋಡೆಂದು ||
ಒರೆಯಲಾಶಶಿಯೊರ್ವಳೊಳೆ ಕ |
ಟ್ಟಿರಕದಿಂಕೂಡಿರಲು ದಕ್ಷನು |
ನೆರೆ ಶಪಿಸೆ ತವುವರಲು ನೋಂತನ ಸಿರದೆ ಹರ ತಳೆದ ||೨೯||

(ಉಮಾಮಹೇಶ್ವರಲೀಲೆ)

ಶೌರಿ ಕೌಸ್ತುಭದೊಡನೆ ಮೇಣ್ ಮಂ |
ದಾರಮದು ಸೌರಭದೊಡನೆ ಸಲೆ |
ಸೇರಿ ಸೊಗಯಿಸುವಂತೆ ಹರನುಮೆಯೊಡನೆ ತಾ ಕೂಡಿ ||
ನೀರಜಭವಾಂಡಗಳ ನಿರ್ಮಿಸಿ |
ಭೂರಿಸಂತೋಷವನು ಸುಮನೋ |
ವಾರಕಿತ್ತೆಸೆದಿರ್ದನೊಪ್ಪುವುಮಾಮಹೇಶ್ವರನು ||೩೦||

(ವೃಷಭವಾಹನಲೀಲೆ)

ವಿಲಯವೈದಿಸಿ ಮೂರುಲೋಕವ |
ನೊಲಿದು ಚಿದ್ಧರ್ಮವನು ನೆನೆಯಲು |
ಚಳಕದಿಂದದು ಬಂದು ನಿಂದುದು ವೃಷಭರೂಪಿನಲಿ ||

ಬಳಿಯು ಮದನೇರಿದನುಮಾವರ |
ನಿಳೆಯೊಳಾರಯೆ ಧರ್ಮಿ ಧರ್ಮದೆ |
ನೆಲಸಿ ಮೆರೆಗುಮೆನುತ್ತೆ ವಿಬುಧರು ಪೊಗಳೆ ಸಂಮುದದಿಂ ||೩೧||

(ತಾಂಡವೇಶ್ವರಲೀಲೆ)

ಮೊಳಗೆ ಡಮರುನಿನಾದ ಸುರಶ್ರೈ |
ವಲಿನಿಯಾತಣ್ಬನಿಗಳುದಿರಲು |
ಸಲೆ ಮೊರೆಯೆ ಸರ್ಪಾಳಿ ಗಜದೈತ್ಯಾಜಿನವ ಪೊದೆದು ||
ಮಿಳಿರೆ ಕಾಲಾನಲವಿಲೋಚನ |
ವಿಲಸದಾತಪವೊಡೆಯೆ ದಿಙ್ಮಂ |
ಡಲವು ಕುಣಿದಾ ತಾಂಡವೇಶನ ಲೀಲೆ ಚಿತ್ರವಲಾ ||೩೨||

(ಗಿರಿಜಾಕಲ್ಯಾಣಲೀಲೆ)

ಗಿರಿಜೆ ತಪವನು ಮಾಡುವಲ್ಲಿಗೆ |
ತೆರಳಿ ವಟುವೇಷದೊಳಗಾಕೆಯ |
ಸರಸವಚನಗಳಿಂದೆ ನುಡಿಸುತೆ ಬಗೆಯರಿದು ಮೆಚ್ಚಿ ||
ಇರದೆ ಕರೆದುಯ್ಯುತಲಿ ತನ್ಮಂ |
ದಿರಕೆ ಸುರರೈತಂದು ನಿಂದಿರೆ |
ಹರಿಸದಿಂದವಳಲ್ಲಿ ಪಸೆನಿಂದನು ಮಹೇಶ್ವರನು ||೩೩||

(ಭಿಕ್ಷಾಟನಲೀಲೆ)

ಮನಸಿಜಾತನ ರೂಪನಿಳಿಕೈ |
ವನುಪಮದ ರೂಪಾಂತು ನಾಕದೊ |
ಳನುವಿನಧಿಗತರೂಪಯೌವನದೇವಲಲನೆಯರ ||
ನನೆಸರಲನಂಬಿಂಗೆ ಗುರಿಗೈ |
ದನುನಯದಿ ಭಿಕ್ಷೆಯನು ಬೇಡಿದ |
ನನಘ ಚಿನ್ಮಯಮೂರ್ತಿ ಭಿಕ್ಷಾಟನದ ಲೀಲೆಯಲಿ ||೩೪||

(ಕಾಮದಹನಲೀಲೆ)

ಅಲರೆ ಕಣೆಯಳಿವಿಂಡೆ ಶಿಂಜಿನಿ |
ತೊಳತೊಳಗುವಿಕ್ಷುವದೆ ಚಾಪವು |
ಗಿಳಿಯೆ ತೇರಬಳೆಯರೆ ಸೈನ್ಯವು ಸಸಿಯೆ ಸತ್ತಿಗೆಯು ||
ಕೆಳೆಯನಾಮಧುವಾಗೆ ಮನಸಿಜ |
ಮುಳಿದು ನಿಂದೀಸರನನಿಸಲಾ |
ಗಳೆ ಹರನು ನಿಟಿಲಾಕ್ಷದುರಿಯಿಂ ಸ್ಮರನನುರಿಪಿದನು ||೩೫||

(ಕಾಲಸಂಹರಲೀಲೆ)

ನರಪತಿ ಶ್ವೇತಾಖ್ಯನಲರ್ಗ*ಳ |
ತರುತೆ ಸೂಳೆಯ ಮನೆಗೆ ಪಥದಲಿ |
ಭರದೆ ಬೀಳ್ದೊಂದಲರನರ್ಪಿತಮಕ್ಕೆ ಶಿವಗಿದೆನೇ ||
ದೊರೆತಳಾತಗೆ ರಂಭೆ ನಾಕದೊ |
ಳರಿಪಲವಳವ ಹರನ ನುತಿಸಿದ |
ನರಕಕಾತನನುಯ್ಯೆಬಂದಂತಕನ ಹರ ಸದೆದ ||೩೬||

(ತ್ರಿಪುರಹರಲೀಲೆ)

ಧರಣಿಯೇ ರಥಮದಕೆ ಶಶಿಭಾ |
ಸ್ಕರರೆ ಗಾಲಿಗಳಜನೆ ಸಾರಥಿ |
ತುರಗಗಳು ನಿಗಮಗಳು ಮೇರುವೆ ಧನುವು ತಾನಾಗೆ ||
ಉರಗಪತಿಯೇ ಮೌರ್ವಿ ಹರಿಯೇ |
ಸರಲೆನಲ್ ಸುಟ್ಟುರುಪಿದಂ ತ್ರಿಪು |
ರರನು ಮೆರೆಯಿಸಿದನು ಗಿರೀಶನು ತನ್ನ ವೈಮೆಯನು ||೩೭||

(ಜಲಂಧರಹರಲೀಲೆ)

ಸರಸಿರುಹಭವನಿಂದೆ ಪಡೆಯುತೆ |
ವರವ ದಿಕ್ಪಾಲಕರ ಸೋಲಿಸಿ |
ಸೆರೆವಿಡಿಯುತವರಂಗನೆಯರನು ಹರಿಯನುರೆ ಮೆಟ್ಟಿ ||

ಬರೆ ಜಲಂಧರ ವಿಜಯಕೋಸುಗ |
ಶರಧಿಯಲಿ ಚಕ್ರವನು ಬರೆದದ |
ನರರೆಯಂಗುಟದೆತ್ತಿಸುತೆ ಹರನವನ ತಲೆಗಡಿದಂ ||೩೮||

(ಬ್ರಹ್ಮಶಿರಶ್ಛೇದಲೀಲೆ)

ಆನೆ ನಿರ್ಮಿಪೆ ಜಗವನೆಲ್ಲವ |
ನಾನೆ ತಳೆದಿಹೆನೆಲ್ಲವಾರಯ |
ಲಾನೆ ಬೊಮ್ಮವೆನಲ್ ವಿರಂಚಿಯು ಶೌರಿಯೆಲ್ಲರುವಂ ||
ಆನಿಗಮಸಂತತಿಯುಮಂ ಸ್ವಾ |
ಧೀನದಲಿ ನಿರ್ಮಿಸಿದ ಶಿವನೇ |
ತಾನೆ ಬೊಮ್ಮವೆನಲ್ ಗಿರೀಶನು ಬಿದಿಯ ತಲೆಯರಿದಂ ||೩೯||

(ವೀರಭದ್ರಲೀಲೆ)

ಕ್ರತುವ ವಿರಚಿಸೆ ದಕ್ಷನವನಾ |
ಸುತೆ ತೆರಳ್ದಾಯೆಡೆಗೆ ತನ್ನಯ |
ಪತಿಯ ನಿಂದೆಯ ಸೈಸದಗ್ನಿಯ ಕುಂಡದಲಿ ಬೀಳೇ ||
ಶಿತಿಗಳನು ತಾನೈದೆ ವ್ಯೆದೋ |
ರುತಲಿ ದಕ್ಷನ ತಲೆಯ ಕಡಿದಿ |
ಕ್ಕುತೆ ಕರಂ ಶ್ರೀವೀರಭದ್ರನ ಲೀಲೆಯಲಿ ಮೆರೆದಂ ||೪೦||

(ಶರಭಲೀಲೆ)

ಘೋರನಾದ ಹಿರಣ್ಯಕಶ್ಯಪ |
ನಾರುಧಿರವನು ಪೀರ್ದು ಮದಿಸುತೆ |
ಚೀರುತಿರೆ ನರಸಿಂಹ ಲೋಕವು ಕಂಗೆಡುತ್ತಿರೆ ಮೇಣ್ ||
ಧೀರನೆಸೆವಾ ಶರಭರೂಪಿಂ |
ಸಾರಿ ಸದೆದು ತದೀಯಚರ್ಮವ |
ಚಾರುಚೇಲವನೆಸಗಿ ಮೆರೆದನು ಶಾಂತನತ್ಯಂತಂ ||೪೧||

(ಅರ್ಧನಾರೀಶ್ವರಲೀಲೆ)

ಕ್ಷೀರಸಾಗರದಲ್ಲಿ ನೆಲಸಿರ |
ಲಾ ರಮಾಧವ ಬೊಮ್ಮನಲ್ಲಿಗೆ |
ಸಾರಿ ಪೊಣರಲು ಪಾಶುಪತದಿಂದಿಸುತಲೋರೊರ್ವರ್ ||
ಪೋರೆ ದಳ್ಳುರಿ ದಹಿಸೆ ಲೋಕವ |
ವಾರಿನಿಧಿಯೊಳಗೊಗೆದು ಲಿಂಗಾ |
ಕಾರದಿಂ ತಣ್ಪೆಸಗಿದನು ಹರನರ್ಧನಾರೀಶಂ ||೪೨||

(ಕಿರಾತಲೀಲೆ)

ಅಂದು ಸೃಷ್ಟಿಯಗೈದ ವಿಧಿ ತಾಂ |
ತಂದೆ ಕಣ ಸರಸತಿಯು ಕಾಮಿಸೆ |
ಪೊಂದಿ ಭೀತಿಯನೆರಳೆರೂಪಿಂದೋಡಲಜನವಳಾ ||
ಪಿಂದಳೆದು ಬಂದೆಳೆಯೆ ಹರಹರ |
ಎಂದೊರಲಲಾವಾಣಿ ಹರ ಸಾ |
ರ್ಙಂದಜನ ತಲೆಯೊಂದ ಕಡಿಯುತ್ತಿರೆಯೆ ವರವಿತ್ತಂ ||೪೩||

(ಕಂಕಾಳಧರಲೀಲೆ)

ನೆಲನ ಮೂರಡಿಯೆರೆದು ಬಲಿಯನು |
ತುಳಿದು ಪಾತಾಳಕ್ಕೆ ಗಗನಕೆ |
ಬಳೆದು ನೀಡುತೆ ಕಾಲನುಪಟಳಗೊಳಿಸೆ ಹರಿ ಬಿದಿಯ ||
ಮುಳಿದವಸು ಕಾಲುಡಿಯೆ ಶಪಿಸಲು |
ನೆಲನನಳಲಿಸುತಿರ್ದ ಪಂಗುವ |
ಕೊಲುತೆ ತಳೆದವನೆಲುವ ಹರ ಕಂಕಾಳಧರನೆಸೆದಂ ||೪೪||

(ಚಂಡೇಶಾನುಗ್ರಹಲೀಲೆ)

ವಿರಚಿಸುತ್ತಲಿ ಮಳಲ ಲಿಂಗವ |
ಕರೆದುತಂದಾ ಗೋಗಳನು ಪಾ |
ಲ್ಗರೆದು ಪೂಜಿಸುವವನನೀಕ್ಷಿಸಿ ತಂದೆ ಮುನಿದೊದೆಯೆ ||

ತರಳ ಚಂಡೇಶ್ವರನು ತಚ್ಛಿರ |
ವರಿದ ಕೈಗೊಡಲಿಯಿನಮರ್ಷದೆ |
ಹರನವನ ಚಂಡತೆಗೆ ಮೆಚ್ಚಿ ಗಣೇಶತೆಯನಿತ್ತಂ ||೪೫||

(ವಿಷಧರಲೀಲೆ)

ಕರುಣಿಸಲು ದೂರ್ವಾಸನಿಂದ್ರಗೆ |
ಗಿರಿಜೆಯಿತ್ತಾಪೂಸರವನವ |
ನಿರದೆ ಬಿಸುಡಲು ಗರ್ವದಿಂ ಸಿರಿಯಬ್ಧಿಯೊಳಗಡಗೆ ||
ಉರಗಪತಿಯನು ಸುತ್ತಿ ವರಮಂ |
ದರವ ಕಡೆಗೋಲ್ಗೈದು ಕಡೆಯಲು |
ಶರಧಿಯಲಿ ಬಿಸವೊಗೆಯಲದ ಕುಡಿದಿಳೆಯ ಹರ ಪೊರೆದಂ ||೪೬||

(ವಿಷ್ಣುಚಕ್ರಪ್ರದಾನಲೀಲೆ)

ಅಂದು ದನುಜರ ಬಾಧೆಗಳ್ಕುತ |
ಲಿಂದಿರಾಪತಿ ದಶಶತಾಬ್ಜಗ |
ಳಿಂದಲರ್ಚಿಸುವವಸರದೊಳೊಂದಬುಜ ಕುಂದಾಗೆ ||
ಚಂದದಿಂ ನಿಜನೇತ್ರವನೆ ತೆಗೆ |
ದಿಂದುಧರನನು ಪೂಜಿಸಿದನದ |
ರಿಂದೆ ಶಿವ ಮೆಚ್ಚಿತ್ತನಾತಂಗೆಸೆವ ಚಕ್ರವನು ||೪೭||

(ಗಣೇಶಬೋಧಲೀಲೆ)

ದ್ವಿರದವಕ್ತ್ರನ ಪೆತ್ತನರ್ಘ್ಯಾ |
ಭರಣಗಳನವಗಿತ್ತು ಮನ್ನಿಸಿ |
ವರಚತುರ್ದಶವಿದ್ಯೆಗಳನವಗರಿಪಿ ಗಣಕವನಂ ||
ವಿರಚಿಸುತ್ತಧಿಪತಿಯನ್ನೈವೊಗ |
ಮೆರೆದನಲೆ ಕನಕಾದ್ರಿಯೊಳಗೇ |
ವೊರೆವೆ ನಗನಂದಿನಿಯ ಮನದೆರೆಯನ ವಿನೋದಗಳ ||೪೮||

(ಕುಮಾರೋತ್ಪತ್ತಿಲೀಲೆ)

ಮೃಡ ಮೃಡಾನಿಯೊಳಂದು ತಾಂ ಸುಸಿ |
ಲೊಡರಿಸುತ್ತಿರಲಲ್ಲಿಗೈತಂ |
ದೊಡನೆ ಶಿಖಿ ತಚ್ಛುಕ್ರವಿಾಂಟುತೆ ಗರ್ಭವೊಂದುತಲಿ ||
ಬಿಡಲದನು ಶರವಣದೊಳೊಲ್ದಾ |
ಗಡೆ ಜನಿಯಿಸುತ್ತೆಸೆದ ಶಿವನಾ |
ತೊಡೆಯೊಳರುವೊಗ ಕೃತ್ತಿಕಾವಿಸರಾಭಿವರ್ಧಿತನು ||೪೯||

(ಏಕಪಾದಲೀಲೆ)

ಚರಣಕಟಕಭುಜಂಗಗಳಿಗಾ |
ತರಣಿ ಶಶಧರರಳ್ಕಿ ಕಳೆಗುಂ |
ದಿರೆ ರಜತಕಿಂಕಿಣಿಗಳೆನಿಸಲು ತಾರಕಾನಿವಹಂ ||
ಮೆರೆದುದೀಶ್ವರನೇಕಪಾದವು |
ಸುರಪಥಕಟಾಹವನು ಭೇದಿಸಿ |
ನೆರೆ ವಿರಾಜಿಸುವಬ್ಜವಿುದೆನಲ್ ಬೆಡಗನಾಳುತಲಿ ||೫೦||

(ಸುಖಾವಹಮೂರ್ತಿಲೀಲೆ)

ಅರಿಯದಿನಿಸುಂ ಮುಕ್ತಿಯಿಾಶ್ವರ |
ಚರಣಭಕ್ತಿಯಿನಪ್ಪುದೆಂಬುದ |
ನಿರದೆ ಚಿತ್ತದ ಶುದ್ಧಿ ಪರಿಪರಿಕರ್ಮಗಳ ಸಮೆದು ||
ಮರಮರಳಿ ಭವಕುರುಳ್ವ* ಮರುಳ |
ರ್ಗರಿವನೀಡುತಲೈದೆ ಮೋಕ್ಷವ |
ಕರುಣಿಸಲಿಕಾದುದು ಸುಖಾವಹಮೂರ್ತಿಲೀಲೆಯದು ||೫೧||

(ದಕ್ಷಿಣಾಮೂರ್ತಿಲೀಲೆ)

ತೊಳಪ ಜಡೆಗಳಲೆಸೆಯೆ ಗಂಗೆಯು |
ಬೆಳಗೆ ಶಶಿಕಲೆ ಫಣಿಪರಿಷ್ಕೃತಿ |
ವಿುಳಿರೆ ಸವಿನಗೆವೆಳಗು ವದನದೊಳಾಲದಾನೆಳಲೊಳ್ ||

ಕುಳಿತು ನಲವಿಂ ಜ್ಞಾನಮುದ್ರಾಂ |
ಗುಳಿಯಿನಾಶಿಷ್ಟರ್ಗೆ ಬೋಧಿಪ |
ನಲೆ ಹೃತಾನತಮಾನಸಾರ್ತಿಯು ದಕ್ಷಿಣಾಮೂರ್ತಿ ||೫೨||

(ಮಹಾಲಿಂಗೋದ್ಭವಲೀಲೆ)

ಹರಿಯುಮಜನುಂ ತಾವೆ ಜಗದೀ |
ಶ್ವರರೆನುತೆ ಗರ್ವದಲಿ ಸೆಣಸು |
ತ್ತಿರಲವರ ಮಧ್ಯದಲಿ ಕೋಟಿದಿವಾಕರದ್ಯುತಿಯಿಂ ||
ಮೆರೆಯಲುರಿಲಿಂಗವದವರ್ಗಳು |
ಕಿರಿಮುರಾಳಾಕಾರಗಳನಾಂ |
ತರಸಿ ಕಾಣದರಾದರಲೆ ತತ್ಪದಶಿರಂಗಳನು ||೫೩||

ಬಗೆಯಲಿದುವೇ ಪಂಚವಕ್ತ್ರನ |
ಸೊಗಸಿನಿಪ್ಪತ್ತೈದುಲೀಲೆಯು |
ಜಗದೊಳಿದನಾಲಿಸಿದ ಭವಿಗಳ ದುರಿತರಾಶಿಯದು ||
ಅಗಿನಿಗಿಟ್ಟಾತೂಲದಂತಿರೆ |
ಧಗಧಗನೆ ಸುಟ್ಟುರಿದು ಪೋಪುದು |
ಬಗೆಗೆ ಸೊಗವೇರುವುದು ಕೈಸೇರುವುದು ಮುಕ್ತಿಯದು ||೫೪||

ಶ್ರೀಗುರುವು ನುಡಿದಿಂತು ಬೀಳ್ಕೊಳು |
ತಾಗಳಲ್ಲಿಂ ತೆರಳ್ದು* ಸಾರಿದ |
ಬೇಗದಿಂ ಕೂಷ್ಮಾಂಡನಾಮಕಧಾರಿಣೀಧರವ ||
ಯೋಗಿವರರೋಮಶದಧೀಚಿಗ |
ಳಾಗುಣಾಬ್ಧಿ ಪುಲಸ್ತ್ಯಭೃಗುಗಳು |
ರಾಗದೂರರು ಗೌತಮಾತ್ರಿಗಳಲ್ಲಿ ನೆಲಸಿಹರು ||೫೫||

ತೊಳಪ ಗುಹಗಿರಿ ಧಾತೃಗಿರಿ ಮಂ |
ಗಳಕರಾಂಬುಜನಾಭಗಿರಿ ಕಂ |
ಗೊಳಿಸುತಿರ್ಪ ನಂದಿಗಿರಿ ಮೇಣ್ ದಿವ್ಯಗಿರಿಯೆಂಬಾ ||
ಲಲಿತನಾಮದ ಗಿರಿಗಳೈದುಂ |
ಬಳಸಿರಲು ಪರಿಶೋಭೆವಡೆದ |
ತ್ರಿಳೆಗಲಂಕೃತಿಯೆನಿಸಿ ಗಿರಿವರವಖಿಲಸುಖಪೂರಂ ||೫೬||

ಆಯೆಡೆಯಲಿರ್ದಖಿಳಮುನಿಪರಿ |
ಗಾಯತದ ಜೀವನವನೊಲವಿಂ |
ದೀಯುತಿರ್ದುದು ರಮ್ಯಸಲಿಲಂ ಕ್ಷೀರನದಿ ವಿಮಲಂ ||
ತೋಯಜೋದ್ಭವಕಾರ್ತಿಕೇಯವಿ |
ನಾಯಕಾಚ್ಯುತರಿಲ್ಲಿ ಮುಂಬರಿ |
ದಾ ಯಮವುದಾಪಹನ ಮೆಚ್ಚಿಸಿ ಪಡೆದರೀಪ್ಸಿತವ ||೫೭||

ಬರಲು ರೇಣುಕನಲ್ಲಿಗಾಮುನಿ |
ವರರು ಸತ್ಕರಿಸಿದರು ಮುದದಿಂ |
ದೆರಗಿದರು ಧನ್ಯತೆಯನಾಂತೆವೆನುತ್ತಲುಬ್ಬಿದರು ||
ಪರಮತೇಜೋನಿಧಿ ಕಡಂಗುತೆ |
ಲೊರೆದನವರೊಡನಾಮಹಾಗಿರಿ |
ವರದ ಪೂರ್ವದ ವೃತ್ತವನು ಕೌತುಕವು ಸಲೆ ಬಳೆಯೆ ||೫೮||

ಭ್ರಮರಚಿಂತನದಿಂದೆ ಕೀಟಂ |
ಭ್ರಮರದಾಕೃತಿಯಾಂಪ ತೆರದಿಂ |
ಪ್ರಮಥನಾಥನ ಜಾನದಲಿ ತದ್ರೂಪವನೆ ತಾಳಿ ||
ಅಮರಧುನಿಯುಂ ಹಿಮಮಯೂಖನು |
ಮಮರ್ದಿ*ರಲು ನಂದೀಶ ಶಿರದೊಳ |
ಗುಮೆ ವಿಲೋಕಿಸಿ ಗಿರಿಶನಿವನೆಂದಂದು ಮರುಳಾದಳ್ ||೫೯||

ಒಡನೆ ನಂದೀಶ್ವರನು ಖಿನ್ನತೆ |
ವಡೆದು ಮರುಗುತಲಕ್ಕಟಕ್ಕಟ |
ಅಡಸಿತೇ ನನಗಿಂದು ಮಾರಿದ ದುರಿತಮೇಗೈವೆ ||
ಮೃಡನೆ ಪಾಲಿಸವೇಳ್ಕುಮೆನುತಲಿ |
ನಡನಡುಗಿ ಕೂಷ್ಮಾಂಡನೆಂಬವ |
ನೆಡೆಗೆ ತೆರಳಿದು ನುಡಿದನೀಸಂಗತಿಯನಾತನಲಿ ||೬೦||

ಸಾವಧಾನದೆ ಕೇಳಿ ನುಡಿದನು |
ದೇವದೇವನೆ ನಿನ್ನನೀಗಳ್ |
ಕಾವನಲ್ಲದೆ ಪೆರತುಪಾಯುವದೇನು ಕಾಣಿಸದು ||
ಭಾವಿಸೆನ್ನಯ ಪೆಸರ ಗಿರಿಯೊಳ |
ಗಾವೃಷಾಂಕನ ಭಕ್ತಿಯಿಂದಲಿ |
ಸೇವಿಸೈ ನಿನ್ನಘವು ಪರಿದಪುದೆಂದ ಕೂಷ್ಮಾಂಡ ||೬೧||

ಈನುಡಿಯ ನಂದೀಶ ಲಾಲಿಸಿ |
ಸೂನೃತವದೆಂದರಿದು ತಾಳುತೆ |
ಮಾನಸದೆ ಸಂಮುದವ ಭೂಲೋಕಕ್ಕೆ ನಡೆತಂದು ||
ಸಾನುರಾಗದೆ ನುತಿಸಿ ಭಕ್ತಾ |
ಧೀನನನು ಕೂಷ್ಮಾಂಡಮೆಂಬಭಿ |
ಧಾನದೀಗಿರಿವರದೆ ಪಾಪವ ಕಳೆದು ನೆರೆಮೆರೆದಂ ||೬೨||

ಅಂದಿನಿಂದೀ ಪುಣ್ಯಶೈಲಕೆ |
ನಂದಿಗಿರಿಯೆಂಬನಘನಾಮವು |
ಸಂದುದೀಯೆಡೆ ನೆಲಸಿದರ ದುಷ್ಕೃತದ ದಳ್ಳುರಿಯು ||
ನಂದುವುದು ವೈರಾಗ್ಯಸಂಪದ |
ವಂದದಿಂ ಕೈಸೇರಿ ನಿತ್ಯಾ |
ನಂದವೊದಗುವುದೈಸೆ ನೀವೇ ಧನ್ಯರಿಲ್ಲಿಹರು ||೬೩||

ಸಾರಿಬಹೆನಾನಿನ್ನು ನೀವೀ |
ಧಾರಿಣೀಧರದಲ್ಲಿ ಸುಖಿಸಿರಿ |
ಗೌರಿಯಾಳ್ದನ ನುತಿಸಿ ಧರ್ಮವನಿಳೆಗೆ ಬೋಧಿಸಿರಿ ||
ಮಾರಹರ ನಿಮಗೀವ ಶುಭವನ |
ನಾರತವು ತಾನೆಂದು ನುಡಿಯುತ |
ಪಾರಮಹಿಮನು ಗಗನಮಾರ್ಗದೆ ನಡೆದ ರೇಣುಕನು ||೬೪||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಎಂಟನೆಯ ಸಂಧಿ.

ಸೂ|| ಚಾರುಮಂಗಳವೇಡೆಯೊಳಗಾ |
ವೀರಬಿಜ್ಜಳನೃಪನ ದುರಹಂ |
ಕಾರವನು ಖಂಡಿಸುತೆ ರೇಣುಕನವನ ಸಲಹಿದನು ||

ಇಳೆಯೊಳೊಪ್ಪುವಶೇಷಮಂಗಳ |
ಕುಲಕೆ ತಾಯ್ನೆಲೆಯೆನಿಸಿದುದರಿಂ |
ತೊಳಪ ಮಂಗಳವೇಡೆಯೆಂಬೊಳ್ವೆಸರ ತಳೆಯುತಲಿ ||
ಪಲವಗೆಯ ಬಿನದಗಳ ಗೊತ್ತೆನೆ |
ಪೊಳಲದೊಂದೆಸೆದಿರ್ದುದದನಾ |
ಳ್ವಲಘುಗರ್ವನದೊರ್ವನೆಸೆದನು ವೀರಬಿಜ್ಜಳನು ||೧||

ಜನಪನೀತಿಯನಿನಿಸುಮರಿಯನು |
ಕನಸಿನೊಳಗುಂ ಧರ್ಮವೆಂಬುದ |
ನೆನೆಯನಾತ್ಮಪ್ರಕೃತಿವರ್ಗಕೆ ಹಿತವನಾಚರಿಸಂ ||
ಧನದಮದವಾರಾಜ್ಯಮದ ಯೌ |
ವನದ ಮದಮೆಂಬಖಿಲವಿಧಮದ |
ಮನದೊಳಡಸಿರೆ ಸೊಕ್ಕಿ ಮೈಮರೆದಿರ್ದನಾಜನಪಂ ||೨||

ಧರಣಿಯುಲಿ ಶಾಶ್ವತನು ತಾನೆಂ |
ದರಿದು ಲೋಕವಿದೆಲ್ಲವುಂ ತಾ |
ನೊರೆದ ಮಾಳ್ಕೆಯಿನಾಚರಿಪ್ಪುದೆನುತ್ತೆ ಬಗೆಯುತಲಿ ||
ಬೆರತು ಬೀಗುತಲಿರ್ದ ಭೂಪತಿ |
ಮರುಳನಲ್ಲದೆ ಮಾನ್ಯನಪ್ಪನೆ |
ಸಿರಿಯುದಿರಲೇಂ ಬಲ್ಮೆಯಿರಲೇಂ ಜಾಣ್ಮೆಯಿಲ್ಲದಗೆ ||೩||

ದಾನಧರ್ಮಗಳಿರವನರಿಯನು |
ಮಾನಮರ್ಯಾದೆಗಳ ರೀತಿಯ |
ತಾನರಿಯನೊರ್ಪಿಡಿಯ ಭಿಕ್ಷೆಯನಾದೊಡಂ ನೀಡಂ ||
ದೀನರಲಿ ಬಿರುನುಡಿಯನಾಡುವ |
ನಾನತರ ಸದೆದಿಕ್ಕಿ ನಲಿಯುವ |
ನೇನ ಬಣ್ಣಿಪೆನುಕ್ಕುಸೊಕ್ಕನು ದುಷ್ಟಚೇತನನಾ ||೪||

ಪುರದ ಮುಂದಿಗೆ ಪಗಲುಮಿರುಳುಂ |
ಮರುಗುತಿರ್ಪುದೆ ಕಜ್ಜವಾದುದು |
ಕಿರಿಯರಾಲಿಸದಾದರುಕ್ತಿಯನಾತ್ಮಗುರುಜನದಾ ||
ಸರಸಸಲ್ಲಾಪಗಳು ತಾವ್ ವೈ |
ಗರೆದುವಾವೆಡೆ ನೋಳ್ಪೊಡುಂ ಕರೆ |
ಕರೆಗೊಳುತೆ ನಿಡುಸುಯ್ವ ಬಯ್ವರ ನೆರವಿ ಪೆರ್ಚಿದುದು ||೫||

ಒಂದುದಿನವಾವುಂದಮತಿ ನಿಜ |
ಸುಂದರಿಯರೋಲಗದೊಳೊಪ್ಪುತ |
ಮಂದಸಂಮೋದದಲಿ ಬಿಹರಿಸುತಿರಲು ಬಾಗಿಲಲಿ ||
ತಂದೆ ಭಿಕ್ಷೆಯ ನೀಡು ಪಸಿವಿಂ |
ನೊಂದಿಹೆನು ದಯೆದೋರು ಬಾರೈ |
ಯೆಂದು ಭಿಕ್ಷುಕನೊರ್ವ ದೀನಾಲಾಪಮೆಸಗಿದನು ||೬||

ಕಿವಿಗೆ ಕೇಳಿಸದಾದುದೀ ದನಿ |
ಯವನಿಪತಿ ಮೈಮರೆದು ಮದನೋ |
ತ್ಸವದೆ ಲೋಲುಪನಾಗಿ ಬಸವಳಿದಿರಲು ಮಗುಳ್ದಾ*ಗಳ್ ||
ಜವದೆ ನೀಡೈ ಭಿಕ್ಷೆಯನು ಭೂ |
ಧವಶಿರೋಮಣಿಯೆಂಬ ದೀನಾ |
ರವವು ದೆಸೆಗಳ ಕಿವುಡುವಡೆಯಿಸಿ ತುಂಬಿತಂಬರವ ||೭||

ಒಡನೆ ಕಿಡಿಕಿಡಿಯಾದನಾನೃಪ |
ಘುಡುಘುಡಿಸಿ ಬಾಣಸಿಗನಲಿ ತಾಂ |
ನುಡಿದ ಕುದಿಯುವ ಪಾಯಸವನೆರೆ ಭಿಕ್ಷುಕಂಗೆನುತ ||
ಕಡುಪಿನಿಂ ತಂದೆರೆಯಲವನಾ |
ಗಡೆ ವಿಚಾರಿಸದೊಂದುಮಂ ಕೈ |
ತಡೆಯದಾಗಲು ಪೊನ್ನಕಂಭಕೆ ಪೊಯ್ದ ಭಿಕ್ಷುಕನು ||೮||

ಉರಿದುದಾಕ್ಷಣ ಕಂಭಗಳ ಸಾ |
ಲರಮನೆಯು ಸುಟ್ಟುರಿದು ಪೋದುದು |
ಪರಿಪರಿಯ ಧನಕನಕವಸ್ತ್ರಗಳಾಯ್ತು ಬೆಂಬೂದಿ ||
ಮರೆಯನರಿಯದೆ ಮಂದಭಾಗ್ಯನು |
ತರಹರಿಸಿ ನಿಲಲಾರದಳಲುತೆ |
ತಿರುಕನಿಂದೀ ಕೇಡು ಸಮನಿಸಿತೆಂದು ಬಗೆದಂದ ||೯||

ಎತ್ತಬರ್ಪುದು ಬೀದಿಯಲೆವೊ |
ಪ್ಪೊತ್ತಿನೂಟಕೆ ಮಾರ್ಗವಿಲ್ಲದ |
ತೊತ್ತುಗೂಸಿಂಗಿಂದ್ರಜಾಲದ ವಿದ್ಯೆಯಕಟಕಟಾ ||
ಮತ್ತನಾದೆನು ಮರುಳನಾದೆನು |
ಚಿತ್ತಜಾರಿಯ ಭಜಿಸದಾದೆನೆ |
ನುತ್ತ ಭೂಪತಿ ಪೂರ್ವಸುಕೃತದ ಬಲದೆ ಚಿಂತಿಸಿದ ||೧೦||

ತಿರುಕನಿವನಲ್ಲಲ್ಲವಾರಯೆ |
ಪರಶಿವನೆ ದಯೆದೋರಿ ಸಾರ್ತಂ |
ದಿರುವನೆಂದಾ ಭಿಕ್ಷುಕನ ಬಳಿ ಸಾರ್ದು ಬೇಗದಲಿ ||
ಮರೆತೆನೈ ಮರುಳಾದೆನೈ ನಾಂ |
ದುರಿತಕೆಳಸಿದ ಬಗೆಯ ಪಿಂದಕೆ |
ಮರಳಿಸದೆ ಖಳನಾದೆನಕಟಾ ಗುರುವೆ ಸಲಹೆಂದ ||೧೧||

ನಾನೆ ಮೂರುಂ ಲೋಕ ಭಾವಿಸೆ |
ನಾನೆ ಧನಯುುತ ನಾನೆ ಬಲಯುುತ |
ನಾನೆ ಭೋಗಿಯು ನಾನೆ ಯೋಗಿಯು ನಾನೆ ಕಡುಚಾಗಿ ||
ನಾನಿರಲು ನನಗಿದಿರದಾರೋ |
ನಾನೆಯಧಿಕನು ನನತೆಪಿರಿದೆಂ |
ದಾನೆ ಭಾವಿಸಿ ಮೆರೆದೆ ಮನ್ನಿಸು ತಂದೆ ಕೃಪೆಯಿಂದೆ ||೧೨||

ಎಂದು ಭಕ್ತಿಯಿನೆರಗೆ ಭಿಕ್ಷುಕ |
ನಂದದಿಂ ತಲೆದಡಹಿ ನುಡಿದನು |
ಸಂದೆಗವನುಳಿ ಭೂತತುಷ್ಟಿಯೆ ಶಿವಗೆ ಸಂತುಷ್ಟಿ ||
ಸಂದ ಭಿಕ್ಷೆಯ ನೀಡಲಾರ್ಪರೆ |
ಬಂದಿಹೆವು ನಾವ್ ಪ್ರಮಥರೀಕ್ಷಿಸು |
ತಂದು ಬಡಿಸವ್ಮೃತಾನ್ನವನು ಬೇಗೆನುತ ನಸುನಗಲು ||೧೩||

ನಿರುಕಿಸಿದ ತಲೆಯೆತ್ತಿ ಭೂಪತಿ |
ಗುರುವರೇಣ್ಯನು ಶಾಂತನಿರ್ಮಲ |
ಪರಮಮಂಗಳಮೂರ್ತಿ ತಾಂ ಪ್ರಮಥಾಳಿಯೊಡವೆರೆದು ||
ಮೆರೆಯುುತಿರ್ದುದ ಕಂಡು ಜನಪತಿ |
ಯುರರೆ ಇನಿಬರ್ಗುಣಿಸನಿಕ್ಕುವು |
ದರಿದು ನಾನೇಗೈವೆನಿಂದೆಂದಳಲಿ ಬಿಸುಸುಯ್ದು ||೧೪||

ನಗುತೆ ರೇಣುಕ ನುಡಿದನೀಸಂ |
ದೆಗವೆ ನಿನಗೀಕೇಡ ತಂದುದು |
ಬಗೆಯುದಿರು ಬಗೆಬಗೆಯ ಭಾವಿಸಿ ತಿಳಿಯ ತತ್ತ್ವವನು ||
ಬಗಸೆಯುಕ್ಕಿಯ ನೆಯ್ಯನೀವೊಡೆ |
ಜಗಮೆ ಸೊಗದಿಂದುಂಡು ತಣಿವುದು |
ನಿಗೆ ಪರೀಕ್ಷಿಸೆನಲ್ಕೆ ಭೂಪತಿಯರ್ಪಿಸಿದನವರ ||೧೫||

ವಿವಿಧಶಾಲ್ಯನ್ನಗಳು ಪಾಯಸ |
ಸವಿಯ ಭಕ್ಷ್ಯಸುಭೋಜ್ಯಮುಖ್ಯಗ |
ಳವಿಗಣಿತಮೆನೆ ರಾಶಿ ಬಿದ್ದುವು ನಿಮಿಷಮಾತ್ರದಲಿ ||
ನವಘೃತದ ಚೊಕ್ಕಳಿಕೆಯೂಟದೆ |
ಬುವಿಯೆ ತಣಿದುದು ಗುರುವನುಗ್ರಹ |
ಸವನಿಸುವೊಡೇನರಿದು ಭೂಪತಿಯರಿದ ತತ್ತ್ವವನು ||೧೬||

ಅರಿಯದಾದೆನು ನಿನ್ನ ಮೈಮೆಯ |
ತಿರುಕನೆಂದೇ ಬಗೆದು ಕೆಟ್ಟೆನು |
ಗುರುವೆ ಸಲಹೈ ದುರಿತರಾಶಿಯನಿರದೆ ಪರಿಹರಿಸಿ ||
ಅರಿಪು ತತ್ತ್ವಾರ್ಥವನು ನನ್ನಯ |
ಪರಮಧರ್ಮವನೊಲ್ಮೆಯಿಂ ಬಿ |
ತ್ತರಿಸು ಗುರುವರ ಎನುತ ಭೂಪತಿ ಭಕ್ತಿಯಿಂದೆರಗೆ ||೧೭||

ಬೀರುತಲಿ ಕರುಣಾಕಟಾಕ್ಷವ |
ಧಾರಿಣೀಶರ ಧರ್ಮವನು ದಯೆ |
ದೋರಿ ನುಡಿದನು ಪೊಡವಿಪಗೆ ರೇಣುಕಗಣಾಧಿಪನು ||
ಧೀರತೆಯಿನಾತ್ಮಪ್ರಜಾಪರಿ |
ವಾರವನು ಬಲುನಲ್ಮೆವಡಿಸುತೆ |
ಚಾರುನಿಗಮವಿಚಾರಸಾರವನವರ್ಗೆ* ಸವಿಯಿಪುದೈ ||೧೮||

ವೀರನೀನಹುದಿಂದು ತತ್ತ್ವವಿ |
ಚಾರಿ ಭೂಪತಿಯೆನಿಸು ಸತ್ಯಾ |
ಧಾರಿ ನೀನಾಗರಸ ವಿನತೋದಾರಿಯಾಗೆಂದುಂ ||
ಮಾರಹರಮತಸಾರಪಾರಾ |
ವಾರಖೇಲನಸೌಖ್ಯಮುಂ ಮನ |
ವಾರೆ ಭೋಗಿಸು ಮುಕ್ತಿ ನಿನ್ನಯ ಕರವಪಿಡಿಯುವಳು ||೧೯||

ಮಂದಿಯನು ವಾತ್ಸಲ್ಯದಿಂದಲಿ |
ತಂದೆ ಮಕ್ಕಳ ಪಾಲಿಪಂದದೊ |
ಳೆಂದುಮೊಲವಿಂ ಪೊರೆವುದಿಳೆಯೊಡೆಯರ್ಕಳಾಧರ್ಮಂ ||
ಎಂದು ರೇಣುಕನೊರೆದು ಬಳಿಕ |
ಲ್ಲಿಂದ ತಾರಾಪಥದೆ ತೆರಳ್ದ*ನು |
ಮುಂದಕಾಶ್ರೀನಗರದೊಡೆಯನ ಬೆಸನನೊಡರಿಸಲು ||೨೦||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಒಂಭತ್ತನೆಯ ಸಂಧಿ.

ಸೂ|| ಪಂಡಿತಾರಾಧ್ಯನನು ರೇಣುಕ |
ಕಂಡು ತಾಂ ಶ್ರೀಶೈಲದಲಿ ಮುಂ |
ಕೊಂಡು ಶಂಕರಗಿತ್ತನಾ ಶಶಿಮೌಳಿಲಿಂಗವನು ||

ನಲವಿನಿಂ ಭ್ರಮರಾಂಬೆಯೊಡವೆರೆ |
ದೆಳಸಿದರ್ಥವ ಭಕ್ತಬೃಂದಕೆ |
ಸಲಿಸಿ ಸಲಹುವ ಮಲ್ಲಿಕಾರ್ಜುನಗಿರ್ಕೆಯೆನಿಸುತಲಿ ||
ಫಲಸುಮಂಗಳಿನೈದೆ ತೊಳಗುವ |
ಖಿಳತರೂತ್ಕರದಿಂದೆ ಮೃಗಗಳ |
ಬಳಗದಿಂದಲಿ ರಾಜಿಪಾಶ್ರೀಗಿರಿಗೆ ಸರಿಯುಂಟೇ ||೧||

ಎಸೆದಪಂ ತ್ರಿಪುರಾರಿನಾಮದಿ |
ನಸಮನಯನನು ಪೂರ್ವದಿಶೆಯೊಳ |
ಗೆಸೆವನಾ ಬ್ರಹ್ಮೇಶ್ವರಾಖ್ಯೆಯಿನೈದೆ ಪಶ್ಚಿಮದೇ ||
ಎಸೆವನುತ್ತರದಲಿ ಮಹೇಶ್ವರ |
ವೆಸರಿನಿಂ ದಕ್ಷಿಣದೆ ಸಲೆ ಭಾ |
ಸಿಸುವನೇವರ್ಣಿಸುವೆ ಜ್ಯೋತಿಸ್ಸಿದ್ಧವಟನೆನಿಸಿ ||೨||

ಪಾವನವು ಪಾತಾಳಗಂಗೆಯು |
ದಾವಗಂ ಸುರಮನುಜಮೃಗವಿಹ |
ಗಾವಳಿಗೆ ಕೈವಲ್ಯಮೀಯುತೆ ಪರಿಗುಮೀಗಿರಿಯೊಳ್ ||
ಏವೊರೆವೆನೀನದಿಯ ಮ್ಮೆಮೆಯ |
ನಾವನಾರ್ಪನು ಬಣ್ಣಿಸಲು ಶಿವ |
ದೇವಸುಜಟಾಜೂಟಸಂಪ್ಲಾವಿತೆಯು ಸನ್ನುತೆಯಾ ||೩||

ಹಲಸು ನೇರಿಳೆ ಮಾವು ಕಿತ್ತಿಳೆ |
ತೊಳಪ ಕೇತಕಿ ಸುರಗಿ ಮೊದಲಹ |
ಫಲಸುಮಪ್ರದಭೂರುಹಾವಳಿಯುಭಯತಟಗಳಲಿ ||
ನೆಲಸಿ ಬಗೆಗೊಳುತಿರಲು ಬಂದರ |
ನೊಲವಿನಿಂದುಪಚರಿಸೆ ತಟನೀ |
ಲಲನೆ ನೀಡಿದ ಪಾಣಿಯುಗಳಂಬೊಲು ವಿರಾಜಿಸಿತು ||೪||

ತನ್ನ ಸೇವಿಸೆ ಬಂದ ಭಕ್ತರ |
ಖಿನ್ನತೆಯ ಹರಿಸಲಿಕೆ ಗುಣಸಂ |
ಪನ್ನೆ ವಿಲಸದ್ವೀಚಿಹಸ್ತದೊಳಾ ಪ್ರಸಾದವನು ||
ಮನ್ನಿಸುತೆ ಕೈಗೊಳಿಪಳೆಂದೆನ |
ಲುನ್ನತಿಯ ಬೆಳ್ನೊರೆಯದೆಸೆವುದು |
ಚೆನ್ನೆನಲ್ ಪಾತಾಳಗಂಗಾತೀರದಿರ್ಕೆಲದೆ ||೫||

ಬಂದನಲ್ಲಿಗೆ ಲೋಕಗುರು ಬಾ |
ಲೇಂದುಧರನಾಣತಿಯಿನಾಗಳೆ |
ಯಿಂದು ಗಂಗೆಯೊಳಿಷ್ಟಲಿಂಗಾರ್ಚನೆಯನೆಸಗುತಲಿ ||
ಕಂದುಕಸರಿಕೆಯಿಲ್ಲದಮಲಾ |
ನಂದದಿಂದಲಿ ತುಂಬಿ ಗಂಗೆಯ |
ತಂದು ತಾನಭಿಷೇಕವೆಸಗಿದ ಮಲ್ಲಿಕಾರ್ಜುನಗೆ ||೬||

ನಿಗಮವೇದ್ಯ ಪರಾಕು ಮುನಿಜನ |
ಸುಗಮ ಕರುಣಾನಿಲಯ ನಿರ್ಮಲ |
ನಗತನೂಜಾಲಿಂಗಿತಾಂಗ ಕುರಂಗಪಾಣಿ ಜಯ ||
ಜಗಕೆ ಶಿವಸಿದ್ಧಾಂತತತ್ತ್ವವ |
ಬಗೆಗೊಳಿಸಿ ನಿನ್ನಾಜ್ಞೆಯಂತಿರೆ |
ಯಿಗೆ ಚರಿಸಿ ಬಂದಿರ್ಪೆನಿಲ್ಲಿಗೆ ಬೆಸಸು ಕಜ್ಜವನು ||೭||

ಎಂದೊರೆಯೆ ರೇಣುಕನು ಪರವಾ |
ನಂದದಿಂದಲಿ ನಿನದವೊಗೆದುದ |
ದೊಂದು ಸಿಡಿಲ ವಿರಾವವೋ ಎನಲಂಬರಸ್ಥಲದೆ ||
ಇಂದುಧರನಾವೃಷಭವೇರುತೆ |
ಚೆಂದದಿಂ ಪ್ರಾಲೇಯಗಿರಿವರ |
ನಂದಿನಿಯನೊಡವೆರೆದು ವೈದೋರಿದನು ರೇಣುಕಗೆ ||೮||

ಭಾಪು ಬಾಲಕ ಲೋಕದುರಿತತ |
ಮೋಪಹಾರಕ ರೇಣುಕಾ ಮ |
ದ್ರೂಪಭಾಸಕ ಮೌಢ್ಯಜಲನಿಧಿಮಗ್ನಜನನೌಕ ||
ಈಪೃಥಿವಿಗತಿಭಾರರೆನಿಸಿದ |
ಕಾಪುರುಷರಾವಳಿಯ ಸಲಹಿದೆ |
ನೀ ಪವಿತ್ರನು ಮೇಣ್ ಕೃತಾರ್ಥನು ನಿನಗೆ ಪಡಿಯುಂಟೇ ||೯||

ಎನ್ನನಾರಾಧಿಸುವ ಬಗೆಯನು |
ಚೆನ್ನೆನಲು ನೀನರುಪಿದೈ ನಲಿ |
ದೆನ್ನ ತತ್ತ್ವವ ಬೋಧಿಸಿದೆ ಜಗಕೊಡರಿಸಿದೆ ಬೆಸನ ||
ಎನ್ನನೇ ಪಗಲಿರುಳು ನೆನೆವರ |
ಬನ್ನವನು ಪರಿಹರಿಸಿದೈ ಕೇ |
ಳೆನ್ನ ಬಿನ್ನಣಗುವರ ಮುಂತಣ ಕಜ್ಜವನು ನುಡಿವೆ ||೧೦||

ಅರಿಪು ನೀನೆಲೆ ತತ್ತ್ವಸಾಕ್ಷಾ |
ತ್ಕರಣಸಾಧಕವೆನಿಪ ಪಾವನ |
ತರಸುಕರ್ಮಜ್ಞಾನಗಳ ಪರಮಸ್ವರೂಪವನು ||
ಅರಿದರಹುದೆನೆ ನಿನ್ನ ಪೀಠ |
ಕ್ಕರುಹನನು ನೆಲೆಗೊಳಿಸಿ ಮೋಹಾಂ |
ಧರ ಜನೇಂದ್ರರನೀಳ್ದು ಕುಪಥದಿ ಸುಪಥವೈದಿಸು ನೀಂ ||೧೧||

ಮತ್ತರೆನಿಸುತೆ ಧನದೆ ಬಹುದು |
ರ್ವೃತ್ತರಾದಾ ನೃಪರ ಚಿತ್ತದೆ |
ಬಿತ್ತಿ ನೀಂ ಶಿವಭಕ್ತಿಬೀಜವನದನು ವೊಳೆಯಿಸುತೆ ||
ಎತ್ತಲುಂ ತಾಂ ನಾಸ್ತಿಕಕ್ರಿಮಿ |
ಮುತ್ತದಾಸಸಿ ಪಲ್ಲವಿಸಿ ತೊಳ |
ಗುತ್ತೆ ಮುಕ್ತಿಮಹಾಫಲಪ್ರದವಾಗೆ ನಿರುಕಿಪುದೈ ||೧೨||

ರಾಜನೆಂತಾಪ್ರಜೆಯುಮಂತೆಯೆ |
ಸಾಜವಿಾನುಡಿಯದರಿನುರ್ವಿಪ |
ರಾಜಿಗರಿಪೈ ನೀತಿಧರ್ಮಸುತತ್ತ್ವಸಂತತಿಯ ||
ಓಜಗುಂ ಶಿಷ್ಯಂಗುಮೆಸೆವಾ |
ಯೋಜನದೆ ದೊರೆವಮಲಫಲವನು |
ಮೂಜಗವು ತಿಳಿವಂತೆ ಬೋಧಿಸಿ ಲೋಕಗುರುವೆನಿಸೈ ||೧೩||

ತನಯ ಶಿವಸಾಮ್ರಾಜ್ಯಶಾಸಕ |
ನೆನಿಪ ಬಿರುದನು ತಳೆದು ಮೆರೆಯೈ |
ವನಜಮುದಕದೊಳಿರೆಯು ತತ್ಸಂಬಂಧವೊಂದದೊಲು ||
ಅನಘ ನೀಂ ನಿರ್ಲಿಪ್ತನಾಗಿರು |
ನಿನತು ನನತೆಂಬಾಪ್ರಭೇದವು |
ದಿನಿತುಮಿಲ್ಲವು ನೀನೆ ನಾನೈ ನಾನೆ ನೀನೆಂದಂ ||೧೪||

ಇಂತೊರೆದು ವೈಗರೆಯುಲಾಕ್ಷಣ |
ಶಾಂತನಗಜಾಕಾಂತನನಘೋ |
ದಂತರೇಣುಕನಂತರಂಗದೊಳಾಂತು ಸಂಮುದವ ||
ಕಂತುಹರನಾಣತಿಯನೊಡರಿಸೆ |
ಮುಂತೆರಳೆ ಕಾಣಿಸಿದನಾಶ್ರಮ |
ದಂತರದೊಳನವದ್ಯರಾದ್ಯಂ ಪಂಡಿತಾರಾಧ್ಯಂ ||೧೫||

ಹರನ ತತ್ಪುರುಷಾಸ್ಯದೊಗೆದುರು |
ತರಮಹಿಮನಾಶ್ರಿತಕೃಪಾಕರ |
ಗುರುವರಂ ಶ್ರೀಗಿರಿಯೊಳೆಸೆವಾ ಮಲ್ಲಿಕಾರ್ಜುನನಾ ||
ಮೆರೆವ ಲಿಂಗದಿನಿಳೆಯನೊಲಿದು |
ದ್ಧರಿಸಲುದ್ಭವಿಸುತಲಿ ಶೈವವಿ |
ಸರಕೆ ಭಾಗ್ಯೋದಯನು ಸೊಗಯಿಪ ಪಂಡಿತಾರಾಧ್ಯಂ ||೧೬||

ಈತನಲೆ ಶಿವಭಕ್ತಿಪೂರಿತ |
ಚೇತನಶ್ರೀಚಾತಕಸುಜೀ |
ಮೂತನೀತನೆ ಶೈವತತ್ತ್ವಾಂಬುನಿಧಿರಾಕೇಂದು ||
ಈತನಲೆಯವದಾತಕೀರ್ತಿಸ |
ಮೇತನೀತನೆ ಸಕಲಕಾಮಿತ |
ದಾತನೆನಿಸುತಲೈದೆ ನೆಗಳ್ದ*ನು ವೃಷಭಗೋತ್ರಪತಿ ||೧೭||

ಒರ್ವರೊರ್ವರನೀಕ್ಷಿಸುತೆ ತಾ |
ಮಿರ್ವರುಂ ಸಂಮುದವನೊಂದಿದ |
ರುರ್ವಿಯುದ್ಧಾರಕರು ಕುಶಲಪ್ರಶ್ನಮಂಗೆಯ್ದರ್ ||
ಶರ್ವನಾಜ್ಞೆಯನೊಲ್ದು ರೇಣುಕ |
ನಿರ್ವಹಿಸಿ ಸಾರ್ತಂದುದನು ಮೇಣ್ |
ನಿರ್ವಚಿಸಿದನಗಸ್ತ್ಯಗೊರೆದಾಷಟ್ಸ್ಥಲಕ್ರಮವ ||೧೮||

ಮುನಿಜನಸ್ತುತಪಂಡಿತಾರಾ |
ಧ್ಯನದನಾಲಿಸಿ ನಲಿದು ತಾಂ ಕುಂ |
ಭಿನಿಗೆ ಶಿವಸಿದ್ಧಾಂತತತ್ತ್ವವನೊರೆದ ವೃತ್ತವನು ||
ಅನುವರಿದು ರೇಣುಕನೊಳುಸಿರ್ದ*ನು |
ವಿನುತರಿರ್ವರುಮಲ್ಲಿ ಕೆಲವುಂ |
ದಿನಗಳಿರ್ದರು ಶಿವಮಹಾಜ್ಞಾಪಾಲನೋತ್ಸುಕರು ||೧೯||

ಆಗಳಾ ಶ್ರೀಶೈಲದೆಡೆಯಲಿ |
ರಾಗದೂರನು ಚಂದ್ರಮೌಳಿಯು |
ಬೇಗದಿಂದಲಿ ಕಾಂಬ ಬಯ್ಕೆಯನಾಂತು ನೆರೆ ನೋಂತು ||
ಯೋಗಿವರ್ಯನು ಶಂಕರಾರ್ಯನು |
ಬೀಗಿ ಶಿವನಾಮಾಮೃತಂಗುಡಿ |
ದೇಗಳುಂ ಕಟ್ಟುಗ್ರತಪವೆಸಗುತ್ತಲಿರ್ದನಲಾ ||೨೦||

ನಿರಶನವ್ರತದಿಂದೆ ಹರನನು |
ನಿರತಮುಂ ಭಜಿಸುತ್ತಲಿರೆಯಿರೆ |
ಭರದೆ ತಾರಾಪಥದಿನೊಗೆದುದದೊಂದು ನಲ್ನುಡಿಯು ||
ಪರಮಯೋಗಿಯೆ ಬರಿದೆ ಬಳಲದಿ |
ರರಿಯ ನೀನಾ ಚಂದ್ರಮೌಳೀ |
ಶ್ವರಸುನಾಮಕಲಿಂಗವಾರ್ಜಿಸಿ ನುತಿಸೆ ಮೇಲಹುದು ||೨೧||

ಎಳಸಿದೆಳಪುಗಳೆಲ್ಲ ಫಲಿಪುವು |
ತೊಳಲದಿರು ರೇಣುಕಸಮಾಖ್ಯನು |
ಸಲಿಸುವನು ನಿನಗೊಸೆದು ಶಶಿಮೌಳೀಶಲಿಂಗವನು ||
ಬಳಿಯಮೆನ್ನನು ಕಾಂಬೆ ನೀನೆನು |
ತಲಿ ನಭಸ್ಸ್ಥಲದತ್ತಣಿಂದುಲಿ |
ಯಲು ಸುಧೋಪಮವಚವನಾಲಿಸಿ ನಲಿದ ಶಂಕರನು ||೨೨||

ಪೊರಮಡುತಲಲ್ಲಿಂದೆ ಶಂಕರ |
ನರಸುತಲಿ ರೇಣುಕಗಣೇಶನ |
ಗಿರಿಗುಹಾಂತರಗಳಲಿ ವಿಟಪಿಚ್ಛಾಯೆಗಳಿನೆಸೆವಾ ||
ಸರಸಿಗಳ ತಡಿಯಲ್ಲಿ ಮುನಿಗಳ |
ತರಗೆಲೆಯ ಮನೆಗಳಲಿ ತೊಳಲುತೆ |
ಮರುಗುತೆಣ್ದೆಸೆಗಳನು ನಿರುಕಿಸಿ ಕಾಣದೈತಂದ ||೨೩||

ಚೋಳ ಕೇರಳ ಮಗಧ ಘೂರ್ಜರ |
ಮಾಳವಾಂಗ ಕಳಿಂಗ ವರನೇ |
ಪಾಳ ಕೊಂಕಣ ವಂಗ ಕುಂತಳ ಪಾಂಡ್ಯದೇಶಗಳ ||
ಜಾಲವನು ಬಳಬಳಸಿ ಮುಂಬರೆ |
ಶೈಲಮದು ಮಲಯಾಖ್ಯಮೆಸೆದುದು |
ತಾಲ ಹಿಂತಾಲಾಮ್ಲ ಕುರವಕಪೂಗತರುನಿಬಿಡಂ ||೨೪||

ಕೆಳಿಗೆ ತೌರೂರೆನಿಸಿ ತೊಳತೊಳ |
ತೊಳಗುವಾ ಕರ್ಣಾಟದೇಶದ |
ಕೆಲಕೆ ಬರೆ ಮಲಯಾದ್ರಿಮಧ್ಯದೆ ಮನಕೆ ನಲವೇರೆ ||
ಭಳರೆಯೆನ್ನಯ ಭಾಗ್ಯತರುವದು |
ಫಲಿಪುದೀಯೆಡೆಯೊಳಗೆನುತ್ತಲಿ |
ಕಳೆದನಂತಸ್ತಾಪವನು ಯೋಗೀಂದ್ರಶಂಕರನು ||೨೫||

ಶಿವನ ಮಂತ್ರವ ಪಠಿಸುತಿರ್ಪರು |
ಶಿವನ ಪೂಜೆಯನೆಸಗುತಿರ್ಪರು |
ಶಿವನ ನಾಮವ ಜಪಿಸುತಿರ್ಪರು ಮುನಿಗಳಿಲ್ಲಿಹರು ||
ಶಿವನನುಗ್ರಹಕಿದುವೆ ನೆಲೆ ಗಡ |
ಶಿವಶಿವಾ ಶಿವಶರಣಕುಲಮು |
ತ್ಸವದೆ ಮೆರೆದಿಹುದಿಲ್ಲಿ ರೇಣುಕಗಣಪನಿರದಿರನು ||೨೬||

ಜರೆಯೊಳಾದ್ವಿಜಪಾತ ಮೇಣ್ ವಾ |
ನರತತಿಯೊಳಾಶ್ರೀಫಲೇಚ್ಛೆಯು |
ಮುರೆಯಧೋಗತಿ ವೃಕ್ಷಮೂಲದೆ ಭೋಗಮುರಗದಲಿ ||
ಪರಮಕಠಿನತೆ ಶಿಲೆಗಳಲಿ ಮೇಣ್ |
ದುರುಳರಲಿ ಕುಲಹತಿಯದಲ್ಲದೆ |
ಪರಿಕಿಸಲ್ಕಾಣಿಸವು ಮೆರೆವೀಯಾಶ್ರಮಸ್ಥಲದೆ ||೨೭||

ಸಹಿಸಲಾಗದಸುಖಮರಿವ್ರಜ |
ದಹಹ ಭೂತಿಯುಮೈದೆ ಬಗೆವೊಡೆ |
ದಹನನೊಳ್ ಭಾವಿಸಲು ಗಾನಾಸಕ್ತಿಯೆರಳೆಗಳೊಳ್ ||
ವಿಹಗಕುಲದಲಿ ಪಕ್ಷಪಾತವು |
ಮಿಹವು ಕಾಣಿಸದೀತಪೋವನ |
ಮಹಿಯೊಳದರಿಂ ಕಾಂಬೆನಿಲ್ಲಿಯೆ ರೇಣುಕನನೆನುತ ||೨೮||

ಬರುತಿರಲಿಕಾಶ್ರಮದ ಮಧ್ಯದೆ |
ವರಹರಿತ್ಕಂಥಾಕಮಂಡಲು |
ಮೆರೆಯೆ ಭಿಕ್ಷಾಪಾತ್ರಮುಂ ಮೇಣ್ ಭಸ್ಮಘುಂಟಿಕೆಯುಂ ||
ಕರದೆಸೆಯಲಶ್ವತ್ಥದಂಡಮು |
ಮರರೆ ರವಿಕೋಟಿಪ್ರಕಾಶಂ |
ಶಿರದೆ ಮೂವತ್ತಾರುಜಡೆಸುತ್ತೆಸೆಯೆ ಸೊಗಯಿಸಿತು ||೨೯||

ಒಡನೆ ತತ್ಪದಯುಗಕೆ ನಮಿಸುತೆ |
ಸಡಗರದೆ ಶಂಕರನು ಗುರುವೇ |
ಮೃಡನ ಕಾಂಬಾಬಯ್ಕೆಯಿಂದಲಿ ತಪವನೆಸಗಿದೆನು ||
ಕೊಡಕೆಗಮರ್ದಿ*ನ ಸೋನೆಯಂತಿರೆ |
ನುಡಿ ವಿಯತ್ತಟದಿಂದೆ ಸೋಂಕಿ |
ತ್ತೊಡೆಯ ನಿನ್ನಿಂದೆನಗೆ ಕಾಮಿತಸಿದ್ಧಿಯಹುದೆನುತೆ ||೩೦||

ಆದರಿನಾನ್ಯೆತಂದೆನಿಲ್ಲಿಗೆ |
ಸದಯ ನಿನ್ನನು ನೋಳ್ಪ ತವಕದೆ |
ಪದುಳದಿಂ ದರ್ಶನವನಿತ್ತೈ ಧನ್ಯನಾನಾದೆ ||
ಮುದವನೀವರನರಿಯೆನನ್ಯರ |
ನೊದವಿಸೈ ಶಿವಭಕ್ತಿಭಾಗ್ಯವ |
ಚದುರ ನೀಂ ಶ್ರೀಚಂದ್ರಮೌಳೀಶ್ವರನನೆನಗೀಯೈ ||೩೧||



ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವುದು.

ಪಾಲಿಸೈ ಶಿವಭಕ್ತಪಕ್ಷಾ |
ಪಾಲಿಸೈ ಸುಜನಾಳಿರಕ್ಷಾ |
ಪಾಲಿಸೈ ಪರವಾದಿರೂಕ್ಷಾ ವಿಧೃತರುದ್ರಾಕ್ಷಾ ||
ಪಾಲಿಸೈ ವಿಜಿತಾಖಿಲಾಕ್ಷಾ |
ಪಾಲಿಸೈ ಶ್ರಿತಕಲ್ಪವೃಕ್ಷಾ |
ಪಾಲಿಸೈ ಫಾಲಾಕ್ಷಮತಪರಿಪಾಲನಾಧ್ಯಕ್ಷಾ ||೩೨||

ಈ ತೆರದೆ ಬಿನ್ನವಿಸೆ ಭಕ್ತಿಯೊ |
ಳಾತಪೋನಿಧಿ ಬಳಿಕ ಸುರವರ |
ಗೀತವೈಭವ ರೇಣುಕನು ಶಿವನಾಜ್ಞೆಯನು ನೆನೆದು ||
ಖ್ಯಾತಮಹ ಶಶಿಮೌಳಿಲಿಂಗವ |
ನೋತು ಶಂಕರಗಿತ್ತನಮರ |
ವ್ರಾತಮತಿಸಂಭ್ರಮದೆ ಕರೆಯಲು ಕಮ್ಮಲರಸರಿಯ ||೩೩||

ಜಾರೆ ಹೃದಯದೆ ಪುದಿದ ಚಿಂತಾ |
ಭಾರಮತಿಶಯಸಂಮುದವು ಸಲೆ |
ತೋರೆ ಚಿತ್ತದೆ ದಿವ್ಯರೂಪವು ತೊಳಗಿ ಬೆಳಗುತಿರೆ ||
ಚಾರುಗರಳಪುರೀಶನನು ಮನ |
ವಾರೆ ನುತಿಸುತೆ ಬಳಿಕ ತುಂಗಾ |
ತೀರಮಂ ಶಂಕರನು ಸಾರ್ದನು ಸಾಧುಸಾದರನು ||೩೪||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಹತ್ತನೆಯ ಸಂಧಿ.

ಸೂ|| ಚೋಳದೇಶದೆ ತೋರುತದ್ಭುತ |
ಲೀಲೆಯನು ರೇಣುಕನು ತದ್ಭೂ |
ಪಾಲಗುಪದೇಶಿಸಿದ ಶಿವಮತತತ್ತ್ವಸಾರವನು ||

ಮಲಯದಲಿ ಶಿವಯೋಗಸೌಖ್ಯದೆ |
ಕಳೆದು ಕೆಲದಿನವಾಬಳಿಕ್ಕಂ |
ಘಳಿಲನಂಬರಮಾರ್ಗದಲಿ ತಾಂ ತಳರ್ದು* ರೇಣುಕನು ||
ಪಲವು ನಿರ್ಮಲನದನದೀಸರ |
ಗಳನು ಕಾಂತಾರಗಳ ದಾಂಟುತೆ |
ಪೊಳಲ ಸಾರ್ದನು ಪುಂಡರೀಕಾಹ್ವಯವ ವಿಶ್ರುತವ ||೧||

ಗಗನಚುಂಬಿಗಳೆನಿಪ ನೆಲೆಮಾ |
ಡಗಳ ಸಾಲುಗಳನ್ನಸತ್ರಗ |
ಳಗಣಿತದ ಬಹುಧರ್ಮಶಾಲೆಗಳೆಸೆದುವಲ್ಲಲ್ಲಿ ||
ಬಗೆಬಗೆಯ ಜನಜಾಲದಿಂದಲಿ |
ಸೊಗಯಿಸುವ ನಟವಿಟರ ಗಡಣದೆ |
ನಗರವದು ರಂಜಿಸಿತು ಸತತಾನಂದಸಾಗರವು ||೨||

ಅರುಣಗಿರಿ ವೃದ್ಧಗಿರಿ ಜಂಬುಕ |
ವರದಮಧ್ಯಾರ್ಜುನ ಮನೋಹರ |
ಪರಮಕುಂಭಕೈಕಾಮ್ರನಾಮಕಲಿಂಗರಾಜಿಗಳಿಂ ||
ಧರೆಗೆ ಕೈಲಾಸವಿದೆನಲ್ ನೆರೆ |
ಮೆರೆದುದಾಪುರಮತಿಪವಿತ್ರಂ |
ಸರಳಹೃದಯಾನಂದಪಾತ್ರಂ ರಮ್ಯಚಾರಿತ್ರಂ ||೩||

ಮುನ್ನ ವಿಪ್ರನದೊರ್ವನೊಲವಿಂ |
ತನ್ನ ಪಿತನಸ್ಥಿಗಳ ಗಂಗೆಯ |
ಸನ್ನುತೋದಕದಲ್ಲಿ ಬಿಡೆ ತಾಂ ಬಯಸಿ ಬರುತೆಸೆವೀ ||
ಉನ್ನತದ ಪುರಕ್ಕೈದಿ ವಿಶ್ರಮಿ |
ಪನ್ನವಾಯೆಲುವಿರ್ದ ತಳದೊಳೆ |
ಚೆನ್ನೆನಲ್ ನರುಗಂಪಿನರಲಾಗಿರ್ದುದೇನೊರೆವೇ ||೪||

ಅನಘವಾದೀಪುರದೆ ನೆಲಸಿದ |
ಮನುಜರಘಮದು ದಹಿಸಿ ಪೋದಪು |
ದನಲನಡಸಿದ ತೂಲದಂತಿರಲರಿಯೆ ಬಹುಚಿತ್ರಂ ||
ಮನಸಿಜಾರಿಯ ಮೈಮೆಯನು ನೆರೆ |
ಮನವೊಲಿದು ಪಾಡುತ್ತೆ ಕೆಲವುಂ |
ದಿನಗಳಲ್ಲಿರ್ದೈದೆ ಪೊರಮಟ್ಟನು ಗುರೂತ್ತಮನು ||೫||

ಸಾರಿ ತುಂಡೀರಾಖ್ಯದೇಶವ |
ಸೇರಿ ಬಳಿಕಂ ಕಾಳಹಸ್ತಿಯ |
ವಾರಹರದಿವ್ಯಾಜ್ಞೆಯೊಡರಿಸಲೆಂದು ಬಗೆದಂದು ||
ಚಾರುಕಾಂಚೀಪುರವನೈದುತ |
ದಾರುವುರಿಯುದ ತೆರದೆ ರೂಪನು |
ವಾರುಗೊಳಿಸಿ ಗುರೂತ್ತಮನು ತಾನಲೆಯಲನುವಾದ ||೬||

ನೋಡನಂಧಕನಂತೆವೊಲ್ ಮಾ |
ತಾಡಲೊಲ್ಲನು ಮೂಕನಂತಿರೆ |
ಕೂಡಲೊಲ್ಲನು ಮಂದಿಯೊಡನುನ್ಮತ್ತನಂತಿರೆ ಮೇಣ್ ||
ಓಡುವನು ಪರಿದಾಡುವನು ರೋ |
ಡಾಡಿದನು ಗಡ ಮರುಳನಿವನೆಂ |
ದಾಡೆ ಕಂಡವರೆಲ್ಲರುಂ ನಡೆತಂದ ರೇಣುಕನು ||೭||

ಕೆಲರು ಬಯ್ದರು ಕೆಲರು ಪೊಯ್ದರು |
ಕೆಲರು ಹೇಳನಗೆಯ್ದರಿರದಿಂ |
ಕೆಲರು ಪರಿಹಾಸವನು ಮಾಡಿದರುಳಿದರಲೆಗಳೆದರ್ ||
ತಿಳಿದ ಕೆಲರೀತನೆ ಮಹಾತ್ಮನು |
ಪಳಿಯೆ ಪಾತಕಮಪ್ಪುದೆನುತಲಿ |
ಪಲರು ಪಲವಗೆಯಿಂದೆ ನುಡಿದರು ಕಂಡು ರೇಣುಕನ ||೮||

ಈತ ಜಾವಳನಲ್ತು ಬಗೆಯೆ ಧ |
ರಾತಳವ ಪರಿಪಾಲಿಸಲ್ಕಾ |
ಭೂತಪತಿಯಿಾರೂಪನಾಂತಿಂತಿಲ್ಲಿಗೈದಿಹನು ||
ವೀತರಾಗದ್ವೇಷನೆನಿಸಿರು |
ವೀತನಲಿ ಕಾಣಿಸುವುದಲೆ ಮಹಿ |
ಮಾತಿಶಯಮೆಂದೆನುತಲಿರ್ದರು ದೂರದರ್ಶಿಗಳು ||೯||

ನೂಕಲೀಪರಿ ಕಾಲಮೊರ್ವೆ ವಿ |
ವೇಕಹೀನರು ಕೆಲರು ಸಾರ್ದೀ |
ಲೋಕಗುರುವನು ಪಳಿಯುತಲಿ ಗೋಣಾಳಪಿಡಿದೆಳೆದು ||
ನೂಕೆ ವಿಷ್ಣುವಿನಾಲಯಾಂತರ |
ಕಾಕೆವಾಳರು ನೊಂದ ಗುರುವಾ |
ಲೋಕಿಸುತೆ ವಿಗ್ರಹವು ತಲೆಯನು ಕೊಡಹತೊಡಗಿದುದು ||೧೦||

ವರದರಾಜನ ವಿಗ್ರಹವು ಕಾ |
ತರಿಸಿ ಶೀರ್ಷವ ಕೊಡಹುತಿರಲದ |
ನಿರುಕಿಸುತೆ ದೇವಡಿಗರಿರದೈತಂದು ಭೀತಿಯಲಿ ||
ಅರಸಗರಿಕೆಯ ಮಾಡೆ ತದ್ಭೂ |
ವರನೆಲೆಲೆ ಕಂಡರಿಯೆನೀಯ |
ಚ್ಚರಿಯನಾವಪರಾಧಮಾದುದೊ ತಿಳಿಯೆನೇ ಎಂದ ||೧೧||

ಮಂದಿಯನು ಕಾಪಿಡುವ ಕಜ್ಜದೆ |
ಕುಂದದೇಂಸಮನಿಸಿತೊ ವಿಪ್ರರ |
ವೃಂದಕೇನಪಚಾರವಾದುದೊ ಯತಿಜನಾವಳಿಯೇಂ ||
ನೊಂದುದೋ ಕವಿದೆನ್ನವಜ್ಞತೆ |
ಯಿಂದೆ ಮೇಣೇನಾದುದೋ ಈ |
ದಂದುಗವನೇತೆರದೆ ಕಳೆವನೊ ಕಾಣೆನಕಟೆಂದ ||೧೨||

ಕೇಡು ಸಮನಿಸದಿರದು ನಮ್ಮಯ |
ನಾಡಿಗಿದರಿಂದಿಂದು ನಾನೇಂ |
ಮಾಡುವುದೊ ಮುಂದೆಂದು ಕರೆಯಿಸಿ ಮಂತ್ರಿಮಂಡಲವ ||
ಕೂಡಿ ಮಂತಣಮೆಸಗಿ ದಾನವ |
ನೀಡಿ ಜಪಹೋಮಾದಿಕರ್ಮವ |
ಮಾಡಿಸಿದನತಿಭಕ್ತಿಯಿಂದಲಿ ಚೋಳಭೂಪಾಲ ||೧೩||

ನಿಲದಿರಲು ಕಂಪನವುದಿನ್ನುಂ |
ಕೆಲಬರಾಪ್ತರು ರಾಜಸನ್ನಿಧಿ |
ಗಲಸದೈತಂದೊರೆದರೇಕಾಮ್ರೇಶ್ವರನನೀಗ ||
ಪಲವಗೆಯಿನರ್ಚಿಸಲು ದೇವನು |
ಸಲಿಪ ನಿನ್ನಿಚ್ಛೆಯನು ದಿಟವಿದು |
ನೆಲನೊಡೆಯ ನಿನಗಹುದು ಮಂಗಳವುಳಿಯ ಚಿಂತೆಯನು ||೧೪||

ಅರಿವುದೇಕಾಮ್ರೇಶಮಹಿಮೆಯ |
ನರಸ ಪರಮತಪಸ್ವಿಜಾಲಕು |
ಮರಿದೆನಲ್ ಸಾಮಾನ್ಯರರಿವರೆ ಜಾವಳವದಲ್ಲ ||
ಒರೆವೆವಾಲಿಸು ಪೂರ್ವವೃತ್ತವ |
ದುರಿತಪರಿಹಾರಕವ ಧರಣೀ |
ಶ್ವರಕಿರೀಟಸುರತ್ನರುಚಿನೀರಾಜಿತಾಂಘ್ರಿಯುಗ ||೧೫||

ಬಿನದಿಸಲ್ಕೆಂದೊಮ್ಮೆ ನಗಭವೆ |
ಯಿನಿಯನರಿಯದ ತೆರದೆ ಬಂದಾ |
ತನ ಲಸನ್ನಯನತ್ರಯಂಗಳ ಮುಚ್ಚಿ ಕರಪುಟದೆ ||
ದಿನಪಚಂದ್ರಕೃಶಾನುಗಳು ಭೋಂ |
ಕನೆ ಪಡೆದರಸ್ತವನು ಸಕಲಭು |
ವನಮುಮಾಯ್ತುತ್ಯಂಧಕಾರಾವೃತಮಿಳಾರಮಣಾ ||೧೬||

ಘಳಿಲನಖಿಲಸುಕರ್ಮಸಂತತಿ |
ನಿಲೆ ಜಗದ್ವ್ಯಾಪಾರಕೆಡರಡ |
ಸಲು ಕಪರ್ದಿಯು ಕಂಡು ಮುಳಿದನು ಭುವನಹಿತಕರನು ||
ಎಲೆ ಮುಗುದೆ ನಿನ್ನಿಂದೆ ಗಡ ಕ |
ತ್ತಲೆಯಿಳೆಗೆ ಕವಿದತ್ತು ಲೋಕ |
ಕ್ಕಳಲು ಸಮನಿಸಿತದರಿನಾಗೆಲೆ ಕಾಳಿ ನೀನೆಂದ ||೧೭||

ಗಡಗಡನೆ ನಗರಾಜನಂದಿನಿ |
ನಡುಗಿದಳು ನಮಿಸಿದಳು ಶಂಕರ |
ನಡಿಗೆ ಬಿನ್ನವಿಸಿದಳು ಭಯಭಕ್ತಿಯಲಿ ಕೈಮುಗಿದು ||
ಒಡೆಯ ತಿಳಿಯದೆ ತಪ್ಪನೆಸಗಿದೆ |
ಬಿಡುಬಿಡೀಕೋಪವನು ಸಲಹೆನೆ |
ಮೃಡನೊಸೆದು ನಸುನಗುತೆ ನುಡಿದನು ಮಡದಿಯೊಡನಿಂತು ||೧೮||

ಧಾರಿಣಿಯೊಳೆಸೆದಿರ್ಪ ಕಾಂಚಿಯ |
ಸೇರಿ ನೀಂ ತಪವೆಸಗೆ ನಿನ್ನೀ |
ಘೋರಪಾತಕರಾಶಿ ಪರಿವುದು ಶಾಪಮುಡಗುವುದು ||
ಗೌರಿಯೆನಿಸುವೆ ನೀನೆನುತ್ತಲಿ |
ಮಾರಹರನುಸಿರ್ದೊ*ಡನೆ ಚಂಡಿಕೆ |
ಸಾರಿ ಕಾಂಚಿಯನಲ್ಲಿ ವಿಮಲಸ್ಥಲವನರಸಿದಳು ||೧೯||

ನೆಲಸಿದಳು ತಾನೊಂದು ಮಾವಿನ |
ನೆಳಲಿನೊಳು ಮಾಡಿದಳು ಮೆರೆವಾ |
ಮಳಲ ಲಿಂಗವನದನು ಸಂಪೂಜಿಸಿದಳಗಜಾತೆ ||
ತಿಳಿಯಲೀಕೆಯ ಭಕ್ತಿಯನು ಗರ |
ಗಳನು ಬಗೆದನು ತೊಟ್ಟನಾಗಳೆ |
ಪೊಳೆಯದೊಂದುಕ್ಕುತಲಿ ಪರಿತಂದುದು ಮಹಾಭರದೆ ||೨೦||

ಶಿವಶಿವಾ ತಪಕೆಡರು ಬಂದುದೆ |
ಸವನಿಸಿದ ಪೊನಲಿಂದದೇವೆನೊ |
ಭುವನದೆನ್ನಯ ಮಳಲ ಲಿಂಗವನೆಂತು ರಕ್ಷಿಪೆನೋ ||
ಶಿವನ ಮಾಯಾಜಾಲದಿಂ ಸಂ |
ಭವಿಸಿರಲ್ವೇಳ್ಕೆನುತೆ ನಿಜದೇ |
ಹವನೆ ಮರೆಗೈಯುತಲಿ ಲಿಂಗಕೆ ತಡೆದಳಾಪೊನಲ ||೨೧||

ಆಗ ವ್ಯೆದೋರುತಲಿ ಕಾಳಿಗೆ |
ನಾಗಭೂಷಣನವಳ ಶಾಪವ |
ನೀಗಿ ಕಳೆದನು ನೀಡಿದನು ಮನದೀಪ್ಸಿತಂಗಳನು ||
ಬೀಗಿ ತನ್ನರ್ಧಾಂಗದಲಿ ಶಿವೆ |
ಯೋಗಳುಂ ನೆಲಸಿರಲು ಕರುಣಾ |
ಸಾಗರನು ವರವಿತ್ತನೇಕಾಮ್ರೇಶನೆನಿಸಿದನು ||೨೨||

ಬೇಡಿದಿಷ್ಟವ ಭಕ್ತಬೃಂದಕೆ |
ನೀಡಿ ಸಲಹುವನಲ್ಲಿ ಶರ್ವನು |
ಮಾಡು ನೀಂ ಮನವಾರೆ ಪೂಜೆಯನಾತನೊಲಿಯುವನು ||
ಕೇಡು ಪರಿಹೃತಮಹುದೆನಲು ಕೈ |
ಜೋಡಿಸುತೆ ಧರಣೀಂದ್ರ ಪಡಿಮಾ |
ತಾಡದೇಕಾಮ್ರೇಶನಾಲಯಕ್ಕೈದೆ ನಡೆತಂದ ||೨೩||

ಅಸಮಭಕ್ತಿಯೊಳಸಮನಯನನ |
ಕುಸುಮಗಂಧಾಕ್ಷತೆಗಳಿಂ ರಾ |
ಜಿಸುವ ಸುರಭಿಳಧೂಪದೀಪಾದಿಗಳಿನರ್ಚಿಸುತೆ ||
ರಸೆಯೊಡೆಯ ಬಾನ್ನವಿರಗಭಿವಂ |
ದಿಸುತೆ ಕುಲದೈವಕ್ಕೆ ಸಮನಿಸಿ |
ದಸದಳದ ವಿಪದವನು ಪರಿಹರಿಸೆಂದು ಬೇಡಿದನು ||೨೪||

ಮನೆಗೆ ಮರಳಿದು ಶಿವನ ನೆನೆಯು |
ತ್ತನಘಶುದ್ಧಾಂತದೊಳು ಪವಡಿಸಿ |
ದನು ಕೃಪಾನಿಧಿಯೆನಿಸುವೇಕಾಮ್ರೇಶನಂ ಸ್ಮರಿಸಿ ||
ಕನಸಿನಲಿ ದೇವನನು ಕಂಡನು |
ಜನಿಯಿಸಿದ ಹರಿಸದಲಿ ಕುಂಬಿ |
ಟ್ಟನು ಧರಿತ್ರೀವರನು ತತ್ಪದವನರುಹಂಗಳಿಗೆ ||೨೫||

ಮಂದಹಾಸದೆ ನುಡಿದನಾಬಾ |
ಲೇಂದುಧರ ಭೂವರನೊಳುಳಿಯೈ |
ದಂದುಗವ ರೇಣುಕಸಮಾಹ್ವಯನಿಹನು ಕಾಂಚಿಯಲಿ ||
ಮಂದಮತಿಗಳ ಮೂರ್ಖತೆಯಿನವ |
ನಂದು ನೊಂದನು ಪೋಗಿ ನೀಂ ಕರೆ |
ತಂದು ಸಂತವಿಸಾತನನು ನಿನ್ನೆಳವು ಸಿದ್ಧಿಪುದು ||೨೬||

ಒರೆಯುತೀಪರಿ ಮೈಗರೆಯೆ ಶಂ |
ಕರನು ನೃಪನುಪ್ಪವಡಿಸುತ್ತಲಿ |
ಕರೆಯಿಸಿದ ನಿಜಮಂತ್ರಿವರ್ಗವನೊರೆದ ನಡೆದುದನು ||
ಚರರನಟ್ಟಿದರವರು ರೇಣುಕ |
ಗುರುವರನ ಕರೆತರಲು ಕಾಂಚೀ |
ಪುರದ ಬೀದಿಗಳಲ್ಲಿ ತೊಳಲಿದರರಸುತೈದಿದರು ||೨೭||

ಒಮ್ಮೆ ಪಾಡುತಲೊಮ್ಮೆ ನೋಡುತ |
ಲೊಮ್ಮೆ ಮಾತಾಡುತಲಿ ತನ್ನೊಳ |
ಗೊಮ್ಮೆ ನಿಡುಸುಯ್ಯುತ್ತೆ ಕಣ್ಣೆವೆಬಿಗಿದು ಜಾನಿಸುತೆ ||
ಒಮ್ಮೆ ನಗುತಲದೊಮ್ಮೆ ಮಿಾರಿದ |
ಸಮ್ಮುದದಿನೆಣ್ದೆಸೆಯನೀಕ್ಷಿಸು |
ತೊಮ್ಮೆಯುಮ್ಮಳಿಪಾತನನು ಸಲೆ ಕಂಡರಾಚರರು ||೨೮||

ಇವನೆ ರೇಣುಕನಹುದೆನುತ್ತಲಿ |
ತವೆ ಬಗೆದು ಬಳಸಿನಲಿ ನಿಂದರು |
ಬುವಿಯೊಡೆಯ ಬೆಸಸಿಹನು ನಡೆ ನೀನಾತನೋಲಗಕೆ ||
ಜವದಿನೇಳೆನೆ ರೇಣುಕನು ತಾಂ |
ಶಿವುಡನಂತಿರಲುಸಿಕನಿರ್ದನು |
ಭವವಿದೂರನು ಶೈವಮತಸಾಮ್ರಾಜ್ಯಶಾಸಕನು ||೨೯||

ನುಡಿಯಿಸೆಯು ನುಡಿಗುಡದೆ ತಾನಿ |
ರ್ದೆಡೆಯಿನಲುಗದೆ ಮೊಗವನೆತ್ತದೆ |
ಜಡನವೋಲ್ ಕುಳ್ಳಿರ್ದು ಪಲವಗೆಯಿಂದೆ ಬೇಡಿದೊಡಂ ||
ಪೊಡಮುಡೆಯುವಿಾಕ್ಷಿಸದ ಗುರುವನು |
ಬಿಡದೆ ಚಲದಿಂ ಪಳಿದು ಸೆಳೆಯು |
ಲ್ಕೊಡನೆ ರೇಣುಕನೆನ್ನ ಕಾಡದೆ ಪೋಗಿ ನೀವೆಂದ ||೩೦||

ತಿರುಕ ನಾನೆನ್ನಿಂದೆ ನಿಮ್ಮಯ |
ನರಪಗೇನಾವಪುದು ಕಜ್ಜಂ |
ತೆರಳಿ ಪೀಡಿಸಲೇತಕೆನ್ನನು ಬಾರೆನಲ್ಲಿಗೆನೆ ||
ಚರರು ಪಾಶಗಳಿಂದೆ ಬಂಧಿಸಿ |
ದರದರನೆ ಪಿಡಿದೆಳೆದರಾಗಡೆ |
ವಿರಸವಾದುದದೆಂತುಟೋ ಗುರುನರನ ಮಾಹಾತ್ಮ್ಯಂ ||೩೧||

ಕೆಲರು ಮುಗ್ಗರಿಸಿದರು ನೆಲದಲಿ |
ಕೆಲರು ನೆತ್ತರ ಕಾರಿ ಬಿದ್ದರು |
ಕೆಲರು ಕೈಕಾಲುಡಿಯೆ ಪೊಡವಿಯೊಳಡಗಿದರು ಕೆಲರು ||
ಅಳಿದರಲ್ಲಿಯೆ ಮಿಕ್ಕುಳಿದ ಕೆಲ |
ರಳರಿನೋಡಿದರವನಿಯೊಡೆಯನ |
ಬಳಿಗೆ ನಡೆದುದ ಬಿನ್ನವಿಸಿದರು ಬಿಗಿದ ಭೀತಿಯಲಿ ||೩೨||

ಚೋಳಭೂಪಾಲಕನು ಚರರಿಂ |
ಕೇಳಿ ಸೈವೆರಗಾದನಿದುವೇ |
ಲೀಲೆ ಗಡ ಪರಶಿವನ ಭಾವಿಸಲವನೆ ವೇಷವನು ||
ತಾಳಿ ಬಂದಿಹನಿನ್ನು ಸೈತಿರೆ |
ಕೋಳುಹೋಹುದು ರಾಜ್ಯವೆನುತಲಿ |
ಬೋಳವಿಸಿ ಕರೆತರಲು ನಡೆದನು ಬಿಡದೆ ರೇಣುಕನ ||೩೩||

ಐದಿ ಗುರುವರನಂಘ್ರಿಗಳನಾ |
ಮೇದಿನೀಪತಿ ಮುಗಿದು ಕೈಗಳ |
ನಾದಮಪರಾಧಗಳ ಮನ್ನಿಸು ಗುರುವೆ ಸುರತರುವೇ ||
ಸಾದರದೆ ನೋಡೆನ್ನನುದ್ಧರಿ |
ಸೈ ದಯಾನಿಧಿ ನೀನಲಾ ನಿನ |
ಗಾದುರುಳರಪಚಾರಮೆಸಗಿದರದನು ಮರೆಯೆಂದ ||೩೪||

ನಿನ್ನ ಮೈಮೆಯನರಿಯದಾದೆನು |
ನಿನ್ನ ರೂಪವ ತಿಳಿಯದಾದೆನು |
ನಿನ್ನ ಕೃಪೆಗಾಂ ದೂರನಾದೆನು ಮರುಳನಾನಾದೇ ||
ಮನ್ನಿಸೇಕಾಮ್ರೇಶನೊರೆಯಲು |
ನಿನ್ನ ಕೆಲಕೈತಂದೆನರಿದೆನು |
ನಿನ್ನನಿನ್ನಾದೊಡಮನುಗ್ರಹಿಸಯ್ಯ ಗುರುರಾಯ ||೩೫||



ಶ್ರೀ ರೇಣುಕಾಚಾರ್ಯರು ಕಾಂಚೀಕ್ಷೇತ್ರದ ವರದರಾಜಮೂರ್ತಿಯ
ಶಿರಃಕಂಪನವನ್ನು ನಿಲ್ಲಿಸುವುದು.

ಮನೆತನದ ದೈವದ ಶಿರಃಕಂ |
ಪನವ ನಿಲಿಸೈ ರಕ್ಷಿಸೈ ನಾ |
ಡನಿದನಾಪದದತ್ತಣಿಂ ನಿಜರೂಪವನು ತೋರೈ ||
ಎನೆ ಜನಾಧಿಪನಂದು ರೇಣುಕ |
ಮನಮೊಲಿದು ನಿಜರೂಪ ತೋರುತೆ |
ತನಯ ಚಿಂತಿಸಬೇಡ ಶಿವನೊಲವಹುದು ನಿನಗೆಂದ ||೩೬||

ವರದರಾಜಾಲಯುವ ಸಾರ್ದನು |
ತೆರೆಯ ಮರೆಯಲಿ ನಿಂದು ವಿಗ್ರಹ |
ಶಿರದೆ ನಿಜಕರವಿಟ್ಟನಾಯ್ಕನೆ ಕೊಡಹದಡಗಿದುದು ||
ಸುರರು ಸುಮವರ್ಷವನು ಕರೆಯಲ |
ಮರಿಯರಾವಳಿ ನಚ್ಚಣಿಸೆ ನಿ |
ರ್ಜರರ ದುಂದುಭಿ ಮೊಳಗೆ ರೇಣುಕ ಮಹಿಮೆಮೆರೆಯಿಸಿದ ||೩೭||

ಸತ್ತ ಚಾರರು ನಿದ್ರೆಯಿಂದೆ |
ಚ್ಚತ್ತ ಮಾಳ್ಕೆಯಿನೆದ್ದು ನಿಂದರು |
ಮತ್ತತೆಯನುಳಿದುಳಿದರತಿಶಯ ಭಕ್ತಿ ಭಾವದಲಿ ||
ಸುತ್ತಲುಂ ನೋಡುತ್ತೆ ಕೈಮುಗಿ |
ಯುತ್ತೆ ನಿಂದರು ಗುರುಮಹಿಮೆಯಾ |
ವೃತ್ತವಿದು ಪಸರಿಸಿತು ನಾಡೊಳಗೆತ್ತಲುಂ ಭರದೆ ||೩೮||

ಕ್ಷೋಣಿಪಾಲಕನದ್ಭುತವನಿದ |
ಕಾಣುತಾನಂದಾತಿಶಯದಲಿ |
ರೇಣುಕನ ಪದಕಮಲಕಭಿವಂದಿಸುತೆ ಕೊಂಡಾಡಿ ||
ಪ್ರಾಣವಾಯುವಿದಿರ್ಪವರೆಗಂ |
ಮಾಣದಾಂ ಮತ್ಪ್ರಜೆಯೊಡನೆ ನಿ |
ನ್ನಾಣೆ ಶಿವಪದಶರಣಸೇವಾನಿರತನಹೆನೆಂದ ||೩೯||

ಸಂತಸದೊಳೀಶೈವಮತಸಿ |
ದ್ಧಾಂತತತ್ತ್ವವ ಬೋಧಿಸುತಲೆ |
ನ್ನಂತರಂಗದ ತಮವ ಹರಿಸೈ ಭವದ ಸಂಕಟಕೆ ||
ಎಂತುಮಾಂ ಪಕ್ಕಾಗದಂತಿರೆ |
ಶಾಂತಿದಾಯಕ ಕರುಣಿಸೆಂದು ಸ |
ಮಂತು ಭೂಪತಿ ಬೇಡೆ ರೇಣುಕನವನ ಪರಸಿದನು ||೪೦||

ಬಳ್ಳಿಮಿಂಚಿನ ತೆರದ ಜೀವನ |
ದಲ್ಲಿ ಜೀವಿಗೆ ಸೌಖ್ಯಮಿನಿಸುಮ |
ದಿಲ್ಲಲಾ ಕ್ಷಣಭಂಗುರವು ನಿಸ್ಸಾರ ಸಂಸಾರ ||
ಬಲ್ಲೆಯಾದೊಡೆ ನೀನಿದನು ಜಗ |
ಕೆಲ್ಲ ಶಿವನೇ ಪಿರಿಯನದರಿಂ |
ತಲ್ಲಣಿಸದಾತನನೆ ನಂಬಲು ಮುಕ್ತನಹೆಯೆಂದ ||೪೧||

ಶಿವನ ಮಂತ್ರವ ಪಠಿಸುತನುದಿನ |
ಶಿವನ ನಾಮಸ್ಮರಣೆಯೆಸಗುತೆ |
ಶಿವನ ತತ್ತ್ವಾಮೃತವನೀಂಟೈ ಮುಂದಿಗಿದನರಿಪೈ ||
ಶಿವನೊಲಿವ ಶಿವಲೋಕ ಕೈಸಾ |
ರುವುದು ನಿನಗೆಂದುಸಿರ್ದು* ಗರಪುರ |
ಭವನನನು ಜಾನಿಸುತೆ ರೇಣುಕನಡರಿದನು ನಭವ ||೪೨||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಹನ್ನೊಂದನೆಯ ಸಂಧಿ.

ಸೂ|| ರಾಕ್ಷಸಾಕೃತಿಯಾಂತು ಕಾಡುವ |
ಯಕ್ಷಮಿಥುನವ ರೇಣುಕನು ಫಾ |
ಲಾಕ್ಷದಿಂ ಸುಟ್ಟುರಿಪಿ ಶಾಪವ ಕಳೆದು ಸಲಹಿದನು ||

ಸಿರಿಗೆ ತೌರೂರಾಗಿ ಭಾಸುರ |
ತರಮೆನಿಪ್ಪಾವಾಸನೂರೊಳು |
ಮೆರೆದಿಹುದು ಸೋಮಾರ್ಧಶೇಖರಸದನವಸಮಾನ ||
ಪರಿಪರಿಯ ಜನಜಾಲಮಲ್ಲಿಗೆ |
ಪರಮಭಕ್ತಿಯಿನೈತರುತ್ತನ |
ವರತಮುಂ ಪೂಜಿಪುದು ಬಯ್ಕೆಯ ಪಡೆದು ಮರಳುವುದು ||೧||

ಶಿತಿಗಳನ ಮಂದಿರದ ಮುಂಗಡೆ |
ಯತಿವಿಶಾಲವಟದ್ರುಮದ್ವಯ |
ಪತಗತತಿಗಾಶ್ರಯ ನಿತಾಂತಮನೋಜ್ಞಸುಚ್ಛಾಯ ||
ಪತಿಗರಾಯಾಸವನು ಪರಿಹರಿ |
ಸುತಲಿ ಬಗೆಗೊಳುತಿರ್ದುದೀಕ್ಷಿಸೆ |
ಹಿತಕರವು ಪಗಲಲ್ಲಿ ಮೇಣಿರುಳಲ್ಲನರ್ಥಕರ ||೨||

ಇರುಳು ಮಾರ್ಗಾಯಾಸವನು ಪರಿ |
ಹರಿಸಿ ಕೊಳಲೆಂದರಿಯದಲ್ಲಿಗೆ |
ಬರುವ ಪಥಿಕರನೊಂದುರಾಕ್ಷಸಯುಗ್ಮ ವಂಚಿಸುತೆ ||
ಮರದಿನಿಳಿತಂದೈದೆ ಪಿಡಿಯುತೆ |
ಕೊರಲ ಮುರಿಯುತೆ ಕರುಳ ಬಗಿಯು |
ತ್ತರುಣಜಲವನು ಪೀರಿ ತಿಂಬುದು ಬಿಕ್ಕನುಕ್ಕೆವದಿಂ ||೩||

ಪಿಂಬಗಲೊಳಾವಿಟಪಿಯೊತ್ತಿನೊ |
ಳಂಬರದಿನಿಳಿತಂದು ರೇಣುಕ |
ಸಾಂಬನಾಮಸ್ಮರಣೆಯೆಸಗುತೆ ನಿಲಲು ದೇವಡಿಗ ||
ಮುಂಬರಿದು ನುಡಿಸಿದನು ದಾರಿಗ |
ನೀಂ ಬಳಲಿ ಬಂದಿರ್ಪೆ ನಿನಗೀ |
ಯಿಂಬು ತಗದಿಲ್ಲಿರಲುಬಾರದು ತೆರಳು ತೆರಳೆನುತ ||೪||

ಆನುಡಿಯನಾಲಿಸುತೆ ರೇಣುಕ |
ನೇನೆಲವೊ ದೇವಡಿಗ ಧರ್ಮ್ಮನಿ |
ದಾನವನು ನೀ ಬಲ್ಲೆಯಾ ಪೇಳನ್ನಸತ್ರಗಳ ||
ದಾನಿಗಳು ನಿರ್ಮ್ಮಿಪರು ದೇವ |
ಸ್ಥಾನಗಳ ಪಾಂಥರ ಹಿತಕ್ಕೆಂ |
ದೀನವೀನಕ್ರಮವನೀವರೆಗರಿಯೆವಾವೆಂದ ||೫||

ಮುಸುಕುವುದು ಕಾರ್ಗ್ಗತ್ತಲೆಯದೆಂ |
ದಸವಸದೆ ನಾವಿಲ್ಲಿಗೈತರ |
ಲು ಸವಿನುಡಿಯಾಡದೆ ತೆರಳ್ ತೆರಳೆಂಬೆ ಬಳಲಿದರ ||
ಘಸಣಿಗೊಳಿಪುದು ಧರ್ಮ್ಮವೇ ನೀ |
ನುಸಿರು ನಿನಗೇನಿದರಿನೂಣಯು |
ಮುಸಿಕನಿರೆ ಬಗೆ ಬಾರದೇನ್ನೈ ಸಾಕು ಸಾಕೆಂದ ||೬||

ಆನುಡಿಯ ದೇವಡಿಗನಾಲಿಸಿ |
ದೀನತೆಯಿನಿಂತೊರೆದ ಸಾಧುವೆ |
ಮಾನಸಕೆ ಬೇಸರವುದುಂಟಾಯ್ತಲೆ ಮಹಾದೇವ ||
ಏನ ಪೇಳುವೆನೀದ್ರುಮಂಗಳು |
ದಾನವರ ಮಿಥುನಕ್ಕೆ ನೆಲೆ ಪಲ |
ವಾನುದಿನದಿಂ ಪಗಲು ತಿಗುಣೆವೊಲಿರ್ಪರಾಖಳರು ||೭||

ಇರುಳು ಸಮನಿಸೆ ಗಂಡವೆಂಡಿರು |
ಭರದೆ ರಾಕ್ಷಸರೂಪದಿಂದಲಿ |
ಪೊರಮಡುವರರಿವಿಲ್ಲದಿಲ್ಲಿಗೆ ಬರುವ ದಾರಿಗರ ||
ಪರಣವನು ತೆಗೆಯುತ್ತೆ ಮಾಂಸವ |
ನುರದೆ ತಿಂದರುಣಾಂಬುವೀಂಟುತೆ |
ಮರಳುವರು ಮರದೆಡೆಗೆ ಮತ್ಕುಣರೂಪವನು ತಾಳಿ ||೮||

ಬಲ್ಲೆ ನಾನಿದನದರಿನೀಪರಿ |
ಸೊಲ್ಲಿಸಿದೆ ನಿನ್ನೊಡನೆ ಮಿಥ್ಯೆಯಿ |
ದಲ್ಲವೈ ತುತ್ತಾಗಬೇಡೀದನುಜಮಿಥುನಕ್ಕೆ ||
ನಿಲ್ಲದಿಲ್ಲಿಂ ತೆರಳು ತೆರಳೆನೆ |
ಬಲ್ಲರೆರೆಯನು ನುಡಿದ ನಾವಿ |
ನ್ನೆಲ್ಲಿ ಪೋಪುದು ಬಳಲಿ ಬಂದೆವು ಶಿವನೆ ಗತಿಯೆಮಗೆ ||೯||

ಪಾಳೊಡಲ ಪೊರೆಯಲಿಕೆ ದೈನ್ಯವ |
ತಾಳಿ ನಿತ್ಯಮುಮೂರುಕೇಳಿಗ |
ಳೋಳಿಯನು ತಿರುತಿರುಗಿ ಬೇವಸಬಟ್ಟು ನಾಣ್ಬಿಟ್ಟು ||
ಬಾಳುವುದಕಿಂ ಮಡಿವುದೇ ಗಡ |
ಮೇಲು ತಣಿಯಲಿ ಭೂತಜಾಲವು |
ಕಾಲಕಾಲನ ಲೀಲೆ ಮೆರೆಯಲಿ ಭೀತಿ ಬೇಡೆಂದ ||೧೦||


ಛಿದ್ರವಸನವ ಪಾಸಿ ನೆಲದೆ ದ |
ರಿದ್ರನಂತಿರೆ ಮಲಗಿದನು ಗುರು |
ನಿದ್ರೆಯಾವೇಗವನು ತಡೆಯದನಂತೆ ನಟಿಸುತಲಿ ||
ಭದ್ರದಾಯಕ ಸಲಹು ದನುಜರು |
ಪದ್ರವದಿನುರ್ವಿಯನು ನೀನಲೆ |
ರುದ್ರ ಭವ್ಯಸಮುದ್ರ ನತಪರಿಪಾಲನೋನ್ನಿದ್ರ ||೧೧||

ಹರನ ಜಾನಿಸುತಿಂತು ಪವಡಿಸೆ |
ಗುರುವರನು ದೇವಡಿಗನೀಕ್ಷಿಸಿ |
ಮರುಳನಿವ ದೇಹಾಭಿಮಾನವ ಬಡತನಕ್ಕಾಗಿ ||
ತೊರೆದಿಹನು ಗಡ ಪೂರ್ವಸಂಚಿತ |
ವಿರೆ ನಿವಾರಿಸಲಾರಿಗಳವೆಂ |
ದಿರದೆ ಚಿಂತಿಸುತಾಗ ತೆರಳಿದ ತನ್ನ ಮಂದಿರಕೆ ||೧೨||

ಭರದೆ ಕಳ್ತಲೆ ಕವಿಯಲಾನ |
ಟ್ಟಿರುಳು ಸಮನಿಸೆ ದನುಜಮಿಥುನವು |
ಮರದಿನಿಳಿತರ್ಪುದನು ಕಾಣುತಲಾಗುರೂತ್ತಮನು ||
ತೆರೆಯೆ ನಿಜನಿಟಲೇಕ್ಷಣವ ದ |
ಳ್ಳುರಿ ಭುಗಿಲ್ಭುಗಿಲೆಂದು ಪೊರಮ |
ಟ್ಟುರಿಪಿದುದು ಕಾರ್ಬೊನ್ನ ಗುಂಡುಗಳಾದುವೊಡಲುಗಳು ||೧೩||

ದಿನಪನುದಯಾಚಲದ ಸಿಂಹಾ |
ಸನವನೇರಿದ ಬಳಿಕಲಾಪುರ |
ಜನವು ಮೃತ್ಯುಂಜಯನನಾರಾಧಿಸಲಿಕೈತಂದು ||
ತನತನಗೆ ಸೊಲ್ಲಿಸುತೆ ಪಿಶಿತಾ |
ಶನಮಿಥುನ ಸುಟ್ಟುರಿದು ಕಾರ್ಬೊ |
ನ್ನಿನ ಮಹಾಗೋಳಕಗಳಾದುದ ಕಂಡು ಬೆರಗಾಯ್ತು ||೧೪||

ಲೋಗರಚ್ಚರಿವಡುತೆ ತಮ್ಮೊಳೆ |
ಜಾಗು ಧಣು ಧಣು ಪೂತು ಮಝುರೇ |
ನಾಗಭೂಷಣನೆಮ್ಮ ಸಂಪ್ರಾರ್ಥನೆಯನಾಲಿಸುತೆ ||
ಯೋಗಿರೂಪದೆ ಬಂದು ನಮ್ಮಯ |
ಬೇಗೆಯನು ಪರಿಹರಿಸಿ ಸಲಹಿದ |
ನೀಗಳೆನುತಲಿ ರೇಣುಕನ ಪದಕೆರಗಿ ಪೊಗಳಿದರು ||೧೫||



ಶ್ರೀ ರೇಣುಕಾಚಾರ್ಯರು ಯಕ್ಷದಂಪತಿಗಳನ್ನು ತಮ್ಮ
ಫಾಲನೇತ್ರದಿಂದ ಸುಟ್ಟು ಭಸ್ಮಮಾಡುವುದು.

ಪರಮಗುರುವವರೊಡನೆ ನಲವಿಂ |
ದೊರೆದನೆಲೆ ಭಕ್ತರಿರ ಚಿಂತಿಸ |
ದಿರಿ ವಿಚಾರಿಸಲೈದೆ ಸೃಷ್ಟಿಸ್ಥಿತಿಲಯಂಗಳಿಗಾ ||
ಗಿರಿಜೆಯರಸನೆ ಕರ್ತನಾತನ |
ಕರುಣೆಯೇ ಸುಖ ಮುಳಿಸೆ ದುಃಖವು |
ಕರಣವಾತನಲೈಕ್ಯವೊಂದುವುದಲ್ತೆ ಕೈವಲ್ಯ ||೧೬||

ಮರೆಯದಿರಿ ನೀವಿದನು ಬರಿದೇ |
ಕೊರಗದಿರಿ ಮತ್ತುಳಿದರಲಿ ಪ |
ಲ್ಗಿರಿಯದಿರಿ ಮರುಳಾಗದಿರಿ ಶಿವಮಂತ್ರಪಠನೆಯಲಿ ||
ನಿರತರಾಗಿರಿ ಪಗಲುಮಿರುಳುಂ |
ಪೊರೆದಪನು ಶಿವನೆಂದು ಸೊಲ್ಲಿಸಿ |
ಕರದೆ ಗೋಳಕಯುಗ್ಮವನು ಪಿಡಿದಿರದೆ ತೆರಳಿದನು ||೧೭||

ಮುಂದಕೈತರೆ ಗುರುವರೇಣ್ಯನ |
ದೊಂದುಕಡೆಯೊಳಗೊರ್ವ ಕಮ್ಮರ |
ಚೆಂದದಿಂ ತಿದಿಯೊತ್ತುತಿರ್ಪುದ ಕಾಣುತವನೆಡೆಯೊಳ್ ||
ನಿಂದು ಗೋಳಕಯುಗಳವನು ಕುಡು |
ತಂದದಿಂ ಕಮ್ಮರನೆ ರಚಿಸೈ |
ಸಂದ ಖಡ್ಗದ್ವಯವನಿವರಿಂದೆಂದ ರೇಣುಕನು ||೧೮||

ತುಡುಕೆ ಕಮ್ಮರ ಗೋಳಕಂಗಳ |
ನೊಡಲು ನಡುಗಿದುದಚ್ಚಿಮುಚ್ಚಿದು |
ವೊಡನೆ ಸಾಧ್ವಸವೊಗೆದುದಿಟ್ಟನು ನೆಲದೊಳದ ಕಂಡು ||
ಸೆಡೆಯುದಿವ ಕಾಯಿಸುತೆ ನೆಟ್ಟನೆ |
ಬಡಿದು ಖಡ್ಗವ ರಚಿಸೆನುತೆ ಗುರು |
ನುಡಿಯಲಂತೆಸಗಿದನು ಕಮ್ಮರ ಪುರುಷಗೋಳಕವ ||೧೯||

ಎನಿತು ಕಾಸಲುಮೆನಿತು ಬಡಿಯಲು |
ಮಿನಿಸುಮಲುಗದ ಪೆಣ್ಣಗೋಳಕ |
ಮನಿತರಲಿ ಕೆಲದೊಳಗೆ ಬಂದುಗೆಯರಲಿದುದ ಕಂಡು ||
ಬಿನದದಿಂದದ ಮಾಂಸವೆನುತಲಿ |
ತನುವ ಮುಂದಕೆ ನೀಡಲಾಸೆಯಿ |
ನನುವರಿದ ಗುರು ತತ್ತ್ವವಾರಿಧಿ ಕಮ್ಮರಂಗೊರೆದ ||೨೦||

ಬಡಿಯು ನೀಂ ಚಮ್ಮಟಿಗೆಯಿಂದಲಿ |
ಬಿಡದೆ ಸಮಯವಿದಲ್ತೆ ಕಮ್ಮರ |
ಖಡುಗಮಂ ರಚಿಸದನು ತಳುವದೆ ಎನಲು ರೇಣುಕನು ||
ಒಡನೆ ವೇಗದಿನೆಸಗುತಂತೆಯೆ |
ನುಡಿದನೀಬಿಸವಂದವನು ನನ |
ಗೊಡೆಯ ಬಿತ್ತರಿಸುವುದು ನೀನೆನುತಲಿ ಕುತೂಹಲದೆ ||೨೧||

ನಗುತಲಾಗಳೆ ನುಡಿದ ಗುರುವೆಲೆ |
ಮಗನೆ ಲಾಲಿಸು ಪೂರ್ವವೃತ್ತವ |
ನೆಗಳ್ದ* ಪುಣ್ಯಾರಣ್ಯವೆಂಬೊಂದಡವಿಯಲಿ ಮುನ್ನ ||
ಸೊಗಯಿಸಿರ್ದಾಯಕ್ಷಮಿಥುನವು |
ಮಿಗೆ ಕವಿಯಲಜ್ಞಾನ ಕಾಮಕೆ |
ಬಗೆಯನೀಯುತದೊರ್ಮೆ ನೀಗಾಡಿತು ವಿವೇಕವನು ||೨೨||

ಯತಿಪನೊರ್ವನು ತಪವನೆಸಗುತೆ |
ರತಿಪಹರನನು ಜಾನಿಸುತ್ತಿರೆ |
ಸತಿಪತಿಗಳೈತಂದು ಮುಂಗಡೆಯಲ್ಲಿ ಸುಸಿಲೆಸಗೇ ||
ಖತಿಯಿನಾಮುನಿಶಾಪವಿತ್ತನು |
ವಿತಥಮಹುದೇಂ ಯತಿಜನೋಕ್ತಿ ಪಿ |
ಶಿತಭುಜರು ತಾವಾದರೊಸೆಯಲು ಬೇಡಿದರು ನಮಿಸಿ ||೨೩||

ಶರಣು ಮುನಿಪ ಮಹಾಪರಾಧವ |
ವಿರಚಿಸಿದೆವರಿಯದೆಯೆ ಮೋಹದೆ |
ಮರೆದೆವುಚಿತಾನುಚಿತಮಾರ್ಗವ ನೀನೆ ಗತಿಯೆನುತೆ ||
ಪರಮದೈನ್ಯದೆ ಪಾದಕೆರಗಲು |
ಕರುಣೆಯೊರೆದನು ಶಾಪವಿದು ತಾಂ |
ಪರಿಹೃತವು ಮೇಣಪ್ಪುದೀಶಾಜ್ಞೆಯಲಿ ರೇಣುಕನಿಂ ||೨೪||

ಎಂದೊರೆದು ಮೈಗರೆದ ಮುನಿಪತಿ |
ಯಂದಿನಿಂ ದಂಪತಿಗಳೈತಂ |
ದೊಂದಿ ವಟವಿಟಪಿಯನು ತಿಳಿಯದೆ ಬಂದ ದಾರಿಗರ ||
ತಿಂದು ತೇಗುತ್ತಿರ್ದುವೈ ಸಲೆ |
ಕಂದುಗೊರಲನ ಕರುಣೆಯಿಂದಲಿ |
ಪೊಂದಿ ಶಾಪಾಂತವನು ಗೋಳಕವಾದರಿಂದೆನುತ ||೨೫||

ಪರಸಿ ರೇಣುಕ ಕಮ್ಮರನ ನಿಜ |
ಕರದೆ ಖಡ್ಗದ್ವಯವ ತಾಳುತೆ |
ತೆರಳಿ ಮೇಣಾಗ್ರಾಮಮಧ್ಯದೆ ಪರಿವ ಪೊನಲಿನೊಳು ||
ಇರದಧೋಮುಖಮಾಗಲೊಂದನು |
ಭರದೊಳಿಟ್ಟೆಲೆಬಾಳೆ ನೀಂ ನೆಲ |
ಸಿರುವುದೀಯೆಡೆಯಲ್ಲಿ ನಾನೊರೆವನ್ನೆವರಮೆಂದಂ ||೨೬||

ಕಳೆದು ಭವಭೀತಿಯನು ಶರಣರ |
ಸಲಹಲವತರಿಸಿದ ಜಗದ್ಗುರು |
ವಲೆ ನಿಜಾಂಘ್ರಿದ್ವಂದ್ವಪೂಜಾನಿರತಕಲ್ಪತರು ||
ಬಳಿಕ ಪೆರತೊಂದಸಿಯ ಕರದಲಿ |
ತಳೆದು ತಾರಾಪಥದೆ ನೆಟ್ಟನೆ |
ತಳರ್ದ*ನುಜ್ಜಯಿನೀಮಹಾಪುರಕಾಗಿ ಜವದಿಂದೆ ||೨೭||

ಇದುವೆ ಯಕ್ಷರ ಪೂರ್ವವೃತ್ತವು |
ಮದನವೈರಿಯ ಲೀಲೆ ಕೇಳ್ವ |
ರ್ಗದುಬುತವು ಜನ್ಮಾಂತರಾರ್ಜಿತದುರಿತನಾಶಕವು ||
ಮುದದಿನಿದನಾಲಿಪರಭೀಷ್ಟವ |
ಸದಯ ಗರಪುರನಿಲಯನೀವನು |
ಪದುಳದಲಿ ಕೈಸೇರುವುದು ಕೈವಲ್ಯಸೌಭಾಗ್ಯಂ ||೨೮||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಹನ್ನೆರಡನೆಯ ಸಂಧಿ.

ಸೂ|| ಸಾರಿ ಗುರುವುಜ್ಜಯಿನಿಯನು ದಯೆ |
ದೋರುತರಸಗೆ ವಿಕ್ರಮಾರ್ಕಗೆ |
ಚಾರುಖಡ್ಗವನಿತ್ತು ಪರಸಿದ ಮಹಿಮೆಗಾಗರನು ||

ಕಿನ್ನರೇಶ್ವರ ಜಂಬುಕೇಶ್ವರ |
ಮನ್ನಣೆಯ ಸೋಮೇಶ್ವರನು ಮಹಿ |
ಮೋನ್ನತಶ್ರೀಪಾಣಿಭದ್ರೇಶ್ವರನುಮೊಪ್ಪುತಲಿ ||
ಚೆನ್ನೆನಲು ನಾಲ್ದೆಸೆಯೊಳೆಸೆದಿರೆ |
ಸನ್ನುತವು ಪಂಪೆಯದು ಧರೆಯೊಳ |
ಗಿನ್ನಿದಕೆ ಸರಿಯಿಲ್ಲವೆಂಬಂತೆವೊಲು ಸೊಗಯಿಸಿತು ||೧||

ತವಿಸುತಲಿ ಪಥಿಕರ್ಕಳಾಯಾ |
ಸವನು ತನ್ನಯ ವಿಮಲಜಲದಿಂ |
ವಿವಿಧಸಸ್ಯಾವಳಿಗೆ ಜೀವನವೀಯುತನವರತ ||
ತವಸಿಗಳ ಮಂಡಲಿಗೆ ಸಂಮೋ |
ದವನು ಪೊಣ್ಮಿಪ ತುಂಗಭದ್ರೆಯು |
ಭವುಕವನು ನೀಡುತ್ತೆಮಿಂದರ್ಗಲ್ಲಿ ರಾಜಿಸಿತು ||೨||

ಹರಿಸದಲಿ ಸಂದರ್ಶಿಸುತ್ತದ |
ತೆರಳುತಲ್ಲಿಂ ಮುಂದೆ ರೇಣುಕ |
ಗುರುವರಂ ಕ್ಷಿಪ್ರಾತರಂಗಿಣಿಯೊಲ್ದಹರ್ನಿಶಮುಂ ||
ಮೆರೆವ ಸಿದ್ಧೇಶ್ವರಪದಾಂಬುಜ |
ಪರಿಚರಣೆಯಿಂ ಧನ್ಯತೆಯ ಪಡೆ |
ದಿರೆ ತೊಳಗುತಿಹ ರಮ್ಯಮಾಳವಜನಪದವ ಸಾರ್ದಂ ||೩||

ಇಳೆಗೆ ಲಿಂಗಾಂಗೈಕ್ಯಭಾವವ |
ತಿಳಿಸುತಲಿ ಪುರುಷಾರ್ಥಪುಂಜವ |
ನೊಲಿದು ಶಿಷ್ಯರ್ಗ್ಗೆದೆ ಕೈಗೊಳಿಸುತ್ತಲಾಯೆಡೆಯೊಳ್ ||
ವಿಳಿರ್ವ* ನೈಜಯಶಃಪತಾಕೆಯ |
ನಿಲಿಸಿ ಗುರುಮಂಡಲದೆ ತಾನ |
ಗ್ಗಳನೆನಿಸಿ ಪೆಸರಾಂತ ಮರುಲಾರಾಧ್ಯನೆಸೆದಿರ್ದಂ ||೪||

ಈ ಮಹಾಮಹಿಮನೆ ಸದಾಶಿವ |
ವಾಮದೇವಾನನಸಮುದ್ಭವ |
ನೀಮಹಿಯನುದ್ಧರಿಸೆ ಸಿದ್ಧೇಶ್ವರನ ಲಿಂಗದಿ ತಾಂ ||
ಮಾಮುಸಕದಲಿ ಮೂಡಿ ಮೆರೆದಂ |
ಪ್ರೇಮಪೂರ್ಣಂ ಶೈವಸನ್ಮತ |
ತಾಮರಸದಿವಸಾಧಿಪತಿ ಗಡ ನಂದಿಗೋತ್ರಪತಿ ||೫||

ಸಂತತಂ ಸದ್ಭಕ್ತಿಭರಿತ |
ಸ್ವಾಂತರಂತೇವಾಸಿಗಳು ನಿಗ |
ಮಾಂತರಂಗವನರಿಯೆ ಗುರುಶುಶ್ರೂಷೆಯೆಸಗುತಿರೆ ||
ಪಿಂತೆಸಗಿದವರಘವ ಹರಿಸುವ |
ದಾಂತನದ್ಭುತದಿವ್ಯಮಹಿಮೋ |
ದಂತನಾಶ್ರಮಮೆಸೆದುದಮಿತಾನಂದವಿಶ್ರಾಮಂ ||೬||

ಭರದೆ ರೇಣುಕನಲ್ಲಿಗೈದುತೆ |
ಪರಮಹರ್ಷದೆ ನುಡಿಸಲವರಿ |
ರ್ವರು ಮಹೇಶ್ವರನಾಣತಿಯ ತಾಮೊಡರಿಸಂದವನು ||
ನೆರೆ ವಿಭಾವಿಸಿ ತಮ್ಮೊಳಾಗಳೆ |
ಸುರುಚಿರದ ಶಿವತತ್ತ್ವಸುಧೆಯನು |
ಧರೆಗೆರೆಯೆ ಬಗೆದಂದು ಶಿಷ್ಯರ್ಗ್ಗೆದೆ ಬೆಸಸಿದರು ||೭||

ಏಳಿಸುತೆ ಸುರಲೋಕವನು ಸುವಿ |
ಶಾಲವೈಭವಭೋಗಭಾಗ್ಯದಿ |
ಮೇಲೆನಿಸಲುಜ್ಜಯಿನಿ ಮಾಳವರಾಜಧಾನಿಯದಂ ||
ಆಳುತಿರ್ದನು ವಿಕ್ರಮಾರ್ಕನೃ |
ಪಾಲನತಿಶಯಧರ್ಮಪರನು ದ |
ಯಾಳು ಗುರುಸೇವಾಧುರೀಣನು ರಿಪುವಿದಾರಣನು ||೮||

ಈತಿಬಾಧೆಗಳಿಲ್ಲದಂತಿರೆ |
ನೀತಿಮಾರ್ಗಕ್ಕೆಡರು ಬಾರದ |
ರೀತಿಯಿಂ ಪ್ರಜೆಗಳನು ಪರಮಪ್ರೀತಿಯಿಂ ಸಲಹಿ ||
ಪೂತರೇಣುಕಚರಣಸರಸೀ |
ಜಾತದಲಿ ನಿಜಮನವ ನಿಲಿಸಿ |
ದಾತಿರೆಯು ಬಲ್ಲಹನು ಕಂಡನು ಗುರುವ ಕನಸಿನಲಿ ||೯||

ಒಡನೆ ಸೈನ್ಯಸಮೇತನಾಗುತೆ |
ಪೊಡವಿಪತಿ ರೇಣುಕನ ಸನಿಹಕೆ |
ನಡೆದನತಿಭಕ್ತಿಯಲಿ ಗುರುಪದಯುಗಳವನು ಕಂಡು ||
ಪೊಡಮಡುತ್ತಲಿ ದೇವ ಪೊರೆ ಕೈ |
ಬಿಡದೆಯೆನ್ನನೆನುತ್ತಲರ್ಥಿಸಿ |
ಸಡಗರದೆ ನಿಜಗೃಹಕೆ ಕರೆದುಯ್ದನು ಗುರೂತ್ತಮನ ||೧೦||

ಮಿರುಮಿರುಪ ಮಣಿಖಚಿತಪೀಠಕೆ |
ಬರಿಸಿ ಗುರುವನು ಭಕ್ತಿಯಿಂದಲಿ |
ತರಿಸಿ ನೀಡಿದನರ್ಘ್ಯಪಾದ್ಯಾದಿಗಳ ಬಲವಂದು ||
ವಿರಚಿಸಿದ ವಿಧ್ಯುಕ್ತಪೂಜೆಯ |
ನರಸವಿಕ್ರಮ ಗುರುವರೇಣ್ಯನ |
ಚರಣಕೆರಗಿದನರಿಕೆಗೆಯ್ದನು ತನ್ನ ಮನದಿರವ ||೧೧||

ಗುರುವೆ ನಿನ್ನಯ ಚರಣಯುಗವಂ |
ಸ್ಮರಿಸಿ ಪವಡಿಸಲೊಂದಿರುಳ್ ನೀಂ |
ಪರಮಕೃಪೆಯಿಂದೆನಗೆ ಮೈದೋರುತಲಿ ಸೊಲ್ಲಿಸಿದ್ದೈ ||
ತರಳನಲಿ ನಿನಗೆರಕಮುಂಟಾ |
ಯ್ತರರೆ ನಿನ್ನಯ ಬರವನಂದಿಂ |
ನೆರೆ ನಿರೀಕ್ಷಿಸುತಿರ್ದೆ ಬಂದೈ ಸುದಿನಮಿದೆಯೆಂದು ||೧೨||

ನನ್ನ ಸುಕೃತವದಿಂದು ಪಣ್ತುದು |
ನನ್ನ ಜನ್ಮವು ಸಾರ್ಥಮಾದುದು |
ನನ್ನ ನಾಡುಂ ನನ್ನ ಬೀಡುಂ ಪೂತಮೆನಿಸಿದುವು ||
ನಿನ್ನ ದರ್ಶನಮೊಂದಿದುದರಿಂ |
ನನ್ನ ಮಂದಿ ಕೃತಾರ್ಥಮೆನಿಸಿ |
ತ್ತಿನ್ನೆಸಪ ಕಜ್ಜವನನುಗ್ರಹಿಸೆಂದ ವಿಕ್ರಮನು ||೧೩||

ಅಂಬಕದೆ ಹರ್ಷಾಶ್ರು ಮಿಗಿಲೆನೆ |
ತುಂಬಿರಲ್ ಗುರುಚರಣಭಕ್ತಿಯು |
ದಿಂಬುಗೊಂಡಿರೆ ಬಗೆಯೊಳರಿಯದೆ ಮಾಳ್ಪ ಕಜ್ಜವನು ||
ಕುಂಬಿಡುತ್ತಿಹ ವಿಕ್ರಮನ ಕಂ |
ಡೇಂ ಬರಿದೆ ಬೇವಸಮನೊಂದುವೆ |
ಪಂಬಲಿಸದಿರು ನಿನ್ನಭೀಪ್ಸಿತಸಿದ್ಧಿಯಹುದೆಂದ ||೧೪||

ಮೆಚ್ಚಿ ಗುರುವರನರಸಗೊರೆದನು |
ಸಚ್ಚರಿತನೀನಷ್ಟಮದಗಳ |
ನೆಚ್ಚರದೆ ಜಯಿಸಿರ್ಪೆ ವಿನಯಸುಗುಣವ ತಳೆದಿರ್ಪೆ ||
ಮುಚ್ಚುಮರೆಯಿಲ್ಲದೆಯೆ ಪೇಳುವೆ |
ಯುಚ್ಚಳಿಯದೆಸೆದಿಹುದು ಕಣ ಬಾಂ |
ಬೊಚ್ಚದಲೆಯನನುಗ್ರಹವು ನಿನ್ನೊಳಗೆ ತಿಳಿಯೆಂದ ||೧೫||

ಅರಿನೃಪತಿಕುಲಬಹುಭಯಂಕರ |
ಹರಚರಣಭಕ್ತಾಳಿಹಿತಕರ |
ಪರಮಶಿವಮತಸರಣಿಸಂತತರಮ್ಯಸಂಚಾರ ||
ಪರಸಿದೆನು ನಿನಗೀವೆ ನಾನ |
ಚ್ಚರಿಯ ಖಡ್ಗವಸಿದನು ಕೊಳ್ಳೈ |
ನರಪ ನೀನೆಳಸುವುದನೆಲ್ಲವ ನೀಡಲಾರ್ಪುದಿದು ||೧೬||

ವೈರಿಭೂಪರ ಕುಲವ ನಾಡೆ ವಿ |
ದಾರಿಸುವುದಿದು ಬಯಸಿದೂಟವ |
ಭೋರೆನಲು ತಂದೊದವಿಪುದು ಕಣ ವಿಕ್ರಮಾರ್ಕನೃಪ ||
ವಾರಿಧರವಾಹನನು ನಿನ್ನ ಗ |
ಭೀರತಾಶೂರತೆಗಳನು ನಿಜ |
ಚಾರಮುಖದಿಂದರಿದು ನಿನ್ನನು ನೋಡೆ ಬಯಸುವನು ||೧೭||

ಸುರರೊಡೆಯ ಮನ್ನಿಸುವನೆಂಬಾ |
ಹರಿಸದಿಂ ಚತುರಂಗಸೇನೆಯ |
ಬೆರಸಿ ನೀನೀಖಡ್ಗವನು ಪಿಡಿಯುತಲಿ ಸಂಭ್ರಮದೆ ||
ತೆರಳುತಮರಾವತಿಯ ಸೇರ್ದೊಡ |
ನಿರದೆ ಖಡ್ಗವಿದಂದು ತಾ ಪೆ |
ಣ್ಬರಿಜನಾಂಪುದು ಬೆಕ್ಕಸಂಗೊಳವೇಡ ನೀನದಕೆ ||೧೮||

ಮುನಿಯ ಶಾಪದ ಬಲದೆ ಯಕ್ಷಾಂ |
ಗನೆಯದೊರ್ವಳು ಧಾತ್ರಿಯಲಿ ಸಂ |
ಜನಿಯಿಸೀರೂಪಾಂತಳಂದಿಗೆ ಶಾಪಕಂತ ಕಣಾ ||
ಜನಪ ಮುಂದಪ್ಪುದನು ನೀಂ ತಿಳಿ |
ಯೆನುತ ಸೊಲ್ಲಿಸಿ ಗುರುವರೇಣ್ಯನು |
ಮನವೊಲಿದು ಪರಸಿದನು ವಿಕ್ರಮಚಕ್ರವರ್ತಿಯನು ||೧೯||

ಸಾಣೆಯಿಟ್ಟಾರತ್ನವೋಪರಿ |
ಕಾಣಿಪುದೊ ಪುಟಕಿಟ್ಟ ಕನಕಂ |
ಕ್ಷೋಣಿಯೊಳಗೇತೆರದೊಳೆಸೆವುದೊ ವಿಕ್ರಮಾರ್ಕನೃಪಂ ||
ರೇಣುಕಾಶೀರ್ವಚನದತ್ತ್ರಕೃ |
ಪಾಣದಿಂದಂತೆಸೆದು ಬಹುಕ |
ಲ್ಯಾಣಭಾಜನನೆನಿಸಿ ನುಡಿದನು ಗುರುವಿಗಭಿನಮಿಸಿ ||೨೦||

ತಂದೆ ನೀನೊಸೆದಿತ್ತ ಖಡ್ಗದೆ |
ಸಂದುದೈಹಿಕಸೌಖ್ಯವೆಲ್ಲವು |
ಮಂದಮತಿ ನಾನರಿಯೆನೈ ತತ್ತ್ವಾರ್ಥಸಾರವನು ||
ಇಂದು ನನಗದನರುಹಿ ನಿತ್ಯಾ |
ನಂದಪದವಿಯ ಸಾಧನವನಲ |
ವಿಂದನುಗ್ರಹಿಸೈ ಗುರೂತ್ತಮ ಎಂದನಿಳೆಯೊಡೆಯ ||೨೧||

ಬಿತ್ತರಿಸಿ ತತ್ತ್ವಮಸಿ ವಚನಾ |
ಯತ್ತವಿಮಲಾರ್ಥವನು ಸಲೆಯರು |
ಹುತ್ತಹಂಬ್ರಹ್ಮಾಸ್ಮಿಯೆಂಬುಕ್ತಿಯನು ಸುಕರಮೆನೆ ||
ಎತ್ತುತಜ್ಞಾನಾಬ್ಧಿಯಿಂ ಸ |
ರ್ವೋತ್ತಮನು ಶಿವನೆಂಬ ನಿಗಮೋ |
ಪಾತ್ತವಾಕ್ಯವ ನಲಿಯುತುಪದೇಶಿಸಿದ ಗುರುವರನು ||೨೨||

ಒದವಿದಾಪ್ರಜ್ಞಾನಮೇ ವಿಲ |
ಸದಮಲಬ್ರಹ್ಮಾಖ್ಯೆಯಾಂಪುದು |
ಚದುರರದಕೀಡಿಲ್ಲವೆಣೆಯುಂ ತೋರದೆಂಬರಲಾ ||
ಪದಪಿನಿದನರಿದಾತನೇ ಕೋ |
ವಿದನೆನಿಪ್ಪನು ನಿತ್ಯಸೌಖ್ಯ |
ಪ್ರದವ ನಲವಿಂ ಬ್ರಹ್ಮಬೋಧಾಮೃತವ ಸವಿಯೆಂದ ||೨೩||

ಗುರುವಿನುಪದೇಶವನು ಲಾಲಿಸು |
ತರಸ ಪುಲಕಿತಗಾತ್ರನಾಗು |
ತ್ತೆರಗಿದನು ಭಕ್ತ್ಯತಿಶಯದೊಳಾಚಾರ್ಯಪದಯುಗಕೆ ||
ಕರವ ಮುಗಿಯುತಲೊರೆದ ಪೊರೆದೈ |
ಪರಮಮಂಗಳಮೂರ್ತಿ ಪರಿಹೃತ |
ಶರಣಸಂದೋಹಾರ್ತಿ ದಶದಿಗ್ವ್ಯಾಪ್ತನಿಜಕೀರ್ತಿ ||೨೪||

ತಿಳಿಯದಜ್ಞಾನಾಂಧತಮದಲಿ |
ಮುಳುಗಿ ಸತಿಸುತಸದನಮೋಹದಿ |
ತೊಳಲಿ ಬಳಲುವ ಭಾಗ್ಯಹೀನರಿಗಾರು ನೀನುಳಿಯೆ ||
ಸುಲಭರೀಜಗದಲ್ಲಿ ನುತವ |
ತ್ಸಲ ನಿರಾಕುಲ ನಿತ್ಯಸುಖ ನಿ |
ರ್ಮಲ ನಿರೀಹ ನಿತಾಂತಕರುಣಾಶೀಲ ನೀನೆಯಲಾ ||೨೫||

ಪರಿಯಿಸಿದೆ ಮೋಹಾಂಧಕಾರವ |
ನರುಹಿದೈ ಶಿವತತ್ತ್ವಸಾರವ |
ಮೆರೆಯಿಸಿದೆಯೆನ್ನಲ್ಲಿ ಶಿವವಿದ್ಯಾವಿಚಾರವನು ||
ಗುರುವೆ ನೀನಲೆ ನೇತ ಭಕ್ತವಿ |
ಸರಕೆ ಕಾಮಿತದಾತ ಪರಮೇ |
ಶ್ವರಪದಾರ್ಚನಮುದಿತ ದುರಿತಧ್ವಾಂತದಿನಕಾಂತ ||೨೬||

ನಿನ್ನ ಚರಣಾಂಬುರುಹಭಕ್ತಿಯ |
ದಿನ್ನೆವರಮೆನಗಿರ್ಪ ತೆರದೊಳೆ |
ಮುನ್ನುಮಿರ್ಪಂತೊಲಿದು ಪರಸೈ ಪರಮಗುರುದೇವ ||
ಎನ್ನನಂತೇವಾಸಿವರ್ಗದೆ |
ಮನ್ನಿಸುತೆ ಕೈಗೊಂಡು ಸಲಿಸೈ |
ಬಿನ್ನಪಮನಿದನಖಿಲವಿನತೌದಾರ್ಯ ಗುರುವರ್ಯಾ ||೨೭||

ಇಂತು ಸಂಪ್ರಾರ್ಥಿಸಿದ ಭೂಮಿಪಾ |
ಕಾಂತನನು ತಲೆದಡಹಿ ರೇಣುಕ |
ಸಂತಸದಿ ಸಲಿಸುತಲಿ ಸಕಲಾಭೀಷ್ಟಸಂತತಿಯ ||
ಮುಂತಳರ್ದ*ನಂಬರದಿ ವಿಮಲೋ |
ದಂತನಾಕೊಲ್ಲಾಪುರಕ್ಕೈದಿ |
ಗಂತವಿಶ್ರಾಂತಾನುಪಮಯಶ ಗರಪುರೇಶವಶ ||೨೮||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಹದಿಮೂರನೆಯ ಸಂಧಿ.

ಸೂ|| ಮುರಿದು ಗೋರಕ್ಷಕನ ಗರ್ವವ |
ನರುಹುತವಗೆ ವಿವೇಕವನು ಗುರು |
ವರನು ಕೊಲ್ಲಾಪುರದೆ ಸಲಹಿದ ಸಜ್ಜನಾಳಿಯನು ||

ಬಗೆಗೊಳುತ್ತಿರಾರುಯೋಜನ |
ದಗಲಮೆನಿಸಿದ ಕೋಂಟೆಗೊಪ್ಪಿರೆ |
ಸೊಗಸುಬಾಗಿಲ್ವಾಡವಾನಾಲ್ದೆಸೆಯೊಳುಂ ಪೆಂಪಿಂ ||
ಜಗಜಗಿಸೆ ಪೊನ್ನೆಸಕದಾ ಕದ |
ಗಗನಚುಂಬಿಗಳಾದ ನೆಲೆಮಾ |
ಡುಗಳಿನೇನೆಸೆದತ್ತೊ ಕೊಲ್ಲಾಪುರವು ಸೊಗದಿರವು ||೧||

ಧನ ಕನಕ ನವರತ್ನ ವರವಾ |
ಹನ ವಿಭೂಷಣ ವಸನಮತಿಶಯು |
ಮೆನೆ ವಿರಾಜಿಸಲಬ್ಧಿನಂದನೆಗಿಂಬು ತಾನೆನಿಸಿ ||
ಅನುಪಮದ ಸೌಭಾಗ್ಯಕಾಗರ |
ಮೆನಿಸಿ ಭೋಗವಿಲಾಸಗಳು ಮನೆ |
ಮನೆಯೊಳುಂ ಮೆರೆದಿರಲು ಸೊಗಯಿಪ ಪುರವನೇವೊರೆವೆ ||೨||

ಪುರವನದ ಕೌಟಿಲ್ಯಸಿದ್ಧನು |
ದುರುಳ ಗೋರಕ್ಷಕಸಮಾಹ್ವಯು |
ನರಸುಗೆಯ್ವನು ನೀತಿಬಾಹಿರನತಿಮದೋದ್ಧತನು ||
ಪರಿಚರರ ಪಲಬರನು ಮಾಯಾ |
ಪರಿಣತರನೊಡಗೊಂಡು ಧರ್ಮವ |
ಪರಿಗಣಿಸದಾಶ್ರಿತನರೇಂದ್ರರ ಕಟ್ಟೆ ಕಾಡುವನು ||೩||

ಇಲ್ಲ ತನಗೀಡಿಳೆಯೊಳೆಂದಾ |
ಖುಲ್ಲ ಧನಿಕರ ಧನವನೆಲ್ಲವ |
ಕೊಳ್ಳಿಗೈವನು ಶಕ್ತಿಹೀನರನೊಕ್ಕಲಿಕ್ಕುವನು ||
ಬಲ್ಲಬುಧರನು ಬವಣೆಗೊಳಿಪನು |
ತಲ್ಲಣಂಗೊಳಿಸುವನನಾಥರ |
ಹೊಲ್ಲೆ ಹಕ್ಕವಗೊತ್ತು ಕಾಳ್ಗಿಯ್ತಕ್ಕೆ ತಾ ಬಿತ್ತು ||೪||

ಪೌರರೈಸಿರಿಯೆಲ್ಲವನು ತಾ |
ಸೂರೆಗೊಳುತಲಿ ಬೆರತು ಬೀಗುವ |
ಧಾರಿಣೀಪತಿ ಕುರುಡುಕವಡೆಯನಾದೊಡಂ ಕುಡನು ||
ಚಾರುಧರ್ಮವನಾ ವನಾಂತಕೆ |
ಪಾರಿಸಿಹನೇವೊರೆವೆ ದುಷ್ಟಾ |
ಚಾರಪರನನು ನಾಸ್ತಿಕನ ನೃಪನೀತಿಬಾಹಿರನ ||೫||

ಗೋಚರಿಸಲೆತ್ತಾನುಮರಿಯದ |
ಯಾಚಕನು ಸೆಳೆತರಿಸುತವನನು |
ನೀಚನಿವ ಕೈಕಾಲ ಕಡಿಯಿಸಿ ಕೊಲುವನಾಕ್ಷಣದೆ ||
ವಾಚಿಸಲಿಕಳವಲ್ಲದಾಪೈ |
ಶಾಚಕೃತ್ಯವನಕಟ ನಿತ್ಯಮು |
ಮಾಚರಿಪನಾದುರುಳ ಗೋರಕ್ಷಕನು ದುರ್ನಯನು ||೬||

ತಡೆಯದೆಯೆ ಪಡಿಯಾಡುವರನಾ |
ಪೊಡವಿಪನು ಪಿಡಿತರಿಸಿ ಶೂಲ |
ಕ್ಕಡರಿಸುವನವರಾಪ್ತವರ್ಗವನಿರಿದು ಕೊಲಿಸುವನು ||
ನುಡಿಯದದರಿಂ ಮಂದಿ ತಮ್ಮೊಳೆ |
ಮಿಡುಕುತಿರ್ಪುದು ಪಗಲುಮಿರುಳುಂ |
ಕಿಡುಕನಾಳ್ತೆಯ ಪರಿಯನೇವಣ್ಣಿಸುವುದಕಟಕಟಾ ||೭||

ಅರಿಯುತೀಗೋರಕ್ಷಕನ ದು |
ಶ್ಚರಿತವನು ಗುರುವರ್ಯನಾಗಳೆ |
ಪರಮಕರುಣಾಪೂರಿತಾಂತಃಕರಣನಾಗುತಲಿ ||
ಮುರಿದು ತನ್ನೃಪಹತಕಗರ್ವವ |
ಪೊರೆಯುವೇಳ್ಕುಂ ಧರೆಯುನೆನುತಲಿ |
ಭರದೆ ಭಿಕ್ಷುಕರೂಪವಾಂತಾಪೊಳಲೊಳೊಪ್ಪಿದನು ||೮||

ಖಳನ ಶಿಷ್ಯರು ಕುಟಿಲಸಿದ್ಧರು |
ಕೆಲರು ಮಾಯಾಬಲದೆ ಕಟ್ಟಿದ |
ಪುಲಿಗಳನು ತಾವೇರಿ ಚರಿಸುತ್ತಿರ್ದರಾಪುರದೆ ||
ಕೆಲರು ಕೇಸರಿಗಳನು ತಾವ್ ಬಸ |
ಗೊಳಿಸುತವರಿಂದುಳಿಸಿ ಪೊಲಗಳ |
ಬೆಳೆದು ಬೆಳಸನು ಬಾಳುತಿರ್ದರು ಕೃಷಿಕವೃತ್ತಿಯಲಿ ||೯||

ನಿರುಕಿಸುತೆ ಬಿಸವಂದವನು ಗುರು |
ವರನು ನಗರದ ಬೀದಿಯೊಳಗೈ |
ತರುತಿರಲು ಖಳರೈದೆ ಕಂಡರು ಕುಟಿಲಸಿದ್ಧರು ತಾವ್ ||
ಅರಿಯದೀತನ ವೈಮೆಯನು ಮುಂ |
ಬರಿದು ನಿಜವಿದ್ಯೆಯನು ತೋರಿದು |
ಬರಿದೆ ಬೇವಸಗೊಂಡು ಬೆಕ್ಕಸಕಿಕ್ಕೆಯೆನಿಸಿದರು ||೧೦||

ಕೆಲಬಲವನವಲೋಕಿಸದೆ ಸಲೆ |
ತಲೆಯ ಬಾಗಿಸಿ ಪೋಗುತಿಹಗಾ |
ಖಳರು ಗತಿರೋಧವನು ಮಾಡುತೆ ಮಂತ್ರತಂತ್ರಗಳಿಂ ||
ಮಲೆತು ಪುಚ್ಛಳಿಯೆಸಗಲೆಳಸಲು |
ಘಳಿಲನಲ್ಲಿಯೆ ನಿಂದ ಗುರುವರ |
ಬಳಿಯುಮುನಿಬರು ಚಲಿಸಲಾಗದೆ ಧರಣಿಗುರುಳಿದರು ||೧೧||

ಪಡಿಯೆಸಗಲಾರದೆಯೆ ಬೇಗೆಯ |
ತಡೆಯಲುಂ ತಾಮಾರದೆಯೆ ಪ |
ಲ್ಗಿಡಿದು ಪೊಡವಿಯೊಳುರುಳ್ದು* ಕಣ್ಗಳ ಬಿಡುವ ಖುಲ್ಲರನು ||
ಕಡೆಗಣಿಸಿ ರೇಣುಕನು ಮುಂದಕೆ |
ನಡೆದದಾರುಂ ನೋಡದಂತಿರೆ |
ಜಡನ ಗೋರಕ್ಷಕನ ಭವನದ ಬಳಿಯನೈದಿದನು ||೧೨||

ಸೊಗಯಿಸುತ್ತಿಹ ರಾಣಿವಾಸದೆ |
ಬಗೆಗೊಳಿಪ ರಾಯಂಚೆದುಪ್ಪುಳ |
ಸೊಗಸುಪಾಸಿನೊಳೈದೆ ಪವಡಿಸುತೆಡಬಲಂಗಳಲಾ ||
ಮೃಗವಿಲೋಚನೆಯರ್ಕಳೊಪ್ಪಿರೆ |
ಸೊಗದ ಕಡಲೊಳಗಾಳ್ದು ತೇಲುತೆ |
ವಿಗಡ ಗೋರಕ್ಷಕನು ಬಿಹರಿಸುತಿರ್ದನೇವೊರೆವೇ ||೧೩||

ಪಿರಿಯಲಕ್ಕಾದೇವಿಯೊಂದೆಡೆ |
ಕಿರಿಯಲಕ್ಕಾದೇವಿಯೊಂದೆಡೆ |
ಪರಿಚರಿಸಿ ಬಿಜ್ಜಣಿಗೆಯಿಂ ಮೆಲ್ಲೆಲರನಿಕ್ಕುತಿರೆ ||
ಸರಸಿಜಾಸ್ತ್ರನ ಲೀಲೆಯಲಿ ಮೈ |
ಮರೆದು ಮಲಗಿರ್ದಾಮದಾಂಧನ |
ಗುರುವರೇಣ್ಯನು ಕೂಗಿ ಕರೆದನು ಬಿಕ್ಕೆನೀಡೆನುತೆ ||೧೪||

ಮಾರನುತ್ಸವದಲಿ ಮುಳುಂಗಿದ |
ಧಾರಿಣೀಶನ ಕಿವಿಯನೀ ದೀ |
ನಾರವವು ನಾರಾಚದಿಂದಿರಿದಂತೆ ನೋಯಿಸೆ ತಾಂ ||
ಆರಿವನು ಲಕ್ಕಿಸದೆ ಯೆನ್ನೊಳೆ |
ಚೀರುತಿರ್ಪನು ಭಿಕ್ಷೆಗೋಸುಗ |
ಪಾರಧೈರ್ಯನಲೇ ಮದಾಜ್ಞೆಯ ಮೀರಿ ಬಂದಿಹನು ||೧೫||

ದ್ವಾರಪಾಲಕರರಿಯದಾದರೆ |
ಪೌರರೆಲ್ಲರುಮುಸಿಕನಿರ್ದರೆ |
ಪೋರನಿವನೆಂತೈದಿದನು ನಮ್ಮಂತವುರದೆಡೆಯಾ ||
ಸೈರಿಸಲಿಕಳವಲ್ಲವೆನುತೆ ಕ |
ಠೋರ ತನ್ನಂಗನೆಯೊಳೊರೆದನು |
ನೀರೆ ನೀನೀ ಖಡ್ಗದಿಂ ತತ್ಕರವ ಕಡಿಯೆಂದು ||೧೬||

ಕೂಗುತಿರ್ಪಾ ಭಾಗ್ಯಹೀನಗೆ |
ಪೋಗಿ ನೀನೀಭಿಕ್ಷೆಯನು ನೀ |
ಡೀಗಳೆಂದೆನೆ ಕಿರಿಯಲಕ್ಕಾದೇವಿಯದ ಕೇಳಿ ||
ಬಾಗಿ ತಲೆಯನು ಭಕ್ತಿಯಿಂದಲಿ |
ಕೈಗಳನು ಮುಗಿಯುತ್ತೆ ನುಡಿದಳಿ |
ದಾಗದಾಗದು ಬಗೆಯಬೇಡನುಚಿತವ ಮನದೆರೆಯಾ ||೧೭||

ಮನೆಗೆ ಸಾರ್ತಂದತಿಥಿವರ್ಗವ |
ನನುವಿನುಪಚರಿಸುವುದೆ ಧರ್ಮವು |
ಮನೆಯೊಡೆಯಗೆಂದೊರೆವುವಲೆ ನಿಗಮಂಗಳಿದನರಿಯಾ ||
ಜನಿಯಿದಲ್ತೆ ಪರಾರ್ಥಮಿನಿಯಾ |
ಮುನಿಯದಿರು ಬಗೆಬಂದೊಡೀವುದು |
ಸನುಮತವು ಪೆರತೆಣಿಸೆ ಬಪ್ಪುದು ಘೋರಪಾತಕವು ||೧೮||

ಐದಿದತಿಥಿ ನಿರಾಶನಾಗುತೆ |
ಪೋದೊಡದರಿಂ ಪಾತಕವು ಗೃಹ |
ಮೇದಿಯನು ತಾನಾವರಿಪ್ಪುದೆನುತ್ತೆ ಸೊಲ್ಲಿಪುದಾ ||
ವೇದತತಿ ಭಿಕ್ಷುಕನು ಪಸಿದಿಂ |
ದೈದೆ ಯಾಚಿಸುತಿಹನು ಗಡ ಪರ |
ಮಾದರದೆ ಕುಡು ಕುಡದೊಡಿಲ್ಲೆಂದೊರೆದು ಕಳುಹೊಡೆಯಾ ||೧೯||

ಅಂತೆಸಗದತಿಥಿಯನು ಮುಳಿಸಿಂ |
ದಂತಕಾಲಯುದತಿಥಿಯನು ಭೂ |
ಕಾಂತ ಗೈವುದು ತರವೆ ಭಾವಿಸು ಪಾತಕಾಗ್ನಿಯದು ||
ಎಂತುಮೆಮ್ಮಯ ಕುಲವ ಸುಡುವುದು |
ಕಂತುಹರ ಪರಿಪಾಲಿಸಲಿ ನಿ |
ನ್ನಂತರಂಗಕೆ ತಿಳುಹಿ ಮಂಗಳಮೆಸಗಲೆನ್ನೊಡೆಯಾ ||೨೦||

ಒರ್ವನೆಸಗಿದ ಪಾಪದಾ ಫಲ |
ಮುರ್ವಿಯಲಿ ತಾ ತಾಗುವುದು ಪೆರ |
ತೊರ್ವನನು ದಿಟವಿದುವೆ ನಾಣ್ನುಡಿ ನಿನ್ನ ದುಷ್ಕಾರ್ಯಂ ||
ಪರ್ವಿ ನಿನ್ನನು ನಿನತೆನಿಪ್ಪಾ |
ಸರ್ವಮಂ ಸುಟ್ಟುರಿಸುವುದು ತಿಳಿ |
ನಿರ್ವಿಭವನಾಗದಿರು ಮನ್ನಿಸು ಮಾತ ಮನದನ್ನಾ ||೨೧||

ಎಂದು ಲಕ್ಕಾದೇವಿಯೊರೆಯಲು |
ಮಂದಮತಿ ಗೋರಕ್ಷಕನು ಮುಳಿ |
ದೆಂದನೆಲೆಗೇ ಖುಲ್ಲೆ ನಿಲ್ಲಿಸು ಸೊಲ್ಲ ತರವಲ್ಲ ||
ಸಂದ ಹದಿಬದೆಯರು ನಿಜೇಶಂ |
ಗೆಂದುಮಾಡರು ಪಡಿಯ ನೀನದ |
ರಿಂದೆ ನನ್ನಾಣತಿಯನೆಸಗುವುದುಚಿತವೀಗೆಂದ ||೨೨||

ನೀತಿರಹಿತವೊ ನೀತಿಸಹಿತವೊ |
ಪಾತಕವೊ ಮೇಣ್ ಪುಣ್ಯವೋ ನೀ |
ನೇತಕದ ಪರಿಗಣಿಪೆ ನಾನಿರೆ ಫಲವನುಂಬವನು ||
ಘಾತಿಸವನ ಕರಾಗ್ರವನು ನಡೆ |
ಕಾತರಿಸದಿಂ ತೆರಳು ತೆರಳೆನ |
ಲಾತಳೋದರಿ ಕೊಂಡು ಖಡುಗವನಳುತೆ ತೆರಳಿದಳು ||೨೩||

ಬರುತೆ ಮನದಲಿ ನೆನೆದಳಗಜಾ |
ವರನ ಚರಣವ ತನ್ನವಲ್ಲಭ |
ನರಿಯುಮೆಯು ಪರಿಹರಿಪ ಬಗೆಯನು ಕಾಣದಳಲುತಲಿ ||
ಸೆರಗ ಸೆರ್ಕಿ ಕೃಪಾಣವನು ನಿಜ |
ಕರದೆ ಪಿಡಿದು ಪುರಂಧ್ರಿ ರೇಣುಕ |
ಗುರುವರನ ಬಳಿಗೈದಿ ಕಂಡಳು ದೀಪ್ತಿಯತಿಶಯವ ||೨೪||

ಹರಹರಾ ನಾನಿನ್ನೆವರವಿಾ |
ಪರಿಯ ತೇಜಃಪುಂಜನನು ಕಂ |
ಡರಿಯೆನಸ್ಮದನುಗ್ರಹಾರ್ಥಮುಮೇಶನೀಯೆಡೆಗೆ ||
ಭರದೆ ಬಂದಿರವೇಳ್ಕುಮಾನುಪ |
ಚರಿಸದೀತನ ಕರವ ಕಡಿಯಲು |
ನರಕಕಿಳಿವೆನು ಮಾಣೆ ಪತಿವಿದ್ರೋಹವಾಗುವುದು ||೨೫||

ಆವ ಪಾಪದ ಫಲವೊ ನನಗಿಂ |
ದೀವಗೆಯ ದುರವಸ್ಥೆ ಸವನಿಸಿ |
ತೀವೆನಾನಕಟಕಟ ಶಿವನೇ ಗತಿಯೆನುತೆ ಸುಯ್ದು ||
ಆ ವಧೂಮಣಿ ಲೋಕಗುರುವಿನ |
ಪಾವನಾಂಘ್ರಿಗೆ ನಮಿಸಿ ದೇವಾ |
ಕಾವುದೆಂದಳು ಭಕ್ತಿಭರಿತಸ್ವಾಂತೆ ನೃಪಕಾಂತೆ ||೨೬||

ಮನೆಗೆ ಸಾರ್ತಂದತಿಥಿ ಶಿವಸಮ |
ನೆನುತೆ ನುಡಿವಾಪಿರಿಯರುಕ್ತಿಯ |
ನೆನತು ಪತಿ ಲಕ್ಕಿಸದೆ ನನ್ನರಿಕೆಯ ವಿಭಾವಿಸದೆ ||
ಮುನಿದು ನಿನ್ನಯ ಕರಕೆ ಖಡ್ಗದ |
ಮೊನೆಯ ಸಾರ್ಚುವುದೆಂದು ಬೆಸಸಿಹ |
ನಿನಿಯನಾಜ್ಞೆಯ ಮಾಣೆ ಪಾಪವು ಮಾಡೆ ಪಾತಕವು ||೨೭||

ಈವೆನೆದರಿಂ ಖಡ್ಗಧಾರೆಯ |
ದೇವ ಕೊಳ್ಳೈ ಸುಕೃತದುಷ್ಕೃತ |
ಮಾವುದುಂ ನನಗಿಲ್ಲ ಪತಿಯಾಣತಿಯನೊಡರಿಸುವೆ ||
ಈ ವಿಲಕ್ಷಣಭಿಕ್ಷೆಗುಡುವುದು |
ಬೂವಿಗಶ್ರುತದೃಷ್ಟಪೂರ್ವವು |
ದೈವವಿಲಸಿತಕೇನ ಮಾಡುವೆನೆಂದಳಾಸಾಧ್ವಿ ||೨೮||

ಕೇಳಿ ತಲೆದೂಗಿದನು ರೇಣುಕ |
ಬಾಲೆ ನೀನೀವುದನು ಕೊಳ್ವೆನು |
ತಾಳಲಾರೆನು ಪಸಿವನೆನುತಲಿ ನೀಡೆ ಹಸ್ತವನು ||
ಲೋಲಲೋಚನೆಯಂಜಿ ನಡುಗುತೆ |
ಫಾಲನೇತ್ರನ ನೆನೆದು ಮನದೊಳು |
ಬಾಳನಿಕ್ಕಿದಳಹಹ ಗುರುವರ್ಯನ ಕರಾಂಬುಜದೆ ||೨೯||

ಇಂದುವದನೆಯ ಮನದ ದಾರ್ಢ್ಯವ |
ನಂದು ಕಂಡನು ಗುರುವರನು ಹಾ |
ಯೆಂದು ನಿಟಿಲಾಂಬಕದೆ ನೋಡಿದನೊಡನೆಯುರಿ ಮಸಗೇ ||
ಬೆಂದು ಖಡ್ಗವು ಕರಗೆ ಪರಮಾ |
ನಂದದಿಂದಾಲೋಹರಸವನು |
ಪೊಂದಿ ಗುರುವೀಂಟಿದ ಮಹಾತ್ಮರ ಲೀಲೆ ಚಿತ್ರವಲಾ ||೩೦||

ಘುಡುಘುಡಿಸುತಾರಸವು ಭರದಲಿ |
ಖಡುಗದಾಕಾರವನು ತಳೆಯುತೆ |
ಸಿಡಿಲ ತೆರದಿಂ ಪಾಯ್ದು ಗೋರಕ್ಷಕನ ದುರ್ಮನನಾ ||
ಪೊಡೆಯೊಳಾಯ್ಕನೆ ನಾಂಟಿದತ್ತಾ |
ಜಡಮತಿಯು ತಲ್ಲಣಿಸುತಾಗಳೆ |
ಕೆಡೆದು ನೆಲದುರುಳಿದನು ವಜ್ರಾಹತಗಿರೀಂದ್ರನೊಲು ||೩೧||



ಶ್ರೀ ರೇಣುಕಾಚಾರ್ಯರು ಗೋರಕ್ಷನಾಥನ ಗರ್ವ
ವನ್ನು ನಾಶಗೊಳಿಸುವುದು.

ಏನೊರೆವೆನಾಖಳನ ದುಃಖ |
ಧ್ಯಾನಮಂ ಕೇಳ್ದವನ ನಂಟರು |
ದೀನಮನರಾಗುತಲಿ ಬಳಿಸಾರ್ದುಪಚರಿಸಲಾಗ ||
ಹೀನಭಾಗ್ಯನು ಕರೆದು ತನ್ನಯ |
ಮಾನಿನಿಯನಿಂತೊರೆದನೆಲೆಸತಿ |
ನೀನೊರೆದ ನುಡಿಯಾಲಿಸದೆ ಕೇಡಿಂಗೆ ಗುರಿಯಾದೇ ||೩೨||

ಉಳಿಯದೆನ್ನಯ ಪರಣವೀಗಳ್ |
ಕಳೆದುದೆನ್ನಯ ಸತ್ವವೆಲ್ಲವು |
ತಿಳಿಯದಾದೆನು ಮುಕ್ಕತನದಿಂ ದುಕ್ಕಕೀಡಾದೆ ||
ನಳಿನಮುಖಿ ನೀಂ ಸಾರಿ ನಮ್ಮಯ |
ಕುಲದ ಮಾತೆಯ ಸಿಂಧುಜಾತೆಯ |
ನೊಲಿಯಿಸಿಂದಿನ ಸಂಕಟವ ನೀಗಾಡಿಸೆಂದೊರೆದ ||೩೩||

ಅಳಲುತಲಿ ರಾಜ್ಞೀಶಿರೋಮಣಿ |
ತಳರ್ದು* ಮಜ್ಜನವೆಸಗಿ ರಸವ |
ತ್ಫಳಸುಮಂಗಳ ಮಂಗಳದ್ರವ್ಯಂಗಳನು ಕೊಂಡು ||
ಜಲರುಹಾಲಯೆಯಾಲಯವ ಸಾ |
ರ್ದಲಸದತಿಭಕ್ತಿಯಲಿ ಪೂಜಿಸಿ |
ಸಲಿಸು ಸೌಮಾಂಗಲ್ಯಭಾಗ್ಯವನೆಂದು ಬೇಡಿದಳು ||೩೪||

ತಾಯೆ ದೀನಜನಾಶ್ರಯೇ ಸುರ |
ಗೇಯೆ ಮಾಯೇ ಮಧುರಿಪುಪ್ರಿಯೆ |
ಕಾಯೆ ಮತ್ಪತಿ ನಿನ್ನ ಭಕ್ತನಲಾ ಮದಾಂಧತೆಯಿಂ ||
ದಾಯದಪ್ಪಿದನಳಲುತಿರ್ಪನು |
ಪಾಯವೇನುಂ ತೋರದೌ ದೀ |
ರ್ಘಾಯುವಂ ನೀನೆಸಗಿ ಪಾಲಿಪುದವನ ಪದ್ಮಭವೇ ||೩೫||

ಎನ್ನ ಪತಿಯುಪರಾಧವೆಲ್ಲವ |
ಮನ್ನಿಸೌ ರತ್ನಾಕರೇಂದ್ರನ |
ಕನ್ನೆ ನೀಂ ಕೈಬಿಡುವೊಡೆಮ್ಮಯ ಕುಲಕೆ ಹತಿಯಕ್ಕುಂ ||
ನಿನ್ನವನ ನೀ ಸಲಹದಿರೆ ಪೇ |
ಳಿನ್ನದಾರೌ ಪೊರೆವರೆಲೆ ಮಹಿ |
ಮೋನ್ನತೆಯೆ ವ್ಯೆದೋರೆನುತ್ತಲಿ ಮಡದಿ ಬೇಡಿದಳು ||೩೬||

ಭಕುತೆಯಾ ಮೊರೆಯಾಲಿಸುತೆ ಮಾ |
ಲಕುಮಿ ವ್ಯೆದೋರಿದಳು ನುಡಿದಳು |
ಸಕಲಕಾಮಿತವೊಂದು ಮಗಳೇ ಬಲ್ಲೆನೆಲ್ಲವನು ||
ವಿಕಲಮತಿ ನಿನ್ನಿನಿಯನಾ ರೇ |
ಣುಕಗಣೇಶನ ಪರಿಭವಿಸಿ ಪಾ |
ತಕಕೆ ಸೆರಗೊಡ್ಡಿದನು ಫಲವದಕಿಂತು ಸಮನಿಸಿತು ||೩೭||

ಸಂಕಟವನುಳಿ ಬಾರ ಪೋಗುವ |
ಶಂಕರನ ಕಿಂಕರನ ಬಳಿಗಾ |
ತಂಕವನು ಪರಿಹರಿಪನಾತನೆನುತ್ತೆ ಸಂತವಿಸಿ ||
ಪಂಕಜಾಲಯೆ ಜನಪಸತಿಯನು |
ತಾಂ ಕರೆದು ಕೊಂಡುಯ್ದು ಗುರುವಕ |
ಳಂಕಪದದೊಳ್ ಕೆಡಹಿ ಕೈಮುಗಿದೆಂದಳಾತನೊಳು ||೩೮||

ಜೀವಿಕೋಟಿಯನುದ್ಧರಿಸಲೆಂ |
ದೇ ವಸುಧೆಯಲಿ ಸಂಚರಿಪ ಗುರು |
ದೇವ ಗೋರಕ್ಷಕನು ದುರಹಂಕಾರಿ ದುರ್ನಯನು ||
ಈ ವಧೂಮಣಿಯಾತನಂಗನೆ |
ಪಾವನೆಯು ಹದಿಬದೆ ವಿನೀತೆಯು |
ಕಾವುದೈ ನೀನಿವಳ ಮಾಂಗಲ್ಯವನು ಕರುಣಾಳು ||೩೯||

ಮರೆತು ನಗುರೋರಧಿಕಮೆಂಬಾ |
ಪರಮವಚನವ ಕಾಡಿ ಸುಜನರ |
ನಿರದೆ ಬಡವರ ಗೋಳಿಡಿಸಿ ಚಲದಿಂದೆ ವೈಮರೆತು ||
ಪರಿಪರಿಯ ಕಾಳ್ಗಿಯ್ತುಕೆಡೆಗೊ |
ಟ್ಟರಸುತನವೆಸಗಿದ ಕಳಂಕಿಗೆ |
ಕರುಣಿಸೈ ಕಲ್ಯಾಣಸಾಗರ ಎಂದಳಾಲಕುಮಿ ||೪೦||

ಕಮಲೆಯಿಂತುಸಿರ್ದು*ದನು ಲಾಲಿಸು |
ತಮಿತದಯನಾರೇಣುಕನು ಭೂ |
ರಮಣಗೋರಕ್ಷಕನ ಪೊಡೆಯೊಳು ನಾಂಟಿದಸಿಯನು ತಾಂ ||
ವಿಮಲಹಸ್ತದೆ ಸೋಂಕಲದು ನೆಲ |
ಕಮಮ ಬಿಳ್ದುದು ಬಳಿಯಮೆದ್ದಾ |
ಕ್ಷಮೆಯೊಡೆಯ ಮರುವೈಯ ತಾಳ್ದಂತೆಸೆದು ಸೊಲ್ಲಿಸಿದ ||೪೧||

ವಿಜಯಿಸೈ ಗುರುಸಾರ್ವಭೌಮಾ |
ವಿಜಯಿಸೈ ಕಾರುಣ್ಯಧಾಮಾ |
ವಿಜಯಿಸೈ ಶರಣಾಗತಾವಳಿಪಾಲನಪ್ರೇಮಾ ||
ವಿಜಯಿಸೈ ವಿಖ್ಯಾತನಾಮಾ |
ವಿಜಯಿಸೈ ಭಕ್ತಾಬ್ಧಿಸೋಮಾ |
ವಿಜಯಿಸೈ ಲೋಕಾಭಿರಾಮ ವಿಶೇಷತರಮಹಿಮಾ ||೪೨||

ಪಲವು ಕಾಳ್ಗಿಯ್ತುಗಳನೆಸಗಿದೆ |
ನೆಲೆಗುರೂತ್ತಮ ತವಸಿಗಳನಾ |
ನಳಲಿಸಿದೆ ಸಜ್ಜನರ ಕಾಡಿದೆ ಮೆರೆದೆ ಸಿರಿಮದದೆ ||
ನೆಲನೊಳೆನಗಿದಿರಿಲ್ಲಮೆಂದೇ |
ತಿಳಿದೆ ನಿನ್ನನು ಪಳಿದೆ ನೀತಿಯ |
ನುಳಿದೆ ಪರಮುದಯಾಳು ನಿನ್ನಿಂ ಧನ್ಯನಿಂದಾದೆ ||೪೩||

ಪಾಪರಾಶಿಯು ಪರಿಹರಿಸಿ ಚಿ |
ದ್ರೂಪ ನೀಂ ಪೊರೆ ಮಾನಸದ ಸಂ |
ತಾಪಮಂ ವಾರಿಸುತೆ ಸನ್ಮತಿಯಿಾವುದೈ ನನಗೆ ||
ಶಾಪವಿಾಯದೆ ಪರಸುತಲಿ ನಿ |
ನ್ನೀಪವಿತ್ರಾಂಘ್ರಿದ್ವಯವು ದುರ |
ವಾಪವಾಗದವೋಲನುಗ್ರಹಿಸಯ್ಯ ಗುರುವರ್ಯ ||೪೪||

ಒರೆಯುತೀಪರಿ ಪದತಲಕೆ ಮ |
ತ್ತೆರಗಿದಾಗೋರಕ್ಷಕನ ಗುರು |
ವರನು ತಲೆದಡಹುತ್ತೆ ನುಡಿದನು ಕುವರ ಸಿರಿ ನಿನ್ನಂ ||
ಪರಮಕರುಣಾಪೂರಿತಾಂತಃ |
ಕರಣೆಯಾಗುತೆ ಪೊರೆವಳೆಂದುರೆ |
ಬೆರತು ಬೀಗಲುಬೇಡ ದುಷ್ಕೃತಿಯೆಸಗವೇಡೆಂದುಂ ||೪೫||

ಭಾವಿಸೈ ನಿನ್ನಂತೆ ಲೋಕದ |
ಜೀವಿಗಳನೆಲ್ಲವನು ಸತ್ಯವ |
ನಾವಗಂ ಮನ್ನಿಸು ಗುರುದ್ವಿಜದೇವವರ್ಗವ ನೀಂ ||
ತೀವಿದಾ ಭಕ್ತಿಯುಲಿ ಮಿಗೆ ಸಂ |
ಭಾವಿಪುದು ನೈಜಪ್ರಜಾಳಿಯ |
ಸಾವಧಾನಮನಸ್ಕನಾಗುತೆ ಸಲಹುವುದು ಸತತಂ ||೪೬||

ಪಡೆದು ಪೆಸರನು ಧರ್ಮಮಾರ್ಗದೆ |
ನಡೆದು ಕುಟಿಲರ ತೊರೆದು ಸುಜನರ |
ಗಡಣದೊಡವೆರೆಯುತಲಿ ಪಂಚೇಂದ್ರಿಯಗಳನು ಕಟ್ಟಿ ||
ಎಡೆಗೆ ಸಾರ್ತಂದತಿಥಿವರ್ಗವ |
ಸಡಗರದೊಳುಪಚರಿಸಿ ಪರಶಿವ |
ನಡಿಯ ಜಾನಿಸೆ ಪರದ ಸದ್ಗತಿ ನಿನಗಧೀನವಲಾ ||೪೭||

ಸ್ಥಿರವದಲ್ಲವು ತನುವು ತಿಳಿಯೈ |
ಸಿರಿಯೆಲರಿಗೊಡ್ಡಿರ್ದ ದೀಪದ |
ತೆರದೆ ಚಂಚಲ ಭೋಗವುಂ ನೀರ್ಗುಳ್ಳೆವೋಲ್ ಕ್ಷಣಿಕಂ ||
ನಿರುತವಿರ್ದಳು ಮೃತ್ಯು ಪೆಗಲೊಳೆ |
ಪರಧನಾದಿಗಳಾಸೆಯುಳಿಯುತೆ |
ಚಿರವಿರೈ ನೀನಿಹಪರಂಗಳ ಸೊಗಕೆ ನೆಲೆಯಾಗಿ ||೪೮||

ತುರುಗಳೊಳಗಾ ಕಾಮದುಘೆ ಮೇಣ್ |
ತರುಗಳಲಿ ಮಂದಾರವೊಪ್ಪುವ |
ಗಿರಿಗಳಲಿ ಹೇಮಾದ್ರಿಯೇಪರಿ ಮೇಲ್ಮೆವಡೆದಿಹುವೋ ||
ಸುರಸಮೂಹದೊಳಂತು ಶಿವನೇ |
ಪರಮದೈವವು ನಂಬೆನುತ್ತಲಿ |
ಪರಮಶಿವತತ್ತ್ವೋಪದೇಶವನಿತ್ತ ಗುರುವರನು ||೪೯||

ಬಳಿಯವಾಗೋರಕ್ಷಕನು ನಿಜ |
ಲಲನೆಯುರನೊಡವೆರೆದು ಗುರುಪದ |
ಜಲಜಕಭಿನಮಿಸುತಿರೆ ಗಗನದೆ ನಿರ್ಜರಾವಳಿ ತಾಂ ||
ಭಳಿರೆ ಎನುತಿರೆ ದೇವದುಂದುಭಿ |
ಮೊಳಗೆ ಗರಪುರದೊಡೆಯನೊಲವಿಂ |
ತಳರ್ದ* ಶಿವಸುಖಜಲಧಿಜೈವಾತೃಕನು ರೇಣುಕನು ||೫೦||

ಶ್ರೀಜಗದ್ಗುರು ರೇಣುಕಾಚಾರ್ಯ್ಯಃ ಪ್ರಸೀದತು.

ಹದಿನಾಲ್ಕನೆಯ ಸಂಧಿ.

ಸೂ|| ಮುರಿದು ಖರ್ಪರದರ್ಪವನು ಪ |
ನ್ನೆರಡುಸಾಸಿರ ಕನ್ನೆಯರ್ಕಳ |
ಸೆರೆಯ ಕಳಚಿದು ರೇಣುಕನು ಬಿಜ್ಜಳನ ಪರಸಿದನು ||

ಎಸೆವ ಮಂಗಳವೇಡೆಯೊಳಗಿ |
ರ್ಪಸಿಯುಳೊರ್ವಳ್ ಶುಭಗುಣಾವಳಿ |
ಲಸಿತೆ ರೇವಣಪದಸಮರ್ಚನಮುದಿತೆ ಸುವಿನೀತೆ ||
ಬಿಸಜಮುಖಿ ಮಾಯಾಭಿಧಾನೆಯು |
ಪೆಸರ್ವ*ಡೆದು ಮೆರೆದಿರ್ದಳದನೇ |
ನುಸಿರ್ವೆ* ಮಕ್ಕಳ ಬಯಸಿ ನೋನುತ್ತಿರ್ದಳಾಕಾಂತೆ ||೧||

ಲಲನೆ ತನ್ನಯ ಬಯ್ಕೆ ರೇಣುಕ |
ನೊಲವಿನಲ್ಲದೆ ಫಲಿಸದೆಂದರಿ |
ದಲಸದಿರುಳುಂ ಪಗಲುಮಾತನ ಪೆಸರ ಪಠಿಸುತಲಿ ||
ಕಳೆಯೆ ಕೆಲದಿನ ಗರ್ಭಮಾದುದು |
ಬಳಿಕ ನವಮಾಸಗಳು ತುಂಬಲು |
ತೊಳತೊಳಪ ಪೆಣ್ಗೂಸ ಬೆಸಲಾದಳು ಸುಲಗ್ನದಲಿ ||೨||

ರೇವಣಾನುಗ್ರಹಭವೆಗೆ ಸಿರಿ |
ರೇವಣಾಂಬೆಯೆನುತ್ತೆ ಪೆಸರಿ |
ಟ್ಟಾವಧೂಮಣಿ ಸಲಹುತಿರ್ದಳು ಮಮತೆಯಲಿ ಬಳಿಕ ||
ತೀವೆ ದಶವತ್ಸರಗಳಾ ರಾ |
ಜೀವನೇತ್ರೆಯ ಚೆಲುವನೀಕ್ಷಿಸಿ |
ಭಾವೆ ನಲಿನಲಿಯುತ್ತಲಿರ್ದಳು ಗುರುವ ಕೊಂಡಾಡಿ ||೩||

ಬಳೆಯುತಿರೆ ಬಾಲೇಂದುವೋಲಾ |
ಯೆಳೆಯುಳಾಪೊಳಲಾಳ್ವ ಬಿಜ್ಜಳ |
ಕುಲಜನೊರ್ವನು ವಾಸನೂರೊಳು ಗುರುವು ಹುಗಿದಸಿಯ ||
ನಲುಗತೆಯನಾಲಿಸುತಲದ ಕೈ |
ಗೊಳಲು ಬಯಸುತಲೆಸಗಿ ಯತ್ನವ |
ಫಲಿಸದಿರೆ ಕರ್ತವ್ಯಮರಿಯದೆ ಚಿಂತೆಯಾಂತಿರ್ದು ||೪||

ಆವನೆನಗಾಖಂಡೆಯುವ ತಂ |
ದೀವನವಗಾನರ್ಘರಾಜ್ಯವ |
ನಾವಯುವವಿತ್ತಪೆನೆನುತ್ತಲಿ ಪೊಯ್ಸೆ ಡಂಗುರವ ||
ನಾವು ತಾವೆಂದೈದುತಲಿ ನಾ |
ನಾವಿಧದ ಮಂತ್ರಜ್ಞರರಿಯದೆ |
ಬೇವಸವನಾಂತಳಿದರೇವೊರೆದಪ್ಪೆನಚ್ಚರಿಯಂ ||೫||

ದೊರೆವಡೆದ ಕೊಂಕಣದೆ ಮಾಯಾ |
ಪರಿಣತನು ಖರ್ಪರಸಮಾಹ್ವಯ |
ನರಿದಿದನು ಪುಲಿಯೇರಿ ಬಂದನು ಶಿಷ್ಯರೊಡವೆರೆದು ||
ಪರಿಪರಿಯ ಬಹುಮಂತ್ರತಂತ್ರೋ |
ತ್ಕರದ ಮೈಮೆಯ ಬಣ್ಣಿಸುತಲಾ |
ಧರಣಿಯೊಡೆಯಗೆ ಕೌತುಕವ ಪೆರ್ಚಿಸುತಲಿಂತೊರೆದ ||೬||

ಒಡೆಯ ಕೇಳ್ಕೈ ದಿನಪ ಗಗನದೆ |
ಪಡುವೆಡೆಯೊಳೊಗೆವಂತೆ ಮಾಳ್ಪೆನು |
ಕಡಲನೇಳಂ ತುಂಬಿ ಬಗಸೆಯೊಳೀಂಟಿದಪೆನೊಮ್ಮೆ ||
ನಡೆವೆನಾಗಸದೊಳಗೆ ವಹ್ನಿಯು |
ಪಿಡಿದು ಕಟ್ಟುವೆ ನುಟ್ಟಬಟ್ಟೆಯೊ |
ಳೊಡರಿಸುವೆ ಬೆಸಸಿದುದ ಪರಿಕಿಸು ನನ್ನ ಚತುರತೆಯಂ ||೭||

ತರುಸಮೂಹವಕಾಲದಲಿ ಪೂ |
ತಿರದೆ ಫಲಗಳನೀವವೋಲ್ನಾಂ |
ವಿರಚಿಸುವೆನಚ್ಚರಸೆಯರ್ಕಳನೀಳ್ದು ತಂದಪೆನು ||
ಸರಿಯವರನೆನಗಿನ್ನೆವರವಾ |
ನರಿಯೆನ್ನೈ ಮಾಯಾಧಿದೇವಿಯ |
ಚರಣಕವಳೆಳಸಿದುದನರ್ಪಿಸಲಾಕೆ ವಶವಹಳು ||೮||

ಪನ್ನೆರಡುಸಾಸಿರದ ಸಂಖ್ಯೆಯ |
ಕನ್ನೆಯರನೀಖಡ್ಗಕೋಸುಗ |
ಮುನ್ನ ಬಲಿಗುಡೆ ಕಾಮಿತವು ಕೈಸೇರ್ವುದಿಳೆಯೊಡೆಯ ||
ಬಿನ್ನಪಮನಿದ ತಂದು ಚಿತ್ತದೊ |
ಳಿನ್ನು ಬೆಸನೀಯೆನಲು ಪೊಡವಿಪ |
ಮನ್ನಿಸಿದನಾಕುಟಿಲಸಿದ್ಧನ ಮಾತನಾಕ್ಷಣದೇ ||೯||

ಕರೆದು ನಿಜಸಚಿವರನು ತನ್ನಯ |
ಪುರದೊಳಿರ್ಪಾಕನ್ನೆಯರನನಿ |
ಬರನು ಸೆರೆವಿಡಿದೀಳ್ದು ತರೆ ಸೈನಿಕರ ಕಳುಪಿರೆನೆ ||
ತುರಿಪದಲಿ ಪಟುಭಟರು ಪಲಬರು |
ಕರದೆ ಖಡ್ಗವ ತಾಳ್ದು ಪೊರಮ |
ಟ್ಟರು ಕಠೋರರು ಮನೆಮನೆಯೊಳರಸಿದರು ಕನ್ನೆಯರ ||೧೦||

ಅಸಿಯ ಝಳಪಿಸಿ ಮನೆಮನೆಯ ಶೋ |
ಧಿಸುತೆ ಸೈನಿಕರಾಳಿ ನುಗ್ಗಲು |
ಬಸಿರ ಹೊಯ್ದುಳುತಿರ್ದರಾಮಾತೆಯರು ಕಟ್ಟಳಲಿ ||
ಪಸುಮಗುವನುಂ ಬಿಡದೆ ಕಡುಕ |
ಕ್ಕಸದೆ ಪಿಡಿತರಲಾವಿಲಾಪವು |
ದೆಸೆದೆಸೆಯ ತೀವುತಲಿ ಗಗನವನಡರ್ದು*ದೇನೆಂಬೆ ||೧೧||

ಎತ್ತಲುಂ ಬಾಲೆಯರ ರೋದನ |
ವೆತ್ತಲುಂ ಮಾತೆಯರ ನಿಡುಸು |
ಯ್ಯೆತ್ತಲುಂ ಚೀತ್ಕಾರಮಿವರಿಂ ಪೊಳಲನೆಲ್ಲವನಾ ||
ಮಿತ್ತು ತುತ್ತಾಗಿಸುವಳೆಂದೇ |
ತತ್ತರಿಸಿ ತತ್ಪುರದ ಮಂದಿಯು |
ಮತ್ತನಾದಿಳೆಯಾಣ್ಮನನು ಸಲೆ ಬಯ್ದು ಭಂಗಿಸಿತು ||೧೨||

ರೇವಣಾಂಬೆಯ ಜನನಿ ಮಾಯಾ |
ದೇವಿಯಿಾವಾರ್ತೆಯನು ಕೇಳಿದು |
ಹಾ ವಿಧಿಯೆ ನನ್ನೇಕಪುತ್ರಿಯ ಗತಿಯದೇನಹುದೋ ||
ಏವೆನಾನೆನುತಳುತಿರಲು ಪರಿ |
ಧಾವಿಸುತೆ ನೃಪಸೈನಿಕರು ಬಂ |
ದಾವನಿತೆಯಾಲಯದಿನುಯ್ದರು ರೇವಣಾಂಬೆಯನು ||೧೩||

ಸಹಿಸಲಾರದೆ ಸುತೆಯಗಲ್ಕೆಯ |
ಮಹಿಳೆಯರ ಮಂಡಲದಲಗ್ರಣಿ |
ಯಹ ವಧೂಮಣಿ ಮಾಯೆ ರೇಣುಕಚರಣಗಳ ನೆನೆದು ||
ಅಹಹ ನನ್ನಯ ಮುದ್ದುಕಂದನ |
ನಿಹದ ಭಾಗ್ಯದ ವಲ್ಲರಿಯ ಸ |
ನ್ನಿಹಿತಮಾದೀವಿಪದದಿಂ ಸಲಹೆಂದು ಬೇಡಿದಳು ||೧೪||

ಪಗಲುಮಿರುಳುಂ ನೋಂತ ನನಗೀ |
ಮಗುವನಿತ್ತೈ ಗುರುವೆ ತರವೇ |
ಮಗುಳೆ ನೀನಿದನೀಳ್ದುಕೊಂಬುದು ಘನಕೃಪಾಜಲಧಿ ||
ತಗದುತಗದೆನ್ನೊಡೆಯ ಎಂದಳು |
ತೊಗುಮಿಗೆಯ ಚಿಂತೆಯಲಿ ಪೊರಳುತೆ |
ಮೃಗವಿಲೋಚನೆ ನಾಡೆ ಮೂರ್ಛಿತೆಯಾದಳಾಕಾಂತೆ ||೧೫||

ಸೈನಿಕರು ಕೊಂಡುಯ್ಯುತಿರಲಾ |
ಮಾನಿನೀಮಣಿ ರೇವಣಾಂಬೆಯ |
ದೇನುಮರಿಯದ ತೆರದೆ ನಗುನಗುತಿರ್ದು ರೇವಣನ ||
ಜಾನಿಸುತೆ ತಚ್ಚರಣಯುಗಳವ |
ಮಾನಸದೆ ಪೂಜಿಸಿದಳದ ನಾ |
ನೇನೊರೆವೆ ಬಾಲಿಕೆಯ ನಿಶ್ಚಲಭಕ್ತಿಯತಿಶಯವ ||೧೬||

ತಿಳಿದು ತನ್ನಯ ಭಕ್ತೆಗೊದವಿ |
ರ್ಪಳಲನಾರೇಣುಕನು ಧರಣಿಪ |
ಗಲಸದುಪದೇಶಿಸಲು ತತ್ತ್ವವ ಸಮಯವಿದೆಯೆಂದು ||
ಮಲಯಭೂಧರದತ್ತಣಿಂದಾ |
ಪೊಳಲನೈದುತೆ ನಿರ್ಜರರು ಪೂ |
ಮಳೆಗರೆಯುತಿರಲಾಗ ಮಾಯೆಯ ಬಳಿಯ ಸಾರಿದನು ||೧೭||

ಅಮಿತಕರುಣಾಶಾಲಿ ಗುರುವಾ |
ಗಮಿಸೆ ಮಾಯಾದೇವಿ ಕಂಡಳು |
ನಮಿಸಿದಳು ತತ್ಪದಯುಗಕೆ ಕೈಮುಗಿದು ಬೇಡಿದಳು ||
ಶಮಧನೇಡಿತಮಹಿಮ ಪರಿಹರಿ |
ಸೆಮಗಡಸಿದೀದುಃಖಸಂದೋ |
ಹಮನೆಲೈ ದೀನಾಳಿರಕ್ಷಣದೀಕ್ಷಿತಾಧ್ಯಕ್ಷ ||೧೮||

ಅರಿಯೆನುಚಿತಾನುಚಿತಭೇದವ |
ನರಿಯೆ ನಿಗಮೋಕ್ತಿಗಳ ಜಾಲವ |
ನರಿಯೆ ಭವಸಾಗರವ ದಾಂಟುವ ಹದವ ಗುರುದೇವ ||
ಅರಿದಿಹೆನು ನಿನ್ನಡಿಯ ಸೇವೆಯು |
ದೊರೆಯೆ ಶುಭವಹುದೆಂಬುದನು ನಾ |
ನರಿಯೆ ಪೆರತನು ನಿನ್ನ ಭಜಿಸುವ ಭಾಗ್ಯವನು ನೀಡೈ ||೧೯||

ನುಡಿಯನದನಾಲಿಸುತೆ ರೇಣುಕ |
ನುಡಿದನೆಲೆ ತನುಜಾತೆ ಶೋಕವ |
ಬಿಡುಬಿಡೌ ನಿನ್ನಾತ್ಮಜಾತೆಯು ಸೊಗದೊಳಿರುತಿಹಳು ||
ಖಡುಗಕಂಜುವಳಲ್ಲ ಕಾಲಗೆ |
ಸೆಡೆವವಳು ತಾನಲ್ಲವಾಪೆ |
ಣ್ಣಡಿಗಡಿಗುವೊಲಿದೆನ್ನ ಪೆಸರನೆ ಪಾಡಿ ಪೊಗಳುವಳು ||೨೦||

ಅಂಜದಿರು ಖರ್ಪರನ ಗರ್ವವ |
ಭಂಜಿಸುವೆನಾಂ ರೇವಣಾಂಬೆಯ |
ಜಂಜಡೆಯುತನವನು ಹರಿಪ್ಪೆನೆನುತ್ತೆ ಗುರು ನುಡಿಯೆ ||
ಸಂಜನಿಯಿಸಲ್ ಕಂಪನವು ಕರ |
ಕಂಜದಲಿ ತಾಳ್ದಸಿಯು ತಾ ಭರ |
ದಿಂ ಜಗಳ್ದು* ಬೀಳುತಿರೆ ವಿಹ್ವಲನಾದ ಖರ್ಪರನು ||೨೧||

ಅಡಗುತಿದೆ ಯೆನ್ನುಸಿರು ಮೆಯ್ಯುಂ |
ನಡುಗುತಿದೆ ಮಂತ್ರಂಗಳಾಬಲ |
ಮುಡುಗುತಿದೆ ಯೇಂಕಾರಣವೊ ನಾನರಿಯೆನೇ ಎನುತ ||
ಕಡುದುಗುಡವೊಗೆದಿರಲು ದುರುಳನು |
ಪೊಡೆಯುರಿಯೆ ತಳವಮುಳಿಸುತಿರ್ದನು |
ಪಡಿಯೆಸಗೆ ಮುಂದರಿಯದಾದನು ಚಣದೊಳೇವೇಳ್ವೆ ||೨೨||

ಉಕ್ಕುವಳಿಯಾಸೆಯಲಿ ಮಂದಿಯ |
ದುಕ್ಕಕೀಡೆಸಗುತಲಿ ತಾ ಕೈ |
ಯಿಕ್ಕಿ ದುರಿತಕೆ ಸೊಗವನಾಂಪೆನೆನುತ್ತೆ ಬಗೆದಿರ್ದಾ ||
ಮುಕ್ಕಪೊಡವಿಪನೆಡೆಗೆ ರೇಣುಕ |
ನೆಕ್ಕಟಿಯೊಳೈತಂದು ಕಾಣಲು |
ಗಕ್ಕನವನೆದ್ದೆರಗಿದನು ತಚ್ಚರಣಸರಸಿಜಕೆ ||೨೩||

ಸಲಹು ಗುರುವರ ಸಜ್ಜನಾದರ |
ಸಲಹು ದುರಿತಧ್ವಾಂತಭಾಸ್ಕರ |
ಸಲಹು ಭವಭಯದೂರ ಭಕ್ತಾಧಾರ ಗಂಭೀರ ||
ಸಲಹು ಶಿವತತ್ತ್ವಾಬ್ಧಿಶಶಧರ |
ಸಲಹು ಪರಮತವಾದಿಭೀಕರ |
ಸಲಹು ರೇವಣಸಿದ್ಧ ನತಜನವಾರಮಂದಾರ ||೨೪||

ಬಗೆಯ ಸೂರೆಯನಿತ್ತೆನಳಿಯಾ |
ಸೆಗೆ ಮರುಳ್ತನಕಿರ್ಕೆಯಾದೆನು |
ವಿಗತಮಾಯ್ತಾಮುಷ್ಮಿಕದ ಭಯವೈಹಿಕದ ಬಯ್ಕೆ ||
ಮಿಗಿಲೆನಿಸಿತೆನಗಕಟ ಗುರುವೇ |
ಪೆಗಲೊಳಾಂತೆನು ಪಾಪರಾಶಿಯ |
ಜಗತಿಯೊಡೆಯನ ನಮ್ಮ ಪಿರಿಯನ ಪೆಸರ ಮಸುಳಿಸಿದೇ ||೨೫||

ಭವದಮಲಪದಸರಸಿರುಹಯುಗ |
ಳವ ವಿಲೋಕಿಸಿ ಧನ್ಯನಾದೆನು |
ಬವಣೆಯುಡಗಿತ್ತಾಯ್ತು ಕಣ್ದೆರವೇಂ ಪುರಾಕೃತವೋ ||
ಬುವಿಯ ಗುರುವೇ ಕಲ್ಪತರುವೇ |
ಕವಿದ ಮಾಯಾತಮದ ಭಾನುವೆ |
ನವೆದೆನೆನ್ನನು ಸಲಹು ಸಂಸ್ತುತಿಗೈವೆ ಪೊಡಮಡುವೆ ||೨೬||

ಎಂದೆರಗಿ ಭಕ್ತಿಯೊಳು ಕೆಲದಲಿ |
ನಿಂದ ರಸೆಯೊಡೆಯನ ವಿಲೋಕಿಸಿ |
ಪಿಂದುಮುಂದರಿಯದೆಯೆಲವೊ ನೀಂ ಗೈದೆಯನುಚಿತವ ||
ಮಂದಮತಿ ಮೋಹ್ ಸ್ವಾರ್ಥಕಾಗಿಯೆ |
ಮಂದಿಗಳಲನೊಡರ್ಚಿದೈ ನಿನ |
ಗಂದವೇ ನೃಪನೀತಿಯಿದುವೇ ಎಂದ ರೇಣುಕನು ||೨೭||

ಪರಮವಾತ್ಸಲ್ಯದಲಿ ಮಂದಿಯ |
ಪೊರೆಯದೊಡೆ ನೃಪಪದವಿಗರ್ಹತೆ |
ದೊರೆವುದೇಂ ಸ್ತ್ರೀಹತ್ಯೆ ಮಾಪಾತಕವಲಾ ತಿಳಿಯಾ ||
ಮರುಳುತನದಿಂ ಖಂಡೆಯಕೆ ಪ |
ನ್ನೆರಡುಸಾಸಿರ ಕನ್ನೆಯರ ಸೆಳೆ |
ತರಿಸಿ ಬಲಿಗುಡಿಸಲಿಕೆ ಬಯಸಿದೆ ನರನೆ ನೀನೆಂದ ||೨೮||

ಅಸಿಯ ಬಯಸುವೆಯಾದೊಡೆನ್ನೊಡ |
ನುಸಿರು ತೆಗೆದಿತ್ತಪೆನು ಕೇಳ್ ಬೆ|
ಳ್ಜಸವು ನಿನ್ನನು ಮುಸುಕುವುದು ಗಡ ರೌರವಕ್ಕಿಳಿವಾ ||
ಎಸಕವನು ನೀಂ ಸಮೆದೆ ಪರಿಶೀ |
ಲಿಸದೆ ತುಡುಕಿದೆ ಎನಲು ನಿಜಮಾ |
ನಸದ ತಮವದು ಪರಿಯೆ ಜನಪತಿ ಬಾಗಿದನು ತಲೆಯ ||೨೯||

ನೀಡುತೆನಗಿಂದಭಯಹಸ್ತವ |
ನೋಡು ಕರುಣಾಪಾಂಗದಿಂದಲಿ |
ಮಾಡಿದೆನ್ನಪರಾಧಶತವನು ಮನ್ನಿಸೈ ದೇವಾ ||
ಕೇಡಿಗೀಡಾಗುವ ಮೊದಲೆ ಕಾ |
ಪಾಡು ಕನ್ಯಾಜನವನೆನುತಲಿ |
ಬೇಡಿ ನಲವಿಂ ಮತ್ತೆಮತ್ತೆರಗಿದನು ತತ್ಪದಕೇ ||೩೦||

ಅತ್ತ ಖರ್ಪರನರಿದು ರೇಣುಕ |
ವೃತ್ತವನು ನಿಜಶಿಷ್ಯಮುಖದೆ ವಿ |
ಪತ್ತು ತನಗಡಸುವುದೆನುತ್ತೆ ಪಲಾಯನವನೆಸಗೇ ||
ಪತ್ತನದ ಜನರೆಲ್ಲ ನಲಿನಲಿ |
ಯುತ್ತೆ ಮಕ್ಕಳನಪ್ಪುತೆದೆಯಲಿ |
ಚಿತ್ತಜೋದ್ಭವವೈರಿಮಹಿಮೆಯ ಪಾಡಿ ಪೊಗಳಿದರು ||೩೧||

ಸೆರೆಯ ಕಾಹಿನ ಭಟರು ಮೈಮರೆ |
ದೊರಗಿದರು ಮಾಯಾತ್ಮಭವೆ ಸಾ |
ದರೆ ಗುರೂತ್ತಮನಾಮಪಾರಾಯಣವನೆಸಗುತಿರೇ ||
ಹರಿಸದಿಂದಲ್ಲಿರ್ದ ಕನ್ಯೆಯ |
ರಿರದವಳನನುಕರಿಸಿ ಪಾಡಲು |
ಪುರಜನಾವಳಿ ಬಂದು ಬಳಸಿತು ನಲಿದು ನರ್ತಿಸಿತು ||೩೨||

ಎತ್ತಲುಂ ರೇವಣಸುನಾಮೋ |
ದಾತ್ತಕೀರ್ತನಮೊಪ್ಪಿರಲು ಮೇ |
ಣೆತ್ತಿ ಕೌಂಕುಳೊಳಟ್ಟ ಪೆಣ್ಗೂಸುಗಳ ಮುದ್ದಿಸುತೆ ||
ಬಿತ್ತರಿಸುತಾಗುರುವ ಮೈಮೆಯ |
ನುತ್ತಮೆಯರೈದಿದರು ನಿಜಗೃಹ |
ದತ್ತ ತಮ್ಮಯ ನೋಂತ ನೋಂಪಿಯು ಸಫಲವಾಯ್ತೆನುತೆ ||೩೩||

ಪೌರರೆಲ್ಲರುಮಿಂತು ಸಂಮುದ |
ವಾರಿನಿಧಿಯೊಳಗಳ್ದು ತೇಲಲು |
ಧಾರಿಣೀಶ್ವರನೊಡನೆ ರೇವಣನಾನದೀತಟವ ||
ಸಾರಿ ಭರದಿಂ ತೆಗೆದು ಕುಡಲಾ |
ಕೂರಸಿಯನದು ಸರ್ಪವಾದುದು |
ಚೀರಿದನು ತನ್ನೃಪತಿ ಬಿಮ್ಮನೆ ಬಿಗಿದ ಭೀತಿಯಲಿ ||೩೪||

ನೋಡಿ ರೇಣುಕನವನನಿನಿನಗೆ |
ಗೂಡಿ ಭೀತಿಯಮಾಣೆನುತೆ ಕೈ |
ನೀಡಿ ಸರ್ಪವ ಕೊಂಡನೊಡನದು ಯಕ್ಷರೂಪಾಗಿ ||
ಗಾಢತರಭಕ್ತಿಯಲಿ ಕೈಗಳ |
ಜೋಡಿಸುತೆ ಸೊಲ್ಲಿಸಿತು ಗುರುವೇ |
ಪಾಡುಪಡುತಿರ್ದೆನ್ನ ಸಲಹಿದೆ ಶಾಪವನು ಕಳೆದೆ ||೩೫||

ಅಂದು ಸಮೆದಪರಾಧದಿಂದಲಿ |
ಪೊಂದಿ ರಾಕ್ಷಸಜನ್ಮವನು ನಾಂ |
ತಿಂದು ನರಮಾಂಸವ ಭವನ್ನಿಟಿಲಾಕ್ಷಪಾವಕನಿಂ ||
ಬೆಂದು ಖಡ್ಗದ ರೂಪದಲಿ ನೆಲೆ |
ನಿಂದು ನೀರೊಳು ನಿನ್ನನುಗ್ರಹ |
ದಿಂದ ಪಾವಾಗಿಂದು ಪಾವನನಾದೆ ಪರಮಗುರು ||೩೬||

ನಿನ್ನ ಮೈಮೆಗೆ ಸರಿಯದುಂಟೇ |
ನಿನ್ನ ಕರುಣೆಗೆ ಮೇರೆಯುಂಟೇ |
ನಿನ್ನನಲ್ವೆಸರ್ಗೆ*ಣೆಯದುಂಟೇ ನಿನಗೆ ಪಡಿಯುಂಟೇ ||
ನಿನ್ನ ಭಕ್ತರ್ಗಳಲದುಂಟೇ |
ನಿನ್ನೊಲವಿಗಿಂ ಮಿಗಿಲುಮುಂಟೇ |
ನಿನ್ನನಾರಾಧಿಸುವ ಭಾಗ್ಯದೆ ಭಾಗ್ಯಬೇರುಂಟೇ ||೩೭||

ಮರಳ್ವಿ*ನೆನ್ನಯ ಲೋಕಕೀಗಳ್ |
ಪರಸಿ ಕಳುಪ್ಪೈ ಪರಮಪಾವನ |
ಚರಣ ಶರಣಾಗತಕದಂಬೋದ್ಧರಣ ಬಹುಕರುಣಾ ||
ದುರಿತತೂಲಸಮೀರಣಾ ಪುರ |
ಹರಸದಾಜ್ಞಾದರಣ ರೇವಣ |
ಸುರಪಮುಖಕಲ್ಯಾಣಕಾರಣ ಎನುತಲೆರಗಿದನು ||೩೮||

ಪರಸಿ ಕಳುಪುತಲವನ ರೇಣುಕ |
ಕರೆದು ಮಾಯಾರೇವಣಾಂಬೆಯ |
ರ್ಗ*ರುಹಿ ಶಿವಕೈವಲ್ಯಮಾರ್ಗವ ಭೂಮಿಪಾಲನಿಗೆ ||
ಧರೆಯ ಧರ್ಮದೆ ಸುಚಿರಮಾಳೆನು |
ತೊರೆದು ನುತಿಸುತೆ ಗರಪುರೇಶನ |
ತೆರಳ್ದ*ನಲ್ಲಿಂ ಬಳಿಕ ಮಲಯಾಚಲಕೆ ಮನಮೊಲಿದು ||೩೯||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಹದಿನೈದನೆಯ ಸಂಧಿ.

ಸೂ॥ ಜಾಣೆ ಚೋಳನೃಪಾಲನೊಲ್ಮೆಯ |
ರಾಣಿ ಕುಲಶೇಖರಿ ವನಪ್ರಿಯ |
ವಾಣಿ ಪಡೆದಳು ರೇಣುಕಾನುಗ್ರಹದೆ ತನುಭವನ ||

ಕಂದುಗೊರಲಂಗಲ್ಲದುಳಿದ |
ರ್ಗೆಂದುಮೆರಗದ ಶಿವನಿಗರ್ಪಿಸ |
ದೊಂದುಮಂ ಸವಿನೋಡದಭವನ ಪೆಸರನುಳಿದೆಂದುಂ ||
ಒಂದುಮಂ ಸೊಲ್ಲಿಸದ ಶೈವಾ |
ನಂದತುಂದಿಲಹೃದಯನಖಿಲಾ |
ನಂದದಾಯಕ ಚೋಳಧರಣೀರಮಣನೆಸೆದಿರ್ದಂ ||೧||

ಕ್ಷಿತಿಪಕೇರಳಪಾಂಡ್ಯರೊಡಗೂ |
ಡುತಲಿ ನಾಕವನೊಮ್ಮೆ ಸಾರುತೆ |
ಶತಮುಖಗೆ ಸುವಿನಯುವ ತೋರದೆ ಧರೆಗೆ ಮರಳಿದನಾ ||
ಕತದೆ ಮುನಿದಮರೇಂದ್ರನುರ್ವೀ |
ಪತಿಯ ಕರೆಯಿಸಿ ದಿವಕೆ ತಾನವ |
ಮತಿಯನವಗೆಸಗಲ್ಕೆ ಬಗೆದನು ಪೇಳಲೇನದನು ||೨||

ಸುರಪನಮರಾವತಿಯ ಕೋಂಟೆಯ |
ಪಿರಿದೆನಿಪಬಾಗಿಲಲಿ ಮೇಗಡೆ |
ಯಿರದೆ ತನ್ನಯ ಪಾವುಗೆಗಳಂ ಕಟ್ಟಸುತೆ ಬಳಿಕ ||
ಭರದೆ ಕಾಂಚಿಗೆ ಪೋಗಿ ನೀನಾ |
ನರಪಚೋಳನ ಕರೆತಹುದೆನು |
ತ್ತೊರೆಯೆ ಮಾತಲಿ ಸಾರ್ದು ಕಂಡನು ಚೋಳಭೂಪತಿಯಾ ||೩||

ಕರೆಯುಕಳುಹಿದನಿಂದ್ರನೆಂಬುದ |
ನರಿದು ಚೋಳನೃಪಾಲ ಭರದಿಂ |
ತೆರಳುತಮರಾವತಿಯ ಬಾಗಿಲ ಮೇಗಡೆಯ ಕೆರ್ಪ ||
ನಿರುಕಿಸುತೆ ಕಡುಮುಳಿದು ತಾ ಚ |
ಪ್ಪರಿಸೆ ರಥವಾಜಿಗಳು ಬಾಗಿಲ |
ನರರೆ ಮೇಲ್ವಾಯ್ದುರದೆ ದಾಂಟಿದುವೇನ ಬಣ್ಣಿಪೆನು ||೪||

ತಿಳಿದಿದನು ಚರಮುಖದಿನಿಂದ್ರನು |
ಭಳಿರೆ ಚೋಳಮಹೀಂದ್ರ ಬೀರರ |
ತಲೆವಣಿಗಡಿಳೆಯಲ್ಲಿ ಮನ್ನಿಸವೇಳ್ಕುಮಾವಿವನ ||
ಉಳಿದ ನೃಪರಂತಲ್ಲವಿವನೆನು |
ತಲಿ ಸಭಾಂಗಣಕವನ ಕರೆಯಿಸಿ |
ತೊಳಗುವರ್ಧಾಸನವನಿತ್ತನು ನುಡಿಸಿದನು ನಯದೇ ||೫||

ಬುವಿಯೊಡೆಯ ನಿನ್ನಧಟನರಿಯದೆ |
ಯುವಮತಿಯನೆಸಗಲ್ಕೆ ಬಗೆದೆನು |
ಸುವಿದಿತವು ಮೇಣಸದೃಶವು ಗಡ ನಿನ್ನ ಸಾಹಸವು ||
ಸವೆದಿಹೈ ಕ್ರತುಗಳನನೇಕವ |
ವಿವಿಧದಾನವ ನೀಡಿಹೈ ನೀಂ |
ಶಿವನೊಲುಮೆ ನೆಲಸಿಹುದು ನಿನ್ನೊಳು ಧನ್ಯ ನೀನೆಂದ ||೬||

ಅಂದು ನನ್ನಡಿಗೆರಗದೈದಿದೆ |
ಯೆಂದು ಮನದಾಂ ಮುಳಿದು ತಳೆದೆನು |
ದಂದುಗವನಿದಕಾಗಿ ಚಿಂತಿಸಬೇಡ ನೀನಿನಿಸುಂ ||
ಕಂಧರದೆ ನೀನಿದನು ಧರಿಸೆನು |
ತಂದವಾದಾರತ್ನಮಾಲೆಯು |
ನಿಂದಿರಂ ಚೋಳಾವನೀಶಂಗರ್ಪಿಸಿದನೊಲವಿಂ ||೭||

ನಗುತೆ ಚೋಳನೃಪಾಲನಾಸ |
ಗ್ಗಿಗರೆರೆಯುಗಿಂತುಸಿರ್ದ*ನಹುದೈ |
ಮುಗಿಲುದೇರನೆ ಮೂರುಲೋಕಕುಮೊಡೆಯನೆನಿಸಿರುವೈ ||
ಬಗೆಯೆ ಸಕಲಜಗಕ್ಕುಮೆಸೆವೈ |
ಮೊಗನೆ ಗಡ ತಾನೊಡೆಯನದು ಬಗೆ |
ವುಗದೆ ನೀಂ ಕಡೆಗಣಿಸಿದೊಡೆ ಪೇಳಾರಿಗೂಣಯುಮೇಂ ||೮||

ಗರ್ವಮೆನಗೆಳ್ಳನಿತುಮಿಲ್ಲವು |
ಶರ್ವನೊರ್ವನೆ ಪಿರಿಯನೆಂದಾಂ |
ಸರ್ವಕಾಲದೊಳುಂ ವಿಭಾವಿಪೆನವಗೆ ಕುಂಬಿಡುವೆಂ ||
ಕೊರ್ವಿ ನುಡಿವವನಲ್ತು ಲಾಲಿಸ |
ಖರ್ವಮಹಿಮಾನ್ವಿತನನಾ ನಗ |
ಸಾರ್ವಭೌಮಾತ್ಮಜೆಯ ರಮಣನನುಳಿದು ಪೆರರ್ಗೆ*ರಗೆಂ ||೯||

ಶಿವನ ನುತಿಸುವೆನೊರ್ವನನೆ ಮಿ |
ಕ್ಕವರ ನುತಿಸೆನು ಭಾವಿಸಲ್ಕಾ |
ಶಿವನೆ ಸರ್ವವು ಶಿವನಿಗರ್ಪಿಸದೆಂದುಮೇನುಮನಾಂ ||
ಸವಿಯೆ ಶಿವನಿರ್ಮಾಲ್ಯವುಳಿದಾ |
ವಿವಿಧಸುಮಮಾಲೆಗಳ ಸೂಡೆನು |
ಶಿವನೆ ದೇವನು ಶಿವನೆ ಕಾವವನೆಂದ ಚೋಳೇಂದ್ರ ||೧೦||

ಎಂದ ಚೋಳಜನೇಂದ್ರನುಕ್ತಿಯ |
ನಿಂದಿರನು ತಲೆದೂಗಿ ಲಾಲಿಸು |
ತೆಂದನೆಲೆರಾಜೇಂದ್ರಚೋಳನೆ ನೀನೆ ಧನ್ಯನಲಾ ||
ಗೊಂದೆವೆಳವಿಗೆಯನ ಮಹಾಮುದ |
ದಿಂದೆ ಪೂಜಿಪ ನಿನಗದಾರ್ಕೈ |
ಮಂದಿಯಲಿ ಮಿಗಿಲಹರು ಭಾಪುರೆ ಸುಕೃತಿ ನೀನೈಸೆ ||೧೧||

ಪೋಗಿ ಬಾರೈ ನಿನ್ನ ನಗರ |
ಕ್ಕೀಗಳಾಂ ಸಂತುಷ್ಟನಾದೆನು |
ನೀಗಿತೆನ್ನಯ ಮನದ ಸಂದೆಗಮುರ್ವಿಯಲಿ ನಿನ್ನ ||
ಬೀಗುತೆಲ್ಲರು ಪಾಡಿ ಪೊಗಳಲಿ |
ರಾಗದೂರನೆ ರಾಜರಾಜನೆ |
ಚಾಗಿ ನೀಂ ರಾಜೇಂದ್ರಚೋಳಾಹ್ವಯದೆ ಮೆರೆ ಮುದದೆ ||೧೨||

ಧರೆಗೆ ಶಿವತತ್ತ್ವಪ್ರಸಂಗವ |
ನೆರಹುತಲಿ ಶಿವ ಶರಣವಿಸರಕೆ |
ಹರಿಸಮಂ ನೀ ನೀಡಿ ಪರವಾದೀಭದಂತಗಳಂ ||
ಅರಿವಿನಾಬಲದಿಂದೆ ನೆರ್ಗುತೆ |
ಚಿರಮಿರ್ರೈ ರಾಜೇಂದ್ರಭೂಷಣ |
ಸರಸಗುಣಮಣಿಹಾರ ಎಂದನು ನಾಕಪರಿವೃಢನು ||೧೩||

ಬಳಿಕಲಾ ರಾಜೇಂದ್ರಚೋಳನು |
ತಳರ್ದು* ಕಾಂಚಿಗೆ ಹರಿಸದಿಂ ನಿಜ |
ಲಲನೆಯೊಡನೆಲ್ಲವನು ತಿಳುಹಿದು ಪೊಗಳೆ ಶಂಕರನಂ ||
ನಳಿನಲೋಚನೆ ಕೋಕಿಲಸ್ವನೆ |
ಜಲರುಹಾನನೆ ವಲ್ಲಭನ ಪದ |
ತಳಕೆರಗಿ ನಿಡುಸುಯ್ದು ತಲೆಬಾಗಿದಳು ಬಾಗುಳದೆ ||೧೪||

ನೋಡಿದನು ಜನಪಾಲ ಮಡದಿಯ |
ಬಾಡಿದಾನನ ಪದ್ಮವನು ಸವಿ |
ಗೂಡಿದುಕ್ತಿಯಿನೊಲ್ದು ನುಡಿಸಿದನವಳ ಸಂತವಿಸೆ ||
ಗಾಡಿಕಾತಿಯೆ ದುಗುಡವೇತಕೆ |
ಬೇಡಿದಿಷ್ಟವ ನೀವೆನಾಂ ಮಾ |
ತಾಡು ಮಧುರಾಲಾಪೆ ಮನಸಿಜಮಾನಿನೀರೂಪೇ ||೧೫||

ಏಕೆ ಮೌನವನಾಂತೆ ಕಾಂತೇ |
ಶೋಕಿಸಲು ಕಾರಣವದೇಂ ನುಡಿ |
ನಾಕದಧಿಪತಿಯೆನಗೆ ಕಡುಮನ್ನಣೆಯನಿತ್ತಿಹನು ||
ಆಕಪರ್ದಿಯನುಗ್ರಹಕೆ ನಾ |
ವಾಕರರು ಪೆರತೇನನೆಳಸುವೆ |
ಕೋಕಿಲಾರವೆ ಭಾವೆ ಸೊಲ್ಲಿಸು ಬೇಡಿದುದನೀವೆ ||೧೬||

ಪಲ್ಲವಾಧರೆ ಸುಗುಣಮಂದಿರೆ |
ಫುಲ್ಲಸರಸಿಜಮುಖಮನೋಹರೆ |
ಯುಲ್ಲಸನ್ಮಧುಪಾಳಿಸನ್ನಿಭಚಿಕುರೆ ಗಂಭೀರೇ ||
ಸೊಲ್ಲಿಸೆನ್ನೊಡನೊಲ್ದು ನೀರೇ |
ತಲ್ಲಣಿಸೆ ಕಾರಣವದೇನೊರೆ |
ಚೆಲ್ಲೆಗಂಗಳಚದುರೆ ಸಂತಸವೇರೆ ಬಾಬಾರೇ ||೧೭||

ಎಂದ ರಾಜೇಂದ್ರನ ಪದಾಬ್ಜಕೆ |
ವಂದಿಸುತೆ ಕುಲಶೇಖರಿಯು ನಯ |
ದಿಂದೆ ನುಡಿದಳು ಮನ್ಮನಃಪ್ರಿಯ ನಿನ್ನನುಗ್ರಹದೇ ||
ಕುಂದುಕೊರತೆಯನೇನುಮರಿಯೆನು |
ಕಂದನಿಲ್ಲದ ಬೀಡು ಕಾಡೆಂ |
ಬೊಂದು ನಾಣ್ನುಡಿಯೆನ್ನ ಬಗೆಯನು ಬಂದಿವಿಡಿದಿಹುದೈ ||೧೮||

ಕೂಸನಾಡಿಸಿ ಮುದ್ದಿಸುತೆ ಮೆ |
ಲ್ವಾಸಿನಲಿ ಮಲಗಿಸುತೆ ನಲಿದು ವಿ |
ಲಾಸದಿಂ ಜೋಗುಳವ ಪಾಡುತೆ ತೊಡುವುಗಳ ತೊಡಿಸಿ ||
ಭಾಸಮಾನಮೆನಿಪ್ಪ ಪೊಸಪೊಸ |
ದೇಸಿಯಾಪಸದನವನೆಸಪೊಂ |
ದೈಸಿರಿಯದೆನಗಿಲ್ಲವೆಂದೇ ಬಗೆಯು ಕುದಿಯುವುದು ||೧೯||

ಮಕ್ಕಳೆನಿಬರೆನುತ್ತೆ ಕೇಳ್ವರು |
ಮಿಕ್ಕಭಾಗ್ಯವ ಗಣಿಸರಾರುಂ |
ಕಕ್ಕುಲಿತೆಗೊಳಗಾದೆನದರಿಂದೇವೆ ಮನದನ್ನಾ ||
ತಕ್ಕುದೋ ತಗದುದೊ ಮದೀಪ್ಸಿತ |
ಮೆಕ್ಕಟೆಯೊಳಾನರಿಕೆಗೈದಿಹೆ |
ನೆಕ್ಕಸಕ್ಕವದಿರಲು ನುಡಿಯಲಿ ಮನ್ನಿಸುವುದೆರೆಯಾ ||೨೦||

ಮಹಿಳೆಯಿಂತಾಡಿದುದನಾಲಿಸಿ |
ಮಹಿಪ ನಸುನಗುತೊರೆದನೆಲೆಬಿಸ |
ರುಹದಳಾಯತನೇತ್ರೆ ಬಿಡು ಮನದಳಲ ನೀನರಿಯಾ ||
ಇಹಪರದ ಸುಖಕಾದಿಕಾರಣ |
ನಹನು ರೇಣುಕನಾತನೇ ಗಡ |
ವಿಹಿತಮಪ್ಪುದನೀವ ಚಿಂತಿಸಲೇಕೆ ನೀನಿದಕೇ ||೨೧||

ಧರೆಯ ಸಿಂಹಾಸನವನೆನಗಿ |
ತ್ತುರುಯಶವ ಕೈಗೊಳಿಸಿ ನಾಕದೆ |
ಸುರಪನಿಂ ಮಾನ್ಯತೆಯನೊದವಿಸಿ ಶಿವನ ಚರಣದಲಿ ||
ಪರಮಭಕ್ತಿಯದುದಯಿಪಂತಿರೆ |
ವಿರಚಿಸುತೆ ಪೊರೆದಾತನಾವನೊ |
ಕರುಣಿಸುವ ಗುರುವರ್ಯನಾತನೆ ರೇಣುಕಾಚಾರ್ಯಂ ||೨೨||

ಧರೆಯನುದ್ಧರಿಸಲ್ಕೆ ಗಿರಿಜಾ |
ವರನನುಗ್ರಹದಿಂದೆ ಕಟ್ಟ |
ಚ್ಚರಿಗೊಳಿಸಿ ಸೋಮೇಶಲಿಂಗದಿನುದ್ಭವಂಗೊಂಡಾ ||
ಪರಮಪಾವನನಾಮನಾಶ್ರಿತ |
ಭರಣಗಾಢಪ್ರೇಮನೊಲಿದಿಹ |
ನರಿಯ ಕುಂಭಜಗೇಯ ಸದ್ಗುಣನಿಲಯ ಗುರುರಾಯಾ ||೨೩||

ನಡೆ ಮಡದಿ ಶಿವಪೂಜೆಯೆಸಗುವ |
ಮೃಡನ ಚರಣಾಂಭೋಜಕೆರಗುವ |
ಸಡಗರದೆ ಗುರುದೇವನಾಮವ ಪಾಡಿ ಸೇವಿಸುವ ||
ನಿಡುಜಡೆಯ ಕಡುಬೆಡಗಿ ನಡೆಯೆನೆ |
ಪೊಡವಿಯೊಡೆಯನ ನುಡಿಗೆ ನಲಿಯುತೆ |
ಮಡದಿ ನಡೆದಳು ದೇವತಾತಿಥಿಪೂಜೆಯೊಡರಿಸಲು ||೨೪||

ಮಿಂದು ನಿರ್ಮಲಸಲಿಲದಲಿ ನಲ |
ವಿಂದ ಮಡಿಯುಟ್ಟೊಲಿದು ಪಣೆಯಲಿ |
ಚಂದದಿಂ ಭಸ್ಮತ್ರಿಪುಂಡ್ರವ ಧರಿಸಿ ಪರಶಿವನ ||
ಗಂಧಕುಸುಮಾಕ್ಷತೆಗಳಿಂದಲಿ |
ನಿಂದು ಪೂಜಿಸಿ ಭಕ್ತಿಯಿಂ ಬಲ |
ವಂದು ನಮಿಸಿದರಂದು ಭಾರ್ಯಾಭರ್ತರೇವೇಳ್ವಿಂ ||೨೫||

ಮುಗಿದು ಕೈಗಳನೈದೆ ಕಣ್ಣಿವೆ |
ಬಿಗಿದು ಗುರುವರ ಬೆಸಸಿದಂತೆಯೆ |
ನಿಗಮಗೋಚರ ನಿತ್ಯ ನಿರ್ಗುಣ ನಿಷ್ಕಳಂಕ ನಮೋ ||
ಮೃಗಧರೋಲ್ಲಸಿತೋತ್ತಮಾಂಗನೆ |
ನಗಸುತಾಕ್ರಾಂತಾಂತರಂಗನೆ |
ಸೊಗದ ಮಾರ್ಗವ ತೋರಿ ಸಲಹೆಂದೆರಗಿದರು ಮರಳಿ ||೨೬||

ತೆರೆದು ಕಂಗಳ ನೀಲಕಂಠನ |
ಪರಮಮಂಗಳಮೂರ್ತಿಯನು ಕಡು |
ಹರಿಸದಲಿ ನಿರುಕಿಸಲು ಬಲಗಣ್ಪಾರಿದುದು ನೃಪಗೆ ||
ಅರಸಿಗೆಡಗಣ್ಪಾರಿತಾಗಳೆ |
ಭರದೆ ಲಿಂಗದ ಸವ್ಯಭಾಗದಿ |
ನರಲ ಸರಮದು ಜಾರಿ ಬಿಳ್ದುದು ತತ್ಪ್ರಸಾದವೆನೆ ||೨೭||

ಅದನಭೀಕ್ಷಿಸಿ ದಂಪತಿಗಳತಿ |
ಮುದದೆ ಧನ್ಯರು ತಾವೆನುತ್ತರಿ |
ದದುವೆ ನಮ್ಮಯ ಬಯ್ಕೆ ಫಲಿಸಲು ಶಕುನ ಶುಭಕರವು ||
ಸದಯನಲೆ ರೇಣುಕನು ಸಲಹುವ |
ನೊದವಿದೆಮ್ಮಯ ಚಿಂತೆ ಪರಿದುದು |
ಪದುಳದಿಂದೆನುತೈದಿದರು ನಿಜಕೇಳಿಕಾಗೃಹಕೇ ||೨೮||

ಸವೆದು ಕಾಲೋಚಿತದ ಕರ್ಮವ |
ನವರು ವಿವಿಧವಿಲಾಸವಿಭ್ರಮ |
ವಿವಶರಾಗುತೆ ಮೃದುಲತಲ್ಪದೆ ಶಿವನ ಪೊಗಳುತಲಿ ||
ಪವಡಿಸಿದರಾಯಿರುಳು ತಾರಾ |
ಧವನಿಭಾನನೆ ಕನಸಿನಲಿ ತಾ |
ಭವವಿದೂರನ ರೇಣುಕನ ಕಂಡಳು ಕೃಪಾಧಿಕನಾ ||೨೯||

ಮಗಳೆ ಚಿಂತಿಸಬೇಡ ಬಿಡು ಬಿಡು |
ಸೊಗಯಿಸುವ ತನುಭವನು ನಿನ್ನೊಳ |
ಗೊಗೆವನೆಂದಾಗುರುವರೇಣ್ಯನು ನುಡಿದು ನೈಗರೆಯೇ ||
ಸುಗುಣೆಯೆಚ್ಚರಗೊಂಡು ತೀವಿದ |
ಸೊಗದೆ ನಿಜವಲ್ಲಭಗೆ ಕನಸಿನ |
ಬಗೆಯನೆಲ್ಲವ ಬಿತ್ತರಿಸಿದಳು ಬೆಡಗ ಬೀರುತಲಿ ||೩೦||

ಕಾಂತೆಯೊರೆದುದ ಕೇಳಿ ಸಂತು |
ಷ್ಟಾಂತರಂಗನು ಚೋಳಭೂಪನು |
ಕಂತುಹರನಾಮ್ನೈಮೆಯನು ತಾ ಬಣ್ಣಿಸುತೆ ಕಡಗಿ ||
ನೋಂತ ನೋಂಪಿಯು ಫಲಿಸಿತೆಮಗಿಂ |
ದಿಂತೆನುತೆ ನಿಜಭಕ್ತಮಂಡಲ |
ಚಿಂತಿತಾರ್ಥಪ್ರದನ ನೆನೆದನು ಮನದೆ ರೇಣುಕನ ||೩೧||

ಗುರುವರನು ಸೊಲ್ಲಿಸಿದ ತೆರದಲಿ |
ತರುಣಿಗಾದುದು ಗರ್ಭಮದನೇ |
ವೊರೆವೆ ದಂಪತಿಗಳು ಸುಖಾಬ್ಧಿಯೊಳಳ್ದು ತೇಲಿದರು ||
ಪರಿಪರಿಯ ಬಯ್ಕೆಗಳ ಕೇಳದಿಯು |
ರರಸಿಗೊಲವಿಂ ಸಲಿಸುತಿರ್ದರು |
ಹರಿಣಶಾಬವಿಲೋಲನೇತ್ರೆಯ ಗರ್ಭವದು ಬಳೆಯೆ ||೩೨||

ಸಮ್ಮುದದೆ ಸೂಡಿದರು ಸಖಿಯರು |
ಕಮ್ಮರಲನುರ್ವೀಶನರಸಿಗೆ |
ಹೆಮ್ಮೆಯಿಂ ನವರತ್ನರಂಜಿತವಲಯಗಳ ತೊಡಿಸಿ ||
ದಿಮ್ಮಿದರು ದೀರ್ಘಾಯುವಾಗೆನು |
ತಂ ಮಹಾಸಂಭ್ರಮದೆ ಪರಸಿದ |
ರೊಮ್ಮನದೆ ಸೇಸೆಯನು ತಳಿದರು ತೀವೆ ನವಮಾಸಂ ||೩೩||

ಸಂಗಳಿಸೆ ಶುಭಲಗ್ನತಾರೆಯು |
ಮಂಗಳಾಂಗಿ ಮದೇಭಯಾನೆ ಕು |
ರಂಗಧರನಿಭವದನೆ ಪಡೆದಳು ಚಂದದಿಂದಲಿ ತಾಂ ||
ಕಂಗೊಳಿಪ ತನುಭವನನಂದಾ |
ಯಿಂಗಡಲು ಪಡೆದಂತೆ ಚಂದ್ರನ |
ಪೊಂಗೆ ಪೌರರ ಬಗೆಯೊಳಾನಂದರಸಮತಿಶಯದೇ ||೩೪||

ಸಂತಸದೆ ಪಡಿಯರಿಯರಾಶು |
ದ್ಧಾಂತದಿಂ ಪೊರಮಟ್ಟು ವಸುಧಾ |
ಕಾಂತನೆಡೆಗೈದುತಲಿ ಕೈಗಳ ಮುಗಿದು ಗೆಲವೆಂದು ||
ಕಾಂತಮೆನಿಸುವ ಚೋಳಭೂಪರ |
ಸಂತತಿದ್ರುಮ ಪಣ್ತು ಕುಶಲೋ |
ದಂತವನು ರಾಜೇಂದ್ರಚೋಳಂಗರಿಕೆಯೆಸಗಿದರು ||೩೫||

ಒಸಗೆ ನುಡಿಯನು ಲಾಲಿಸುತಲಾ |
ವಸುಧೆಯಾಣ್ಮನು ಮನದೆ ಕಡು ಸಂ |
ತಸವ ತಾಳುತಲೊಸಗೆವೇಳ್ದರಿಗಿತ್ತು ಮೆಚ್ಚುಗಳ ||
ಆಸಿಯಳನು ಪಸುಗೂಸಿನೊಡನೀ |
ಕ್ಷಿಸಲು ನಡೆದನು ರಾಣಿವಾಸ |
ಕ್ಕಸಮನಯನನನುಗ್ರಹಾತಿಶಯಕ್ಕೆ ಪಕ್ಕಾಗಿ ||೩೬||

ಪುರದೊಳೀಶುಭವಾರ್ತೆಯಾಗಳೆ |
ಪರಡಿದುದು ನಾಗರಕರೆಲ್ಲರು |
ಹರಿಸದಲಿ ಮನೆಗಳ್ಗೆ ಸಾರಣೆಕಾರಣೆಯನೆಸಗಿ ||
ಅರಮನೆಯ ಮುಂಗಡೆಯೊಳೊಲವಿಂ |
ನೆರೆದು ಜಯಜಯವೆಂದರಾಪುರ |
ವರವು ಗುಡಿತೋರಣದ ಸಾಲ್ಗಳಿನೆತ್ತಲೆಸೆಯುತಿರೇ ||೩೭||

ಕೇರಿಕೇರಿಗಳಲ್ಲಿ ಸಕ್ಕರೆ |
ಬೀರಲಾದುದು ಬಗೆಯು ತಣಿವೋಲ್ |
ಭೂರಿದಕ್ಷಿಣೆ ನೀಡಲಾದುದು ಪೊಳಲ ನಾಲ್ದೆಸೆಯೊಳ್ ||
ಭೇರಿಯಾಭಾಂಕಾರವೊಪ್ಪಿರೆ |
ಚಾರುಮಂಗಳವಾದ್ಯ ಮೊಳಗಲು |
ಧಾರಿಣೀಶನ ತನಯಜನ್ಮೋತ್ಸವವು ಸೊಗಯಿಸಿತು ||೩೮||

ನೋಡಿ ತಣಿಯರು ಕೂಸ ನೆರೆ ಮು |
ದ್ದಾಡಿ ತಣಿಯರು ಲೀಲೆಯಿಂಗೆ ಪಾ |
ಲೂಡಿ ತಣಿಯರು ಗಳಿಗೆಗಳಿಗೆಗೆ ಪಲವು ಸಿಂಗರವ ||
ಮಾಡಿ ತಣಿಯರು ರೇಣುಕನ ಕೊಂ |
ಡಾಡಿ ತಣಿಯರು ಗಂಡವೆಂಡಿರು |
ನಾಡೆ ತಮ್ಮಯ ಭಾಗ್ಯಕೀಡಿಲ್ಲೆಂಬ ನಿಶ್ಚಯದೇ ||೩೯||

ಶ್ರೀನಗರಪರಿವೃಢಪದಾಬ್ಜವಿ |
ಲೀನಮಾನಸನಾಗಿ ನಲಿಯುತ |
ಲಾನರೇಂದ್ರಲಲಾಮ ತನಯನ ಪಡೆದು ಸಂಮುದದೇ ||
ಮಾನಿನಿಯನೊಡವೆರೆಯುತರ್ಥಿವಿ |
ತಾನಕೀಪ್ಸಿತಗಳನು ನೀಡುತೆ |
ಜಾನಿಸುತಲಿರ್ದನು ಗುರೂತ್ತಮರೇಣುಕನ ಮನದೆ ||೪೦||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಹದಿನಾರನೆಯ ಸಂಧಿ.

ಸೂ|| ಸುರರ ಗುರುವೊರೆದಂತೆ ಚೋಳನು |
ಕರೆತರಲು ಮಲಯಾದ್ರಿಯಿಂದಲಿ |
ಪರಸಿದನು ಗುರುವರ್ಯ ರೇಣುಕ ರಾಯಗುವರನನು ||

ತನಯಜನ್ಮೋತ್ಸವದ ಸಂತಸ |
ವನು ತಳೆದು ಭಕ್ತಿಯಲಿ ಶರ್ವನ |
ನೆನೆದು ತನ್ಮಹಿಮಾತಿಶಯವನು ಪಾಡಿ ಪೊಗಳುತಲಿ ||
ಜನಪ ರಾಜ್ಯವನಾಳುತಿರಲಾ |
ತನ ಬಳಿಗೆ ಸಾರ್ತಂದನದಿತಿಯ |
ತನಯರೋಜನು ದಿವ್ಯತೇಜನು ನೆಟ್ಟನೊಂದುದಿನ ||೧||

ಬಂದ ಧಿಷಣನ ಕಂಡು ಸಂಭ್ರಮ |
ದಿಂದ ಜನಪತಿ ಜಗ್ಗನೆದ್ದನು |
ಸಂದ ಸತ್ಕಾರವನೆಸಗಿ ಬಲವಂದು ವಂದಿಸುತೆ ||
ನಿಂದು ಗುರುವೇ ನನಗೆ ಬೆಸನೇ |
ನೆಂದು ಕೇಳಲು ಬರ್ದಿ*ಲರೋಜನ |
ಮಂದವಾತ್ಸಲ್ಯದಲಿ ನುಡಿದನು ವಸುಮತೀಶನೊಳು ||೨||

ಹರಮುಖೋದ್ಭವರೇಣುಕನ ಸಂ |
ಸ್ಮರಿಸಿ ತದನುಗ್ರಹದೆ ಪಡೆದೈ |
ತರಳನನು ವಸುಮತಿಗೆ ಸಂತತ ಸೌಖ್ಯದಾಯಕನಂ ||
ಪರಮಪಾವನಚರಿತನಾತನೆ |
ಪರಸೆ ನಿನ್ನ ಕುಮಾರನುಂ ಮೇ |
ಣರಸುತನವುಂ ವಂಶವುಂ ತಾವೇಳ್ಗೆವಡೆಯುವುವು ||೩||

ಮಂದಿಗಾರೇಣುಕನ ದರ್ಶನ |
ಮೊಂದಿಸೈ ನೀನಾಳ್ವ ನಾಡೊಳು |
ಚಂದದಿಂದಲಿ ಹರಹು ಶಿವಮತತತ್ತ್ವಸಾರವನು ||
ಇಂದುಚೂಡನ ನುತಿಸು ನಿನ್ನಯ |
ನಂದನನು ತಾನಹನು ಜಗದಾ |
ನಂದಕರನೆಂದಮರಲೋಕಕೆ ಮರಳ್ದ* ದೇವಗುರು ||೪||

ಆನುಡಿಯನಾಲಿಸುತೆ ಸಂಮುದ |
ವಾನುತಲಿ ರಾಜೇಂದ್ರಚೋಳನು |
ಸಾನುರಾಗಮನಸ್ಕನಾರೇಣುಕನ ಕರೆತರಲು ||
ಸೇನೆಯೊಡವೆರೆದುಳಿದು ಪುರವನು |
ಕಾನನಾಂತವ ಸಾರ್ದು ಪಲವು ನ |
ದೀನದಂಗಳ ದಾಂಟಿ ಗಿರಿವನದುರ್ಗವರಸಿದನು ||೫||

ತೊಳಲಿ ನಾನಾಜನಪದಂಗಳ |
ಲಲಘುಮಹಿಮನ ಗುರುವ ಕಾಣದೆ |
ಯಲಸಿ ಪೊಕ್ಕನು ದೊರೆವಡೆದ ಕರ್ಣಾಟಜನಪದವ ||
ಬಳಿಯಮುತ್ತಲು ತವಸಿಗಳ ತಾ |
ಯ್ನೆಲೆಯೆನಿಸಿ ಮೆರೆದಿರ್ದ ಮಲಯಾ |
ಚಲವ ಸಾರ್ದನು ವಿವಿಧವಿಟಪಿಲತಾಮನೋಹರವ ||೬||

ತೊಳಪ ಚಂದನವೃಕ್ಷಮೂಲಂ |
ಗಳಲಿ ಚೆಲುವಿಂ ಬಗೆಗೊಳುತ್ತಿ |
ರ್ದ್ದಲೆವನೆಗಳೊಳಗೈದೆ ಪದ್ಮಾಸನವ ಕಲ್ಪಿಸುತೆ ||
ತಳೆದು ಜಡೆಗಳ ಧರಿಸಿ ಭಸ್ಮವ |
ವಿಲಸದಾಮ್ನಾಯಗಳ ಪಠಿಸುವ |
ಪಲಬರನು ಶಿವಲಿಂಗಶೋಭಿತಶೀರ್ಷರನು ಕಂಡ ||೭||

ಕೊರಲೊಳಗೆ ರುದ್ರಾಕ್ಷಸರವೊ |
ಪ್ಪಿರೆ ಸವಿದ್ದರ್ಭೆಗಳನಿರದಾ |
ಯ್ತರುವ ಶಿಷ್ಯಪ್ರತತಿಗುಪದೇಶಿಸುತೆ ಪರಶಿವನಾ ||
ಪರಮಪಂಚಾಕ್ಷರಿಯ ಮಂತ್ರವ |
ಮೆರೆಯುತಿರ್ದರು ಪಲರು ಸಂಯಮಿ |
ವರರು ಮಲಯಾದ್ರಿಯಲಿ ಶಿವಸುಖಮಗ್ನಮಾನಸರು ||೮||

ನಿಗ್ರಹಿಸುತಿಂದ್ರಿಯವಿತಾನವ |
ನುಗ್ರತಪವನು ಗೈದು ಶರ್ವನ |
ನುಗ್ರಹವನುರೆ ಪಾರುತಿರ್ದರು ಕೆಲರು ಮುನಿವರರು ||
ವ್ಯಗ್ರಮಾನಸರಾಗದೆಯೆ ನಾ |
ಸಾಗ್ರದಲಿ ನೆಲೆಗೊಳಿಸಿ ದಿಟ್ಟಿಯ |
ನುಗ್ರನಮಲಾನಂದದಲಿ ಮುಳುಗಿರ್ದರಿಂಕೆಲರು ||೯||

ಉಳಿದು ತಮ್ಮಯ ವೈರಭಾವವ |
ಪುಲಿಯುಮಾವುಂ ಹಯವು ಮಹಿಷವು |
ಮೊಲರುಣಿಯುಮಾನಕುಲನುಂ ಕೆಳೆತನದಿನೊಡವೆರೆದು ||
ನಲಿಯುತಿರೆ ಕಂಡದನು ಜನಪತಿ |
ಭಳಿರೆ ಈವಗೆಯಚ್ಚರಿಯ ನಾ |
ನಿಳೆಯೊಳೆಲ್ಲಿಯುಮರಿಯೆ ರೇಣುಕನಿತ್ತಲಿರವೇಳ್ಕುಂ ||೧೦||

ಎಲ್ಲಿ ರೇಣುಕನಿಹನೊ ಶಾಂತಿಯ |
ದಲ್ಲಿ ನೆಲಸಿಹುದೆಲ್ಲಿಹನೊ ಗುರು |
ವಲ್ಲಿ ಮಳೆಬೆಳೆ ಕುಂದದಹುದೀಮಾತು ಸಟೆಯಲ್ಲ ||
ಇಲ್ಲಿಹನು ಗುರುದೇವನೆನುತಲಿ |
ಮೆಲ್ಲನಲ್ಲಿಯೆ ತನ್ನ ಪಡೆಯನು |
ಬಲ್ಲಹರ ಬಲ್ಲಹನು ನಿಲಿಸುತಲೊರ್ವನೇ ನಡೆದಂ ||೧೧||

ವಿನಯಮಮಂ ಮೆರೆಯಿಸುತೆ ಬರುತಿಹ |
ಜನಪತಿಯ ಮುಖಭಾವವೀಕ್ಷಿಸಿ |
ಮುನಿಪನೊರ್ವನು ತೂಗೆ ತಲೆಯನು ಕಾಣುತದನರಸಂ ||
ಮನದೆ ತೀವಿರೆ ಭಕ್ತಿಯಾತನ |
ಸನಿಹದಲಿ ನೆಲೆ ನಿಂದು ಕರಯುಗ |
ವನು ಮುಗಿದು ಬಲವಂದು ಬಿನ್ನೈಸಿದನು ತಾನಿಂತು ||೧೨||

ಪಾರಿಕಾಂಕ್ಷಿಯೆ ನಿನ್ನ ಚರಣಕೆ |
ಸಾರಿ ನಮಿಸುವೆ ನಾನೆ ಚೋಳಧ |
ರಾರಮಣನರಸುತ್ತಲಿಹೆನೆಲೆ ರೇಣುಕಾಶ್ರಮವ ||
ತೋರಿ ನನಗದ ಸಲಹು ಕರುಣಾ |
ಪೂರಿತಾಂತಃಕರಣ ಎನೆ ನಲ |
ವೇರಿ ಮುನಿ ಸೊಲ್ಲಿಸಿದ ಸುಲಿಪಲ್ವೆಳಗು ತೊಳಗುತಿರೇ ||೧೩||

ಕುವರ ನಿನ್ನಯ ಮುಂಗಡೆಯೊಳೊ |
ಪ್ಪುವುದೆ ಕಣ ಗುರುರೇಣುಕಾಶ್ರಮು |
ಜವದೆ ನೀ ಪೋಗಲ್ಲಿ ಪೊಂದುವೆ ಗುರುವನುಗ್ರಹವ ||
ದಿವದ ಗುರು ಬೆಸಸಿರ್ಪ ತೆರದಲಿ |
ಬುವಿಯ ಗುರು ನಿನಗೊಲಿದಿಹನು ಕೇಳ್ |
ಸುವಿದಿತವು ರಾಜೇಂದ್ರನಿವಹದೆ ಸುಕೃತಿ ನೀನೆಂದ ||೧೪||

ಯುಮಿವರನ ಮಧುರೋಕ್ತಿಯಾಲಿಸಿ |
ನಮಿಸಿ ತತ್ಪದಯುಗಕೆ ನಲವಿಂ |
ಕ್ಷಮೆಯೊಡೆಯ ಪೊರಮಟ್ಟು ರೇಣುಕನೆಲೆವನೆಯನೈದಿ ||
ವಿಮಲಶೈವಸುಖೇಚ್ಛೆಯಿಂ ಸಂ |
ಭ್ರಮದೆ ಗುರುಶುಶ್ರೂಷೆಗೈವರ |
ಶಮಧನರ ತಂಡವನು ಕಂಡನು ಚಂಡಭುಜಬಲನು ||೧೫||

ಜಗಜಗಿಸೆ ಭಸ್ಮತ್ರಿಪುಂಡ್ರವು |
ಸೊಗಯಿಸಲು ರುದ್ರಾಕ್ಷಮಾಲೆಗ |
ಳಗಜೆಯರಸನ ಪೆಸರ ಪಠಿಸುತೆ ಧರಿಸಿ ಲಿಂಗವನು ||
ವಿಗತರಾಗರೆನಿಪ್ಪ ಪಲಬರು |
ಮಿಗೆ ಬಳಸಿ ದರ್ಭಾಸನಂಗಳೊ |
ಳಗೆ ವಿರಾಜಿಸುತಿರಲು ರೇಣುಕನೆಸೆದ ಮಧ್ಯದಲಿ ||೧೬||

ಕೆಲರು ಗದಿಸೆ ಶಿವಾಗಮಂಗಳ |
ಕೆಲರು ನಿಗಮಾರ್ಥಗಳ ವಚಿಸಲು |
ಕೆಲರು ಶೈವಾದ್ವೈತಸಿದ್ಧಾಂತವನು ಬಿತ್ತರಿಸೆ ||
ಕೆಲರು ಸಹಜಾನಂದವಿಭವವ |
ನೆಳಸಿ ಶುಶ್ರೂಷೆಯನೆಸಗುತಿರೆ |
ಸಲೆ ವಿರಾಜಿಸಿದನಲೆ ರೇಣುಕನವರ ಮಧ್ಯದಲಿ ||೧೭||

ಆರ ದರ್ಶನಮಾತ್ರದಿಂದಲಿ |
ದೂರಸರಿವುದೊ ದುಷ್ಕೃತಾವಳಿ |
ಯಾರನುಗ್ರಹದಿಂದೆ ಶಿವಕೈವಲ್ಯ ಲಭಿಸುವುದೋ ||
ಆರ ನಾಮಸ್ಮರಣೆಯಿಂ ಕೈ |
ಸೇರುವುದೊ ಕಾಮಿತಪರಂಪರೆ |
ಧಾರಿಣೀಗುರುವರನನಾರೇಣುಕನ ನೃಪ ಕಂಡಾ ||೧೮||

ಒಡನೆ ಕೈಗಳ ಮುಗಿದು ಭಕ್ತಿಯೊ |
ಳಡಿಗೆರಗಿ ಹರ್ಷಾಶ್ರುವದು ಕ |
ಣ್ಗಡೆಯೊಳುಣ್ಮಿರೆ ಪುಲಕಿತಾಂಗನು ಗದ್ಗದಧ್ವನಿಯಿಂ ||
ನುಡಿದ ಗುರುವೇ ನಿನ್ನ ಚೆಂದಳಿ |
ರಡಿಯ ಕಂಡುದರಿಂದ ಧನ್ಯತೆ |
ವಡೆದೆನಿಂದೇ ಸುದಿನವೆನ್ನಯ ಜನ್ಮಮೇ ಸಫಲಂ ||೧೯||

ಪಿರಿಯರಾಶೀರ್ವಚನಮಹಿಮೆಯೊ |
ಗುರುವೆ ನಿನಗೀಶಿಷ್ಯನೊಳಗಿ |
ರ್ಪರಕದತಿಶಯಮೆನಿಪ ಫಲಮೋ ಪೂರ್ವಜನ್ಮದೊಳಾಂ ||
ಇರದೆ ಸವೆದಾಸುಕೃತದೇಳ್ಗೆಯೊ |
ಧರೆಯೊಳೆಂತುಂ ಕಂಡೆ ನಿನ್ನಯ |
ಚರಣಯುಗವನನನ್ಯಸುಲಭವನಾನತೇಷ್ಟದವಂ ||೨೦||

ಘನಮಹಿಮ ಭವದೀಯನಾಮವ |
ನನಿಶಮುಂ ನೆನೆದರ್ಚಿಸಿದ ನಮ |
ಗನುಪನಿತ್ತೈ ಮಗುವ ಮತ್ಕುಲವಾರ್ಧಿಹಿಮಗುವ ನೀಂ ||
ಮನದಭೀಷ್ಟವ ಸಲಿಸಿದೈ ಪಾ |
ವನ ಮನೋಹರದಿವ್ಯಸುಂದರ |
ತನುವೆ ನಿನ್ನಯ ವೈಮೆಯನು ಪೊಗಳಲಿಕೆ ನನ್ನಳವೇಂ ||೨೧||

ಪಿಂದೆ ನಡೆದುದ ಮುಂದೆ ನಡೆವುದ |
ನಿಂದು ನಡೆಯುತಲಿಹುದನೆಲ್ಲವ |
ಚಂದದಿಂ ನೀಂ ಬಲ್ಲೆ ಪರಶಿವವದನಸಂಜಾತಾ ||
ಅಂದು ಸುರಗುರುವೆನ್ನಬಳಿಗೈ |
ತಂದು ಬೆಸಸಿದ ಬಗೆಯ ತಿಳಿದೈ |
ತಂದೆ ನಿಜನಂದನನ ಪೊರೆಯಲು ಕೃಪೆಯ ಮಾಡೆಂದ ||೨೨||

ಅರಸನಾಡಿದ ನುಡಿಯನಾಲಿಸಿ |
ಗುರುವರೇಣ್ಯನು ಸೊಲ್ಲಿಸಿದನೆಲೆ |
ಧರೆಯೆರೆಯ ಮೆಚ್ಚಿದೆನು ನಿನ್ನೀಪರಮಭಕ್ತಿಗೆ ನಾಂ ||
ತೆರಳು ಬಂದಪೆ ನಿನ್ನ ಪುರಕೆನೆ |
ಪರಮಹರ್ಷವ ತಳೆದು ಭೂಪತಿ |
ಭರದೆ ನಡೆದನು ಸೇನೆವೆರಸಿ ಪುರಾಭಿಮುಖನಾಗಿ ||೨೩||

ಪೊಳಲ ಸಿಂಗರಿಸಿದರು ಪೊಡವರ್ಾ* |
ತಳಿರ ತೋರಣದಿಂದೆ ಮನೆಮನೆ |
ಗಳಲಿ ಸಾರಣೆಕಾರಣೆಗಳೊಪ್ಪಿದುವು ಮಹಿಳೆಯರು ||
ಪಲದೊಡುವುಗಳ ತೊಟ್ಟು ನಲಿಯುತ |
ಲೆಳೆಯಮಕ್ಕಳಿಗಿಟ್ಟು ಪಸದನ |
ಗಳನು ಸಡಗರದಿಂದಲೆಡೆಯಾಡಿದರದೇನೊರೆವೇ ||೨೪||

ಕರಿತುರಗರಥಪತ್ತಿ ಕಡುಕೌ |
ವರೆಯೊಳ್ಳೈದಿತು ಪೊಳಲ ಬಾಗಿಲ |
ನಿರದೆ ಚಾಮರವಿಕ್ಕುವರು ಮೇಣ್ಕೊಡೆಯ ಪಿಡಿವವರು ||
ಬಿರುದನುಗ್ಗಡಿಸುವರು ಶಾಸ್ತ್ರ |
ಜ್ಞರು ಕವೀಂದ್ರರು ಗಾಯಕರು ಮ |
ಲ್ಲರುಮೆಸೆವ ಪರಿಹಾಸಕರುಮೊಪ್ಪಿದರದೇವೇಳ್ವೆಂ ||೨೫||

ಪರಿಜನಂಬೆರಸುತಲಿ ಜನಪತಿ |
ಗುರುವ ಬರವನು ಪಾರುತಲಿ ನಿಂ |
ದಿರೆ ನಭಃಸ್ಥಲದತ್ತ ಕಾಣಿಸಿದತ್ತಪೂರ್ವಮೆನೆ ||
ಮಿರುಗುವಾದ್ಯುತಿ ಬಳಿಯಮಲ್ಲಿಂ |
ಗುರುವರೇಣ್ಯನು ರೇಣುಕನು ಸಾ |
ರ್ತರುತಿಹುದನೀಕ್ಷಿಸುತ ನಲಿಯಿತು ನೃಪನ ಪರಿವಾರಂ ||೨೬||

ಒಡನೆ ಜಯಜಯಘೋಷಮುಣ್ಮಿತು |
ಪೊಡವಿಯೊಡೆಯನು ಕೈಮುಗಿದು ಬಲು |
ಸಡಗರದಿ ರೇಣುಕನನಂದಳದಲ್ಲಿ ಕುಳ್ಳಿರಿಸಿ ||
ಪಡೆಯುದೆಲ್ಲಂ ಬಳಸಿ ಮುಂಗಡೆ |
ನಡೆಯೆ ಮಂಗಳವಾದ್ಯ ಮೊಳಗಲು |
ತಢೆಯದರಮನೆಯತ್ತ ಬಿಜಯಂಗೈಸಿದನು ಗುರುವ ||೨೭||

ಇಳಿಸುತಂದಳದತ್ತಣಿಂ ಗುರು |
ತಿಲಕನನು ಕರೆದುಯ್ದು ನಿಜಗೃಹ |
ದೊಳಗೆ ಭದ್ರಾಸನದೆ ಮಂಡಿಸೆ ಬಿನ್ನವಿಸಿ ಮುದದೆ ||
ಲಲನೆವೆರಸುತೆ ಭಕ್ತಿಭರದಿಂ |
ತಲೆಯ ಬಾಗಿಸಿ ಗುರುವರನ ಪದ |
ನಳಿನಗಳನರ್ಚಿಸಿದನಲೆ ವಿಧ್ಯುಕ್ತರೀತಿಯಲಿ ||೨೮||

ತಳೆದು ತಚ್ಚರಣಾಂಬುವನು ತಲೆ |
ಯೊಳಗೆ ಕರೆತಂದಾತ್ಮಭವನನು |
ಮಲಗಿಸುತೆ ರೇಣುಕನ ಪದಸರಸೀರುಹಂಗಳಲಿ ||
ಎಲೆಗುರೂತ್ತಮ ಪರಸುವುದು ನೀ |
ನೆಳೆಯನನು ನಿನ್ನೊಲವಿನೀಮುಗು |
ನೆಲದೆ ಬಾಳಲಿ ಎಂದರಾದಂಪತಿಗಳರ್ಥಿಯಲಿ ||೨೯||

ಲೋಕಗುರು ನಿಜಕರದೆ ಕೂಸನು |
ಸೋಕಿದನು ಕೃಪೆಗೂಡಿ ತಾನಾ |
ಲೋಕಿಸುತ್ತಲಿ ಮಗುವಿನಂಗೋಪಾಂಗದಂದವನು ||
ಲೋಕಕಿವನಧಿನಾಥನೆನಿಸುವ |
ನಾಕಪರ್ದಿಯ ಚರಣಭಕ್ತ್ಯತಿ |
ರೇಕವಿವನಲಿ ಮೆರೆಯಲೀತ ಚಿರಾಯುವಹನೆಂದಂ ||೩೦||

ಗುರುವರಾಶೀರ್ವಚನವಮೃತವ |
ನೆರೆದವೊಲ್ ಕಿವಿಗೀಯೆ ನಲಿವನು |
ನರಪನುಂ ತತ್ಸತಿಯುಮತಿಸಂಭ್ರಮದೆ ರೇಣುಕನಾ ||
ಚರಣಕೆರಗಿದರಡಿಗಡಿಗೆ ವೈ |
ಮರೆದು ಪೊಗರೇರಿದರು ಪೊಗಳಿದ |
ರರಿಯೆನವರಾಭಾಗ್ಯಕೆಣೆಯನು ಭುವನದಲಿ ಭಳಿರೇ ||೩೧||

ತನ್ನ ಭಕ್ತರ ಬಯ್ಕೆಗಳ ಸಲಿ |
ಪುನ್ನತದ ಬಿರುದಾಂತ ರೇಣುಕ |
ಬಾನ್ನವಿರನಾಣತಿಯನೊಡರಿಪ ಬಗೆಯಿನಾಬಳಿಕ ||
ತನ್ನೃಪಾಲನೊಳೊರೆದನರಸಾ |
ನಿನ್ನ ನಾಡುಂ ನಿನ್ನ ಬೀಡುಂ |
ನಿನ್ನ ಸತಿಯುಂ ನಿನ್ನ ಮತಿಯುಂ ಪಾವನಂಗಳಲಾ ||೩೨||

ನೀನೆ ಧನ್ಯನು ರಾಜಕುಲದಲಿ |
ನೀನೆ ಮಾನ್ಯನು ಭಕ್ತನಿಕರದೆ |
ನೀನೆ ಗಿರಿಜಾಕಾಂತವಿಮಲಕಟಾಕ್ಷಪಾತ್ರನು ಕೇಳ್ ||
ನೀನೆ ಮತ್ಪ್ರಿಯಶಿಷ್ಯನದರಿಂ |
ದೀನರನು ಧರ್ಮದಲಿ ಸಲಹೈ |
ದಾನಿಯೆನಿಸೈ ಶೈವಸುಖಸಾಮ್ರಾಜ್ಯ ನಿನಗಹುದು ||೩೩||

ಎನೆ ಹಸಾದವೆನುತ್ತೆ ವಂದಿಸಿ |
ವನಿತೆಯೊಡನಾನಂದದಿಂ ನಿಜ |
ತನುಭವನ ತಕ್ಕೈಸಿ ಪದಯುಗಕೆರಗಿ ನಿಂದಿರ್ದಾ ||
ವಿನಯಪರಜನಪತಿಯ ರೇಣುಕ |
ಮನವೊಲಿದು ಪರಸುತಲಿ ಗರಪುರ |
ದಿನಿಯನಾಣತಿಯೊಡರಿಸಲಿಕೆಂದಿರದೆ ಮೈಗರೆದಂ ||೩೪||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಹದಿನೇಳನೆಯ ಸಂಧಿ.

ಸೂ॥ ಭುವನಗುರು ನಿಜಪಾಣಿತಲದಿಂ |
ದವನಿಯನು ನೆರೆ ಸೋಂಕಲಾವಿ |
ರ್ಭವಿಸಿದನು ರುದ್ರಮುನಿಯೇಕಾಮ್ರೇಶನಾಲಯದೆ ||

ಆನಿರೀಹಜಗದ್ಗುರುವು ಕಾಂ |
ಚೀನಗರದೇಕಾಮ್ರನಾಥನು |
ಹಾನಿಲಯವೈದುತಲಿ ಲಿಂಗಾನಂದವೈಭವದೇ ||
ಲೀನಮಾನಸನಾಗಿ ಮೆರೆದಿರ |
ಲೇನ ಬಣ್ಣಿಪೆ ಪರಮಭಕ್ತಾವಿ |
ತಾನಮಲ್ಲಿಗೆ ಪಗಲುಮಿರುಳುಂ ಬಂದು ಮರಳುವುದು ||೧||

ಚರಣಕೆರಗಿದ ಭಕ್ತರನು ಕ |
ಟ್ಟೆರಕದಲಿ ರೇಣುಕನು ಪಾವನ |
ಕರತಲದೆ ನೇವರಿಸಲವರಾಪೂರ್ವದುಷ್ಕೃತವು ||
ಉರಿದು ಪೋದುದದೊಂದು ತೇಜವು |
ಪರಿದು ಬೆಳಗಿತ್ತೆಳಸಿದರ್ಥವು |
ಕರವಶವು ತಾನಾಯ್ತುದೆಂತುಟೊ ಮೈಮೆ ಗುರುವರನ ||೨||

ಗುರುವಿನಡಿದಾವರೆಗೆ ನಮಿಸಿದ |
ಕುರುಡ ಕಣ್ಗಳ ಪಡೆದ ಮೂಗನು |
ಭರದೆ ನುಡಿಗುಡಲಾರ್ತ ಕುಂಟನು ನಡೆಯೆ ತೊಡಗಿದನು ||
ಕರವಿಹೀನನು ಪಡೆದ ಕರಗಳ |
ನರರೆ ಬಡವನು ಸಿರಿಯ ಪೊಂದಿದ |
ನಿರದೆ ಬಂಜೆಯು ಪುತ್ರವತಿಯೆನಿಸಿದಳು ಚಿತ್ರಮೆನೆ ||೩||

ರೋಗಿಯಾರೋಗ್ಯವನು ತಳೆದ ವಿ |
ಯೋಗಿಯಿಷ್ಟಜನಂಗಳಾ ಸಂ |
ಯೋಗವನು ಪೊಂದಿದನು ದುಃಖಿಯು ಪರಮಸುಖಿಯಾದಂ ||
ನೀಗಿದುದು ಮನದಳಲು ಸಲೆತಲೆ |
ಬಾಗಿದಾಕ್ಷಣ ಭಜಿಸಿದಾಶರ |
ಣಾಗತನು ಕೈವಲ್ಯಮಾಂತನು ಗುರುವಿನೊಲವಿನಲಿ ||೪||

ಅಳುತೆ ಬಂದವರೆಲ್ಲ ನಗುತಲಿ |
ತಳರ್ದ*ರದ ಕಂಡವರು ನುಡಿಯಲು |
ಪೊಳಲ ಮಂದಿಯು ನಾನುತಾನೆಂದೆನುತೆ ಪೊರಮಟ್ಟು ||
ಬಳಸಿ ನಿಲುತಲಿ ಗುರುವನರ್ಚಿಸು |
ತೆಳಪ ಪಡೆದುದು ಸತತವಿಾಪರಿ |
ತೊಳಗಿತೇಕಾಮ್ರೇಶಸದನಂ ಧರೆಯೊಳಸಮಾನಂ ||೫||

ಭೂತಪತಿಯಾಣತಿಯನೊಡರಿಸು |
ತೀತೆರದೊಳುದ್ಧರಿಸಿ ಭಕ್ತರ |
ಪೂತಚರಿತನು ಕಳೆದನೀರೇಳ್ನೂರುಬರಿಸಗಳಂ ||
ಓತು ಶಿವಮತತತ್ತ್ವಸಾರವ |
ಭೂತಲದೆ ಮೆರೆಯಿಸಲು ಸಲೆ ಬ |
ಲ್ಲಾತನನು ನಿಜಧರ್ಮಪೀಠದೆ ನಿಲಿಸೆ ಗುರು ಬಗೆದಂ ||೬||

ಮನಸಿಜಾರಿಯ ದಿವ್ಯಪದಯುಗ |
ವನಜವನು ಭಕ್ತ್ಯತಿಶಯದೆ ಗುರು |
ನೆನೆದು ಕಣ್ದೆರೆಬಿಗಿದು ಕೈಗಳ ಮುಗಿದು ಪುರಹರನೇ ||
ಚಿನುಮಯನೆ ನಿನ್ನಾಜ್ಞೆಯನು ಮೇ |
ದಿನಿಯೊಳೊಡರಿಸಲುಜ್ಜುಗಿಸಿದೆನ |
ಗನುವರಿದು ಸಾಹಾಯ್ಯಮೆಸಗೈ ಎಂದು ಬೇಡಿದನು ||೭||

ಕರೆವ ಕರುವಿನ ಬಳಿಗೆ ತಾಯದು |
ಭರದೆ ಬರ್ಪವೊಲಾಕ್ಷಣಂ ಪುರ |
ಹರನು ರೇಣುಕಗೈದೆ ವ್ಯೆದೋರುತಲಿ ಸೊಲ್ಲಿಸಿದಂ ||
ತರಳ ನಿನ್ನೆಸಕಕ್ಕೆ ನೆಲನೊಳ |
ಗರುಹನೆನಿಪನನೊರ್ವನಂ ನೀಂ |
ಧರೆಯ ಗರ್ಭದೆ ಪಡೆವೆ ಚಿಂತಿಸಬೇಡ ನೀನೆಂದು ||೮||

ಅವಗೆ ಪೆಸರಿಡು ರುದ್ರಮುನಿಯೆಂ |
ದವನಿಯೊಳಗಾಸ್ತಿಕ್ಯಮಾರ್ಗವ |
ನವನೆ ಪಾಲಿಪನವನೆ ಪರವಾದಿಗಳ ಭಂಗಿಸುವಂ ||
ಪ್ರವಿದಿತನು ತಾನಹನು ನಲಿದೇ |
ರುವನು ನಿನ್ನಯ ಧರ್ಮಪೀಠವ |
ಸವನಿಪುದು ನಿನ್ನೆಳಪು ಬಳಿಕೈತಹುದು ನನ್ನೆಡೆಗೇ ||೯||

ಎನುತೊರೆದು ವ್ಯೆಗರೆಯೆ ನಿಟಲಾ |
ಕ್ಷನು ಕಡಂಗುತೆ ರೇಣುಕನು ನಿಜ |
ಮನದೆ ಶಾಂತಿಯ ತಾಳ್ದು ತೇಕಾಮ್ರೇಶವಿಗ್ರಹದ ||
ಸನಿಹದಲಿ ಕುಳ್ಳಿರ್ದು ಶರ್ವನ |
ನೆನೆದು ಸೋಂಕಲು ನೆಲವನಿರದಾ |
ಯ್ಕನೆ ಮಹಾದ್ಯುತಿಯೊಂದು ಪೊರಪೊಣ್ಮಿತ್ತು ನೆಲಬಿರಿಯೆ ||೧೦||

ಆದರ ನಡುವೆ ಬೆಡಂಗ ಬೀರುವ |
ಬಿದುವೊಗದ ತಳಿರಡಿಯ ತೊಳಗುವ |
ರದನಪಂಕ್ತಿಯ ಬಟ್ಟದೊಡೆಗಳ ಚೆಲ್ವನಾಸಿಕದ ||
ಅದುಬುತದ ನಲ್ಬೊಗರ ಕನ್ನಡಿ |
ಗದಪಿನೊಪ್ಪುವ ಮುದ್ದುಗೂಸೊಂ |
ದುದಯಿಸಿತ್ತದ ಕಂಡು ರೇಣುಕನಾಂತ ಸಂಮುದವಂ ||೧೧||



ಶ್ರೀ ರೇಣುಕಾಚಾರ್ಯರು ಭೂಮಿಯನ್ನು ಸ್ಪರ್ಶಮಾಡಲು ರುದ್ರಮುನಿ
ಶಿವಾಚಾರ್ಯರು ಭೂಗರ್ಭದಿಂದವತರಿಸುವುದು.

ಜಗಜಗಿಸೆ ಪಣೆಯೊಳಗೆ ಭಸ್ಮವು |
ಸೊಗಯಿಸಲು ಕೊರಲೊಳಗೆ ರುದ್ರಾ |
ಕ್ಷಗಳ ಸರವದು ಕನಕದೀಪ್ತಿಯ ಜಡೆಗಳೊಪ್ಪಿರಲು ||
ಬಗೆಗೊಳಿಸೆ ಮಸ್ತಕದೆ ಲಿಂಗವು |
ಪಗಲೆರೆಯುನನು ಪಳಿವ ಪೊಗರದು |
ಮಿಗಿಲೆನಿಸಿ ಬಿಸವಂದಮುಣ್ಮೆಸೆ ಮಗುವು ಚೆಲ್ವಾಯ್ತು ||೧೨||

ಅಮರಿಯರು ಸುರಪಥದೆ ನರ್ತಿಸೆ |
ಸುಮದ ವೃಷ್ಟಿಯು ಕರೆಯಲನಿಮಿಷ |
ರಮಲತೆಯನೆಣ್ದೆಸೆಯುಮಾಂತಿರೆ ತೀಡೆ ಮೆಲ್ಲೆಲರು ||
ಅಮರ್ದಿ*ರಲು ಶುಭಲಗ್ನತಾರೆಗ |
ಳಮಿತಮಹಿಮಾನ್ವಿತನು ಗುರು ಸಂ |
ಭ್ರಮದೆ ಶಿಶುವನು ರುದ್ರಮುನಿದೇವಾಖ್ಯೆಯಿಂ ಕರೆದಂ ||೧೩||

ಮಹಿಳೆಯೊಡನಾರಾಣಿವಾಸದೆ |
ವಿಹರಿಸುತೆ ನಿಜತನಯಲೀಲಾ |
ಪಹೃತಮನನಾಗಿರ್ದ ಚೋಳಧರೇಂದ್ರನದ ಕೇಳಿ ||
ಅಹಹ ಮದ್ಗುರುವರ್ಯರೇಣುಕ |
ಮಹಿಮೆ ಕಡುವಿರಿದೆಂದು ಪುರಜನ |
ಸಹಿತವಾಚರಿಸಿದನು ಜನ್ಮೋತ್ಸವವ ಸಂಭ್ರಮದೆ ||೧೪||

ಪಸರಿಸುತ್ತಿರೆ ರುದ್ರಮುನಿಯುದ |
ಯಿಸಿದ ಮಂಗಳವಾರ್ತೆಯೆತ್ತಂ |
ದೆಸೆದೆಸೆಯ ಜನವೆಲ್ಲ ಕಾಂಚೀಪುರಕೆ ನಡೆತಂದು ||
ಅಸದಳದ ಭಕ್ತಿಯಲಿ ತಾವೀ |
ಕ್ಷಿಸುತೆ ಮರಳುತಲಿರ್ದುದದನೇ |
ನುಸಿರ್ವೆ* ಪೊಳಲೊಳಗೆಲ್ಲ ಮಂದಿಯ ನೂಕುನುಗ್ಗಾಯ್ತು ||೧೫||

ಅಳುವ ಕೂಸಿಗೆ ಪಾಲನೂಡದೆ |
ತೊಳಲಿ ಬಂದಿನಿಯರನು ಗಣಿಸದೆ |
ಯುಳಿದು ಮನೆಗೆಲಸಗಳನೋರಗೆಯವರ ಕೂಡುತಲಿ ||
ಲಲನೆಯರು ರುದ್ರಮುನಿಯಿಕ್ಷಿಸು |
ವೆಳಪಿನಿಂದೋಡುತಿರೆ ತತ್ಪತಿ |
ಗಳುಮವರ ಪಿಂದಳೆದು ಪಾರುತಲಿರ್ದರೇವೊರೆವೆ ||೧೬||

ತೊರೆದು ಕೊಳ್ಕೊಡೆಗಳನು ಪರದರು |
ತೆರೆಯದಂಗಡಿಸಾಲೆಗಳನೈ |
ತರುತಲಿರ್ದರು ರುದ್ರಮುನಿಸಂದರ್ಶನೋತ್ಸುಕರು ||
ಪುರದೊಳಿರ್ದಾಬಾಲವೃದ್ಧರು |
ಭರದೊಳೇಕಾವ್ರೇಶಭವನದ |
ಪರಿಸರಕೆ ಸಾರ್ತಂದು ನಿಂದರು ಪೇಳಲೇನದನು ||೧೭||

ಕೆಲರು ಕೈಮುಗಿಯುತ್ತೆ ನುತಿಸಲು |
ಕೆಲರು ಹರಕೆಯನೊಪ್ಪಿಸುತ್ತಿರೆ |
ಕೆಲರು ತಂದರ್ಪಿಸಲು ನಾನಾಭರಣವಸನಗಳಂ ||
ಕೆಲರು ಕಾಣ್ಕೆಯ ತಂದು ನೀಡಲು |
ಫಲಸುಮಾದಿಯ ರಾಶಿ ಬಿಳ್ದುದು |
ಕೆಲಬಲದೆ ಸೊಗಯಿಸುವ ಪರ್ವತದಂತೆ ಗುರುವರನಾ ||೧೮||

ಮರಳದಲ್ಲಿಯೆ ನೆಲಸುತಿಹ ನಾ |
ಗರಕರನು ಗುರುವೀಕ್ಷಿಸುತ್ತಲಿ |
ಹರಿಸಮಂ ತಾಳ್ದವರ ಭಕ್ತಿಗೆ ಮೆಚ್ಚಿ ತಲೆದೂಗಿ ||
ಪರಸುತಿತ್ತನು ಸಕಲವಸ್ತು |
ತ್ಕರವ ದೀನಾವಳಿಗೆ ಕಾಂಚೀ |
ಪುರವನಾದಾರಿದ್ರ್ಯವಧುವುಳಿದೊಯ್ಯನೋಡಿದಳು ||೧೯||

ತೆರಪಗುಡದೆಯೆ ಪಗಲಿರುಳುವಿೂ |
ತೆರದೆ ಸಂದಣಿಸಿರ್ದ ಮಂದಿಯ |
ಪರಿಹರಿಸಲಾರದೆಯೆ ರೇಣುಕ ಮನದೆ ಚಿಂತಿಸುತೆ ||
ಗರಪುರಾಧಿಪನಾಣತಿಯಿನಾ |
ತರಳನೊಡವೆರೆದಾರುಮರಿಯದ |
ಪರಿಯಿನಲ್ಲಿಂ ಮಲಯಭೂಧರಕಾಗಿ ಸಾರಿದನು ||೨೦||

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಹದಿನೆಂಟನೆಯ ಸಂಧಿ.

ಸೂ|| ಆರುಹಿ ಶಿವತತ್ತ್ವಾರ್ಥಮುಖ್ಯವ |
ಗುರುವರನು ರುದ್ರಮುನಿದೇವಗೆ |
ವಿರಚಿಸಿದ ಪಟ್ಟಾಭಿಷೇಕವನಾತ್ಮಪೀಠದಲಿ ||

ಮಲಯಭೂವಿೂಧರದೆ ರೇಣುಕ |
ನೆಲೆವನೆಯೊಳಚ್ಚರಿಯನುಣ್ಮಿಸಿ |
ಒಳೆಯುತಿರ್ದಾರುದ್ರಮುನಿದೇವನ ಚರಿತ್ರೆಯನು ||
ತಿಳಿಯೆ ವರ್ಣಿಸೆ ತಿಳಿಪೆ ಮಾನವ |
ಗಳವೆ ನಿರ್ಮಲತತ್ತ್ವಬೋಧೆಯಿ |
ನಿಳೆಯನುದ್ಧರಿಸಲ್ಕೆ ಮೂಡಿದ ದಿವ್ಯವಿಗ್ರಹನಾ ||೧||

ಶಿವನ ಲೀಲಾವಳಿಯ ವರ್ಣನೆ |
ಯವಗೆ ನೋಡೆ ವಿನೋದಕಥನವು |
ಶಿವನ ನಾಮವ ಪಾಡುತಿಹುದೇ ನಿತ್ಯಕರ್ಮವಲಾ ||
ಸುವಿದಿತದ ಲಿಂಗಾಂಗತತ್ತ್ವವ |
ವಿವರಿಸುವುದೆಸೆವಾಟವೆನಿಸಿರ |
ಲವಗೆ ಕಲಿಸದೆ ನಾಲ್ಕುವೇದಮುವಾಯ್ತು ಕರವಶವು ||೨||

ಬಲ್ಲನಾವೇದಾಂಗಗಳನವ |
ಬಲ್ಲನಖಿಲಾಗಮಗಳನು ತಾ |
ಬಲ್ಲನಂತಾದರೆಯು ಲೋಕದ ಮುಂದಿಗೆಸಪಂತೆ ||
ಬಲ್ಲ ಗುರುವುಪದೇಶಿಸಿದನವ |
ಗೆಲ್ಲ ತತ್ತ್ವಾರ್ಥವನು ವಸುಮತಿ |
ಯಲ್ಲಿ ಮೆರೆಯಿಸೆ ಗುರುವ ಶಿಷ್ಯನ ಧರ್ಮದೆಸಕವನು ||೩||

ಕುವರ ನೀಂ ಶಿವನಂಶದೊಗೆದಿಹೆ |
ಶಿವನೊಳೇ ಭವದೀಯಮಾನಸ |
ಮವಿರತವು ನೆಲಸಿಹುದು ವಾರಿಜವನದೊಳಂಚೆವೊಲು ||
ಶಿವನ ಜಾನಿಪೆ ಶಿವನ ಪೂಜಿಪೆ |
ಶಿವನ ಯೋಗದೆ ವಿಹರಿಸುತ್ತಿಹೆ |
ಶಿವನ ತತ್ತ್ವವನೊರೆವೆನಾದೊಡವಿಂದು ನಿನಗೆಂದಂ ||೪||

ಆದನು ಕೇಳಿದು ರುದ್ರಮುನಿ ಗುರು |
ಪದಕೆರಗಿ ಗುರುದೇವ ಕತ್ತುರಿ |
ಯಿದಿರೊಳಗಿಲೇಂ ಬಗೆಗೊಳಿಸುವುದೆ ಕಮಲಬಾಂಧವನ ||
ಕದಿರಮುಂಗಡೆ ದೀವಿಗೆಯೆ ಪೇ |
ಳೊದವಿದೀ ಭವದೀಯಸಾನ್ನಿ |
ಧ್ಯದ ಮಹಿಮೆಯಿಂ ಪಡೆದೆನಕ್ಕುಂ ಗುಣಲವಮನೊಡೆಯ ||೫||

ಗುರುವೆ ನೀನೊಸೆಯದಿರೆ ಮೌಢ್ಯವು |
ಪರಿಯದೈ ಜ್ಞಾನಾಕ್ಷಿಯೆವೆಯದು |
ತೆರೆಯದೈ ನಿಗಮೋಕ್ತಿಜಾಲವು ಕೀರವಚವಹುದೈ ||
ಬರಿದೆನಿಪುದಖಿಲಪ್ರಯತ್ನವು |
ಗುರುವೆ ನೀನುಪದೇಶಮಿತ್ತೀ |
ತರಳನನು ಪೊರೆಯೆಂದು ರೇಣುಕಗೊರೆದ ರುದ್ರಮುನಿ ||೬||

ಬುವಿಗೆ ಭಾಗ್ಯೋದಯದ ಸಮಯವು |
ಸವನಿಸಿರೆ ಶುಭಲಗ್ನಮಿದುವೇ |
ನವಗೆನುತೆ ರೇಣುಕನು ತಾಂ ವಿಧ್ಯುಕ್ತರೀತಿಯಲಿ ||
ಜವದೆ ಶಿವದೀಕ್ಷೋಪನಯನವ |
ಸವೆಯುತಷ್ಟಾವರಣರೂಪವ |
ಶಿವನ ತತ್ತ್ವವನೈದೆ ಬೋಧಿಸಿದನು ಸುಸಂಭ್ರಮದೆ ||೭||

ವರಯಜುರ್ವೇದವದು ವೇದನಿ |
ಕರದೆ ಮಿಗಿಲದರಲ್ಲಿ ರುದ್ರವು |
ಪರಮಪಂಚಾಕ್ಷರಿಯದದರಲಿ ಮಿಗಿಲು ಭಾವಿಸಲು ||
ಮೆರೆವ ದೇವತೆಗಳಲಿ ನಾಲ್ಮೊಗ |
ನುರುಮಿಗಿಲು ಹರಿಯವಗೆ ಮಿಗಿಲೈ |
ತರಳ ಮಿಗಿಲೈ ರುದ್ರನೆಲ್ಲರ್ಗರಿಯ ನೀನಿದನು ||೮||

ಜಗದೊಳೀತತ್ತ್ವವನು ಶಿಷ್ಯಗೆ |
ಬಗೆವುಗಲು ಬೋಧಿಸುವ ಗುರುವೇ |
ಮಿಗಿಲು ಭವಭಯಹಾರಕನು ಮಿಗಿಲಿಲ್ಲವಿನ್ನವಗೆ ||
ಸೊಗಸಿನುಪನಿಷದಂತರಾರ್ಥವು |
ನೆಗಳ್ದಿ*ಹುದು ಮಾಂಡೂಕ್ಯಮರಿಯೈ |
ಮಗುವೆ ಕೈವಲ್ಯವನು ಪಡೆಯಲಿಕೆಸೆವ ಪಥವಿದುವೇ ||೯||

ಉಳಿದು ತನ್ನಸಮೀಕ್ಷಣತ್ವವ |
ನುಳಿದು ಮೇಣ್ ಗಂಗಾಧರತ್ವವ |
ನುಳಿಯುತಲಿ ಶಶಿಶೇಖರತ್ವವ ನೋಳ್ಪವರ್ಗಾದಂ ||
ಉಳಿದು ನೀಲಗಳತ್ವವನು ಶಿವ |
ತೊಳಪನಲೆ ಗುರುರೂಪಿಯುದ್ಧರಿ |
ಸಲಿಕೆ ಬಳಿಸಾರ್ದಿಹ ಮುಮುಕ್ಷುಪ್ರಕರವನು ನಲಿದು ||೧೦||

ಆದರಿನಾಬ್ರಹ್ಮಸ್ವರೂಪನ |
ಪದಪಿನಾಶ್ರಯಿಸುತ್ತೆ ಮುಕ್ತಿಯ |
ಪದವ ಪೊಂದುವುದಲ್ತೆ ಸನ್ಮತವದುವೆ ವಿಧಿವಿಹಿತಂ ||
ಚದುರ ಕೇಳಿನಶಶಿಗಳಿಲ್ಲದೆ |
ಸದಸದೌಚಿತ್ಯವದು ಕಾಣಿಸ |
ದೊದವೆ ಕಳ್ತಲೆಯೆಸೆವುದೊಂದೇ ಪರಶಿವಬ್ರಹ್ಮಂ ||೧೧||

ಮೆರೆವುದದು ತಾಂ ಸ್ವಪ್ರಕಾಶಂ |
ಪರಮಚಿದಚಿಚ್ಛಕ್ತಿಯುತಮೆನ |
ಲರಿವು ಮೂಡುವುದದರೊಳಾಗಳ್ ಪರಶಿವಬ್ರಹ್ಮಂ ||
ಭರದೆ ಸಂಕಲ್ಪಿಪುದು ಸೃಷ್ಟಿಸ |
ಲರರೆ ನಿರ್ಮಿಪುದೀಪ್ರಪಂಚವ |
ನಿರದೆ ಪುಗುವುದು ಸೂಕ್ಷ್ಮರೂಪದಿನಾಜಡಾಜಡವ ||೧೨||

ಕಿರಿದೆನಿಪ ವಟಬೀಜವಾರಯೆ |
ಧರಣಿಯಂಬುಗಳೊಡವೆರೆದು ಮೇಣ್ |
ಪಿರಿದೆನಿಪ ಮರನೆನಿಸುವಂದದಿ ನಾಡೆ ಚೆಂಬೊನ್ನುಂ ||
ಪರಿಪರಿಯ ತೊಡವೆನಿಸುವಂದದಿ |
ಪರಶಿವಬ್ರಹ್ಮಮದು ರಾಜಿಪು |
ದುರುವಿಮರ್ಶನಶಕ್ತಿವಿಕಸನದಾಂಪುದೈ ಮಾರ್ಸಂ ||೧೩||

ನಾಮರೂಪಕ್ರಿಯೆಗಳದಕೀ |
ಭೂಮಿಯೊಳಗೆಸೆದಪುವು ಭಾವಿಸ |
ಲಾಮಯೂರಾಂಡರಸವಿಲಸನ್ನ್ಯಾಯದಿಂದೆಂದುಂ ||
ಸೌಮನಸ್ಯದಿ ಲಾಲಿಸೈ ಮತ್ |
ಪ್ರೇಮಸುತ ಸೂಕ್ಷ್ಮಪ್ರಪಂಚವು |
ಮಾಮಸಕದಿಂ ಸ್ಥೂಲಮಿಚ್ಛಾಶಕ್ತಿಯಿಂದಕ್ಕುಂ ||೧೪||

ಒಮ್ಮೆ ಪರಮಾತುಮನು ಸೃಷ್ಟಿಪ |
ನೊಮ್ಮೆ ವಿಲಯಂಗೈವನಿಚ್ಛೆಯು |
ಹಮ್ಮಿನಿಂ ಸಚರಾಚರಾತ್ಮಕವೆನಿಪ ಲೋಕವನು ||
ಕೆಮ್ಮನದೆ ಕಾರಣದಿ ಸತ್ಯವು |
ಸಮ್ಮತವು-ಕಾರ್ಯದೊಳಸತ್ಯವು |
ಹೆಮ್ಮೆಯಿಂ ಕೈಗೊಳಲು ಸತ್ಯವ ಸುಖವು ಸವನಿಪುದು ||೧೫||

ಚಾರುಶಕ್ತಿವಿಶಿಷ್ಟಮೆನಿಸುವ |
ಸಾರತರಮದ್ವೈತಮದರಿಂ |
ಧಾರಿಣಿಯೊಳಿದನರಿಯ ಚಿದಚಿಚ್ಛಕ್ತಿಗಳ್ ಶಿವನೊಳ್ ||
ತೋರುತಿರ್ಪುವು ಸೂಕ್ಷ್ಮದಲಿ ಪೊಗ |
ರೇರುತಂ ಸ್ಥೂಲದಲಿ ಜೀವನೊ |
ಳಾರಯಲ್ ಸ್ಥಿರಮನದೆ ನೀನಿದ ಲಾಲಿಸೈ ವತ್ಸಾ ||೧೬||

ಅರಿಯಲಿವರಿಂ ಕೂಡಿ ತೊಳಗುವ |
ಪರಶಿವಬ್ರಹ್ಮವು ವಿಭಾವಿಸೆ |
ಮೆರೆವ ಜೀವನು ತಾವ್ ವಿಶಿಷ್ಟರು ಭೇದಮವರ್ಗ*ಲ್ಲಂ ||
ಪರಮತತ್ತ್ವವನಿದನು ನೀನವ |
ಧರಿಸು ಕುವರಾ ಲೋಕಕೆಲ್ಲಕು |
ಮಿರದರಿಪು ಬಿತ್ತರಿಪೆನಷ್ಟಾವರಣತತ್ತ್ವವನು ||೧೭||

ಚಂದದಲಿ ನಿಜಪೀಠದೆಡೆಗೈ |
ತಂದ ಶಿಷ್ಯರನ್ನೈದೆ ಮನ್ನಿಸಿ |
ಸಂದೆಗವ ಪರಿಹರಿಸಿ ಶಿವಸಿದ್ಧಾಂತತತ್ತ್ವದಲಿ ||
ಎಂದುವಮಾರಾಧಿಸುತೆ ಲಿಂಗವ |
ನಂದದಿಂ ಶಿಷ್ಯರನು ಪೊರೆವನೆ |
ಸಂದ ಗುರುವವಗಿಳೆಯೊಳಧಿಕರನರಿಯೆನಾನೆಂದಂ ||೧೮||

ಐದೆ ಕಂಗೊಳಿಸುವ ಚರಾಚರ |
ಮಾದ ಜಗಮಿದು ಲಯಮನಾವೆಡೆ |
ಯೈದುವುದೊ ಮೇಣ್ ಮತ್ತೆಮತ್ತಾವೆಡೆಯೊಳಾರಯಲು ||
ಆದವೊಗೆವುದೊ ಜಗವು ಶಾಶ್ವತ |
ಮಾದ ಬೊಮ್ಮವು ಲಿಂಗವದುವೇ |
ಸಾದರದೆ ಕೇಳೊರೆವೆ ಜಂಗಮತತ್ತ್ವವನು ಮಗುವೇ ||೧೯||

ಗುರುಕುಲೋದ್ಭವನಾಗಿ ಗೋತ್ರದ |
ಗುರುವಿನುಪನಯನವನು ಪಡೆದಾ |
ದರದೆ ದೀಕ್ಷೆಯನಾಂತು ಪೊಂದುತೆ ಪಂಚಮುದ್ರೆಗಳ ||
ನೆರೆ ಗೆಲಿದು ಕಾಮಾದಿರಿಪುಗಳ |
ಸರುವಲೋಕವ ಲಿಂಗಮಯಮೆನೆ |
ನಿರುಕಿಸುತೆ ಮೇಣ್ ಸ್ವಸ್ವರೂಪದೆ ಶಿವನ ತಿಳಿಯುತಲಿ ||೨೦||

ನೆಲದೆ ಶಿಷ್ಯೋದ್ಧರಣಕಾಗಿಯೆ |
ತಳೆದು ಚರಪಟ್ಟಾಧಿಕಾರವ |
ನಲಸದಾಚರಿಸುತ್ತೆ ದಂಡನಖಂಡನಾದಿಗಳ ||
ನೆಲನರಿಯೆ ಶರಣಾಳಿಯನು ಸಲೆ |
ಸಲಹುವಾತನೆ ಚರನೆನಿಪ್ಪನು |
ನಲವನೀವನು ಶುಭವನೆಳಸುವನಖಿಲಲೋಕಕ್ಕೆ ||೨೧||

ಗುರುವೆ ಶಿವನಾಸಕಲರೂಪನು |
ಚರನು ನಿಷ್ಕಲರೂಪನೆನಿಪನು |
ತರಳ ಕೇಳ್ ನೆರೆ ಮೆರೆವ ಲಿಂಗವು ಸಕಲನಿಷ್ಕಲವು ||
ಮೆರೆವಿವರ ಪಾದೋದಕವೆ ತಾಂ |
ಪರಮತೀರ್ಥವು ಮೇಣ್ ಪ್ರಸಾದವ |
ದರಿಯೆ ಭುಕ್ತ್ಯವಶಿಷ್ಟಮದುವೇ ಮೋಕ್ಷಸಾಧನವು ||೨೨||

ತೀವಿ ತೀರ್ಥವ ಶಂಖದಲಿ ತಾಂ |
ಸೇವಿಸಲು ಹೃದಯಾಂತರಾಳದೆ |
ತಾವುಗೊಂಡಿರ್ದರಿಯಮೆಯು ಗಂಟೈದೆ ಕರಗುವುದು ||
ಆವಗಂ ಲಿಂಗಾಂಗಿಯಾಗು |
ತ್ತಾವನೊಲವಿಂದಾಪ್ರಸಾದವ |
ಸೇವಿಪನೊ ಶಿವಮಂತ್ರಬೀಜವು ಫಲಿಪುದವನೆದೆಯೊಳ್ ||೨೩||

ಮಗನೆ ಕೇಳ್ ನಿಗಮಾಗಮಂಗಳು |
ಪೊಗಳುತಿಹ ತೀರ್ಥಪ್ರಸಾದಗ |
ಳಿಗೆ ಧರಾತಲದಲ್ಲಿ ಕಾಣೆನು ಪಡಿಯನೇವೇಳ್ವೆ ||
ಮಿಗಿಲೆನಿಪ ಭಕ್ತಿಯಲಿ ಸೇವಿಸಿ |
ಸೊಗಸಿನಿಂ ಸ್ಥಿರಪದವನಾಂತಾ |
ಯ್ಕಗೆ ಮೆರೆವ ಹರಿವಿಧಿಗಳಿದರಾವ್ಯೆಮೆಯರಿದಿಹರೈ ||೨೪||

ಪರಶಿವನ ವ್ಮೈವೆಳಗೆ ಭಸಿತವು |
ಧರೆಯೊಳದರಾಧಾರಣಕ್ರಮು |
ಮೆರಡು ಬಗೆಯ್ಯೆ ಶಾಸ್ತ್ರವಿಹಿತಂ ಶ್ರೌತಮಶ್ರೌತಂ ||
ಅರಿಯಲಿವರೊಳ್ ಶ್ರೌತಭಸ್ಮವು |
ನಿರುತ ಸೋಪಾಧಿಕವು ನಿಗಮಗ |
ಳೊರೆದ ಮಾಳ್ಕೆಯಿನಾಗೆ ನಿರುಪಾಧಿಕವು ಸಂಸ್ಕೃತವು ||೨೫||

ಇದುವೆಯಣಿಮಾದ್ಯಷ್ಟಸಿದ್ಧಿಯ |
ನೊದವಿಸುವ ಕತದಿಂ ವಿಭೂತಿಯು |
ಪದೆದು ಶಿವತತ್ತ್ವವನು ಬೆಳಗಿಪಕತದೆ ತಾಂ ಭಸಿತಂ ||
ಹೃದಯವಾಕ್ತನು ವಿರಚಿತಾಘವ |
ಸದೆವ ಕತದಿಂ ಭಸ್ಮ ದುಃಖವ |
ಪದುಳದಿಂ ಪರಿಹರಿಪ ಕತದಿಂ ಕ್ಷಾರವೆನಿಸುವುದೈ ||೨೬||

ಮರುಳ ಭೀತಿಯ ಹರಿಸಲಾರ್ತವು |
ದರಿನೆನಿಕುವುಲೆ ರಕ್ಷೆಯಿಾಪೆಸ |
ರರಿಯಲನ್ವರ್ಥವು ಗಡೈದುಂ ಪೇಳ್ವೆನಿವರಿರವ ||
ಹರನ ಸದ್ಯೋಜಾತಮುಖದವ |
ತರಿಸಿದಾ ನಂದಾಖ್ಯಗೋವದು |
ವರವಿಭೂತಿಗೆ ಜನಿಯನಿತ್ತಪುದಾಲಿಸೈ ಕುವರಾ ||೨೭||

ವಾಮದೇವಾನನದೆ ಮೂಡಿ |
ಪರ್ಾಮಹಾಭದ್ರಾಖ್ಯಗೋವಿನ |
ಗೋಮಯುದೆ ದೊರೆದಪುದು ಭಸಿತವಘೋರಮುಖದೆಸೆವಾ ||
ಶ್ರೀಮನೋಹರಸುರಭಿಯೊಪ್ಪವ |
ಗೋಮಯುದೆ ದೊರೆದಪುದು ಭಸ್ಮವು |
ಭೂಮಿಯುಲಿ ತತ್ಪುರುಷಮುಖಭವವಲೆಸುಶೀಲಾಖ್ಯಂ ||೨೮||

ಆದರ ಗೋಮಯುದಿಂದ ಜನಿಯಾಂ |
ಪುದಲೆ ಪರಮಕ್ಷಾರವಿಾಶಾ |
ನದಿನೊಗೆದ ಲಸಮಾನಸುಮನೆಯ ಗೋಮಯುದೆ ಮೂಡಿ ||
ಒದಗುವುದು ತಾಂ ರಕ್ಷೆಯಿದರಲಿ |
ಮೊದಲನೆಯುದೆನಿಪಾವಿಭೂತಿಯು |
ಚದುರರಿಂದುಪಯುಕ್ತಮುಕ್ಕುಂ ನಿತ್ಯಕರ್ಮದಲಿ ||೨೯||

ಭಸಿತ ನೈಮಿತ್ತಿಕದ ಕರ್ಮಾ |
ವಸರದಲಿ ಗುರುಚರರ ಪೂಜೆಯೊ |
ಳೆಸೆದಪುದು ಕಾಮ್ಯಂಗಳಲ್ಲಾಕ್ಷಾರವೆಸೆದಪುದೈ ||
ರಸೆಯರಿಯೆ ಭಸ್ಮವದು ಪರಿಶೋ |
ಧಿಸುವ *ಪ್ರಾಯಶ್ಚಿತ್ತಮುಖದೊಳ |
ಗೆಸೆದಪುದು ಮೋಕ್ಷಾದಿಕಾರ್ಯಕೆ ರಕ್ಷೆಯೊಪ್ಪುವುದೈ ||೩೦||

ಕುವರ ಭಸ್ಮವು ಕಲ್ಪವನುಕ |
ಲ್ಪವುಪಕಲ್ಪವಕಲ್ಪವೆನುತಲಿ |
ಸುವಿದಿತವು ನಾಲ್ವಗೆಯು ಕಲ್ಪವೆಯವರೊಳುತ್ಕೃಷ್ಟಂ ||
ಬುವಿಯೊಳದ ಕಲ್ಪಿಸುವ ಬಗೆಯನು |
ತವೆಯರುಹುವೆನು ನಿನಗೆ ಲಾಲಿಸು |
ದಿವದೆ ಸನಕಾದಿಗಳುಮದನೇ ಧರಿಪರೊಲವಿನಲಿ ||೩೧||

ನಂದೆಯಾಗೋಮಯವ ಭಕ್ತಿಯಿ |
ನೊಂದಿ ಸದ್ಯೋಜಾತಮಂತ್ರದೆ |
ಚಂದದಲಿ ವಾಮದೇವಸುಮಂತ್ರದಿಂದದನು ||
ಅಂದವೆನೆ ಪಿಂಡಗಳ ವಿರಚಿಸಿ |
ಸಂದ ತತ್ಪುರುಷೋದ್ಘಮಂತ್ರದಿ |
ತಂದೊಣಗಿಸುತಘೋರಮಂತ್ರದಿನದನು ದಹಿಸುವುದೈ ||೩೨||

ಇಡುವುದದನೀಶಾನಮಂತ್ರದೆ |
ಪೊಡರ್ವ* ಬಿಲ್ವದ ಪಾತ್ರೆಯೊಳಗದೆ |
ಪೊಡವಿಯರಿಯಲ್ ಕಲ್ಪಭಸ್ಮವು ಪಾಪಹಾರಕವು ||
ಕಡಗಿ ವಿಧ್ಯನುಸಾರಮೆನೆ ಪಣೆ |
ಯೆಡೆಯೊಳೆದೆಯೊಳ್ ಕೊರಲೊಳುರೆ ತೋ |
ಳೆಡೆಯೊಳೊಡಲೊಳು ಧರಿಸಬೇಕೈ ಮಂತ್ರಮುಚ್ಚರಿಸಿ ||೩೩||

ಗಿರಿಶನಾತ್ರಿಪುರಾಸುರರ ಸು |
ಟ್ಟುರಿಪಿ ಲೋಕವ ಪೊರೆವ ಮನದಿಂ |
ಧರೆಯ ರಥವಾಗಿಸುತೆ ರವಿಶಶಿಗಳನದರ್ಕನುವಿಂ ||
ವಿರಚಿಸುತೆ ಚಕ್ರಗಳ ವಿಧಿಯನು |
ಮೆರೆವ ಸಾರಥಿಯೆಸಗಿ ಮೇರುವ |
ನುರುತರದ ಕೋದಂಡವೆಸಗಿದನಲ್ತೆ ಪೂರ್ವದಲಿ ||೩೪||

ನಾಗರಾಜನೆ ನಾಡೆ ಶಿಂಜಿನಿ |
ಯಾಗೆ ನಾರಾಯಣನೆ ಬಾಣವ |
ದಾಗೆ ಶಂಕರ ದಿವದೆ ತಿರುಗುತ್ತಿರ್ದ ರಕ್ಕಸರಂ ||
ಲಾಗುವೇಗದಿನಿಸಲು ಗುರಿ ನೋ |
ಳ್ಪಾಗ ಸಾಸಿರಬರಿಸ ಕಳೆದುದು |
ವೇಗದುದುರಿದುವಲ್ತೆ ಪನಿಗಳು ಬಿಟ್ಟ ಕಣ್ಣೊಡೆಯಿಂ ||೩೫||

ರಸೆಗುರುಳ್ದಾ ಜಲಕಣಂಗಳೆ |
ಪೆಸರ್ವ*ಡೆದ ರುದ್ರಾಕ್ಷಮೆನಿಸಿದು |
ವಸದಳವು ಬಣ್ಣಿಸಲಿಕವಧರಿಸಿದನ ಸುಕೃತವನು ||
ಅಸಮನೇತ್ರನು ಪಾಪರಹಿತನ |
ನೆಸಗುತಾತನ ಪೊರೆವನೊಸೆದೋ |
ಡಿಸುವನೈ ಭೂತಾದಿಭೀತಿಯ ತಿಳಿಯ ನೀನಿದನು ||೩೬||

ತಲೆಯೊಳುಂ ಕೊರಲಲ್ಲಿಯುಂ ತೋ |
ಳ್ಗಳೊಳುವಾರುದ್ರಾಕ್ಷವನು ಕ |
ಟ್ಟೊಲವಿನಿಂ ಶೈವಾಗಮಂಗಳೊಳೊರೆದ ವಿಧಿಯಿಂದ ||
ತಳೆಯವೇಳ್ಕುಂ ನಾಡೆ ಮೋಕ್ಷಮು |
ನೆಳಸುವಾತನು ಲಾಲಿಸೆಲೆಮಗು |
ತಿಳುಹುವೆನು ಪಂಚಾಕ್ಷರೀವರಮಂತ್ರಮಹಿಮೆಯನು ||೩೭||

ಪೊರೆಯೊಳಿರ್ದರ ಕಿವಿಗೆ ಕೇಳಿಪ |
ತೆರದೆ ಜಪಿಪುದು ವಾಚಕವು ಬಾ |
ಯ್ದೆರೆಯನಲುಗಿಸಿ ಕೇಳದಂತಿರುಪಾಂಶುಜಪವೈಸೇ ||
ತೆರೆಯದೋಷ್ಠವ ಮನದೆ ಜಪಿಸುವು |
ದರಿಯೆ ಮಾನಸಿಕಾಖ್ಯಮಿಾಮೂ |
ರರೊಳಗುತ್ತಮಮೆನಿಕುಮೈ ಮಾನಸಿಕಜಪಮೆಂದುಂ ||೩೮||

ಅನುಗೊಳಿಸುತಾಪ್ರಣವಪಲ್ಲವ |
ವಿನುತಮಂತ್ರಾಂಗಗಳ ಭಕ್ತಿಯಿ |
ನನಘಶಿವಪಂಚಾಕ್ಷರವ ನರ ಜಪಿಸೆ ಫಲವಕ್ಕುಂ ||
ತನಯ ಕೇಳಾನ್ಯಾಸಹೀನಮು |
ದೆನಿಕುಮೈ ಮೂಕಂ ನಿರಾಸನ |
ಮೆನಿಸುಗುಂ ಗಡ ಸುಪ್ತ ಪಲ್ಲವಹೀನಮದು ನಗ್ನಂ ||೩೯||

ಮೃತಮೆನಿಕ್ಕುಂ ಪ್ರಣವಹೀನಂ |
ಕ್ಷಿತಿಯೊಳಾರುಷ್ಯಾದಿಹೀನವು |
ಸತತಮೆನಿಕು ಭುಜಂಗಮಂ ಗುರುವರ್ಯ ಕಲಿಸದಿರಲ್ ||
ಖತಮದಲ್ಲಂ ವ್ಯರ್ಥಮೆನಿಕುಂ |
ಸುತನೆ ಕೇಳ್ವೈ ವೀರ್ಯಹೀನಮು |
ಮಿತಮೆನಿಸಲಕ್ಷರದೆ ಜಪಿಸುವ ಬಗೆಯನಿನ್ನೊರವೆ ||೪೦||

ಪೊಂದಿ ಶಿವಸಂಸ್ಕಾರಮಂ ನಲ |
ವಿಂದೆ ಶುದ್ಧಸ್ಥಳದೆ ಕುಳ್ಳಿ |
ರ್ದಂದದಿಂ ಸಿದ್ಧಾಸನಾದಿಯನಾಶ್ರಯಂಗೊಳುತೆ ||
ಚಂದದಾಚಮನಾದಿಯೆಸಗಿ ಪು |
ರಂದರಾಶಾಭಿಮುಖನಾಗುತೆ |
ಕಂದುಗೊರಲನೊಳಿಟ್ಟು ಬಗೆಯನು ಜಪಿಸವೇಳ್ಕಿದನು ||೪೧||

ಧ್ಯಾನಸಹಿತ ಸಗರ್ಭಮೆನಿಕುಂ |
ಧ್ಯಾನಹೀನಮಗರ್ಭಮಪ್ಪುದು |
ಮೌನಿಗಳ್ ಜಪಿಪರು ಸಗರ್ಭಮನದುವೆ ಶಾಸ್ತ್ರೋಕ್ತಂ ||
ನೀನರಿವುದೀತತ್ತ್ವವನು ಮ |
ತ್ತೂನು ದೀರ್ಘಾಯುಷ್ಯದವು ಸು |
ಜ್ಞಾನದಾಯಕವಲ್ತೆ ಶಿವಪಂಚಾಕ್ಷರಂ ರುಚಿರಂ ||೪೨||

ನೀಡುವುದು ಪುರುಷಾರ್ಥಗಳ ಬಡಿ |
ದೋಡಿಪುದು ಮಾಪಾತಕಂಗಳ |
ಕೂಡಿಪುದು ಕೈವಲ್ಯಕಾಂತೆಯೊಳೀಮಹಾಮಂತ್ರಂ ||
ನಾಡೆ ಸಾನಂದಾಖ್ಯಮುನಿ ಮುಂ |
ನೋಡಿ ನಿರಯದೆ ನರನರಳಿ ಬಲು |
ಪಾಡುಪಡುವಾಪಾಪಿಗಳನಿದನುಚ್ಚರಿಸಿ ಪೊರೆದಂ ||೪೩||

ಆವಸಿಷ್ಠನು ವಾಮದೇವನು |
ಭೂವಿನುತರೀಮಂತ್ರದೊದವಿಂ |
ತಾವೆ ಪಡೆದರು ನಿಗ್ರಹಾನುಗ್ರಹಸಮರ್ಥತೆಯಂ ||
ದೇವನಾಶಿವನಿದಕಧೀನಂ |
ಪಾವನವಿದಾಗುರ್ವಧೀನಂ |
ಭಾವಿಸಲು ಗುರುಮುಖದೆ ಪಡೆಯಲ್ವೇಳ್ಕುಮಿದನರಿಯಾ ||೪೪||

ವೀರಗೋತ್ರಜರ್ಗ* ಪ್ರಸಾದವು |
ಮಾರಯಲು ನಂದಿಜರ್ಗೆ* ಮಾಯೆಯು |
ಚಾರುಭೃಂಗಿಜರ್ಗ*ಲ್ತೆ ಸೂಕ್ಷ್ಮವು ವೃಷಭಗೋತ್ರರ್ಗ ||
ಧೀರರರಿಯಲ್ ಸ್ಥೂಲಮತಿಗಂ |
ಭೀರಮಾಸ್ಕಂದಜರ್ಗೆ* ಮೂಲಂ |
ಸಾರಮೈವಗೆಯಲ್ತೆ ಶಿವಪಂಚಾಕ್ಷರೀಮಂತ್ರಂ ||೪೫||

ರಾಜಿಪಷ್ಟಾವರಣಸಂಪ |
ದ್ಭಾಜನನು ತಾನೆನಿಸ ಮುನ್ನಮೆ |
ನೈಜಗೋತ್ರದ ಗುರುವ ಮುಖದಿಂ ಶೈವದೀಕ್ಷೆಯನು ||
ಸಾಜಮಾದುಪನಯನಪೂರ್ವಕ |
ವಿೂಜಗದೆ ಪಡೆಯುತಲಿ ಶಿವಸಮ |
ತೇಜನಾಗುತೆ ಕಳೆವುದೈ ಪುದಿದಾಣವಾದಿಗಳಂ ||೪೬||

ಸ್ಥೂಲದೇಹದೊಳಿಷ್ಟಲಿಂಗವ |
ತಾಳಿ ಸೂಕ್ಷ್ಮಶರೀರದೊಳ್ ಮಿಗೆ |
ತಾಳುತೆಸೆವಾಪ್ರಾಣಲಿಂಗವ ಕಾರಣಾಂಗದೆ ಮೇಣ್ ||
ತಾಳುತೊಪ್ಪುವ ಭಾವಲಿಂಗವ |
ಮೇಳವಿಸಿ ಕರದಿಷ್ಟಲಿಂಗವ |
ಕಾಲಕಾಲಕೆ ಪೂಜೆಗೈವನೆ ವೀರಶೈವವರಂ ||೪೭||

ಸೇವಿಸುತೆ ಗುರುಲಿಂಗಜಂಗಮ |
ಪಾವನಸುತೀರ್ಥಪ್ರಸಾದವ |
ತೀವಿದೀಪ್ರಾಪಂಚಿಕವ್ಯವಹಾರಗಳ ತೊರೆದು ||
ಶೈವನಾಮಾಲಿಂಗದಲ್ಲಿಯೆ |
ಸಾವಧಾನದೆ ಮನವ ನಿಲಿಸುವ |
ನಾವಗಂ ಜ್ಯೋತಿಃಸ್ವರೂಪವಿಲೀನಸದ್ಭಾವಂ ||೪೮||

ತರಳ ಕೇಳೈ ಸ್ಥೂಲದೇಹದಿ |
ವಿರಚಿಸುವ ದಿವ್ಯೇಷ್ಟಲಿಂಗದ |
ಪರಮಪೂಜೆಯು ಜನನಮರಣದ ಪಾಶವನು ಹರಿಸಿ ||
ಮೆರೆಯಿಸುವುದು ಶಿವಾಭಿರತಿಯನು |
ಭರದೆ ಶಬ್ದಾದ್ಯಖಿಲವಿಷಯವ |
ನೆರೆಕೊಳಿಸುತಾಪ್ರಾಣಲಿಂಗಕೆ ಸೂಕ್ಷ್ಮದೇಹದಲಿ ||೪೯||

ತೋರುತಿರುವೀಯುಭಯಧರ್ಮದೆ |
ಕಾರಣಾಂಗದೊಳಕ್ಕುಮಲೆ ಪೊಗ |
ರೇರಿ ನಿರ್ಮಲಭಾವಲಿಂಗಾರಾಧನೆಯು ಬಗೆಯು ||
ದೂರಮಪ್ಪುದು ವಿಷಯದಿಚ್ಛೆಯು |
ಸಾರಶಿವಸುಖದನುಭವವು ಕೈ |
ಸೇರುವುದು ತಾನಿದರಿನೇವಣ್ಣಿಪೆನು ತತ್ತ್ವವ ನಾಂ ||೫೦||

ತ್ರಿವಿಧಮಾದೀಲಿಂಗಗಳನಾ |
ತ್ರಿವಿಧಮಾದ ಶರೀರದೊಳ್ತಳೆ |
ದವರನೆಂದುಂ ಕ್ರಮವನರಿಯುತುಪಾಸಿಪಾತನೆ ತಾಂ ||
ಬುವಿಯೊಳಗೆ ಶಿವಯೋಗಿಯೆನಿಪನು |
ಕುವರ ಕೇಳ್ ನಿರ್ಲಿಪ್ತನೆನಿಸುವ |
ನವನು ಪದ್ಮದಳಸ್ಥಜಲಕಣದಂತೆ ನೆರೆ ಮೆರೆದು ||೫೧||

ಅರಿವುದೈ ಶಿವನರಿವೆನಿಪ್ಪಾ |
ಪರಮನಿಶಿತಾಯುಧದಿನುದ್ಭವ |
ಮರಣರೂಪದ ಭವದ ಪಾಶವನೀವಿಚಾರವನು ||
ಅರಿದಿಹೈ ನೀನೆಲ್ಲವನು ಕೇಳ್ |
ಪರಭೃತವು ಪಂಚಮವ ಜನಿಮೊದ |
ಲರಿದಿಹಂತಿರಲಾದೊಡುಂ ನಾನೊರೆವೆ ನಿನಗೀಗಳ್ ||೫೨||

ಇದನು ನೀನೀಜಗಕೆ ಬೋಧಿಸು |
ವುದು ಕಣಾ ಕರ್ತವ್ಯಮೆಲ್ಲರ |
ಹೃದಯದೊಳ್ ಶಿವಭಕ್ತಿಬೀಜವ ಬಿತ್ತಿ ಮೊಳೆಯಿಪುದೈ ||
ಸದೃಶರನು ನಿನಗರಿಯೆನನ್ಯರ |
ನಿದು ಯಥಾರ್ಥಮೆನುತ್ತೆ ಸೊಲ್ಲಿಸಿ |
ಸದಯರೇಣುಕ ಬಳಿಕ ನಲವಿಂ ಧ್ಯಾನಪರನಾದಂ ||೫೩||

ಏವೊರೆವೆ ರೇಣುಕನ ಜಾನದ |
ಭಾವವನು ತನ್ಮಹಿಮೆಯನು ನೆರೆ |
ಬೂವಿಯದುವೇ ಮಾರ್ಪುಗೊಂಡುದು ರಾಜಸಭೆಯಾಗಿ ||
ಗೈವ ಕಜ್ಜವನೆಲ್ಲವನು ತಾವ್ |
ತಾವೆ ಭಕ್ತಿಶ್ರದ್ಧೆಗಳಿನಾ |
ಸೇವಕರು ಬಿಡದೆಸಗುತಿರ್ದರು ಮಿಕ್ಕು ಸಡಗರಿಸಿ ||೫೪||

ಮೆರೆಯೆ ವಿಶ್ವಾರಾಧ್ಯನೊಂದೆಡೆ |
ಮೆರೆಯೆ ಮರುಲಾರಾಧ್ಯನೊಂದೆಡೆ |
ಮೆರೆಯಲೇಕೋರಾಮಪಂಡಿತಗುರುವರರು ಕೆಲದೆ ||
ಮೆರೆಯೆ ಪಾಂಡ್ಯಮಹೇಂದ್ರಚೋಳೇಂ |
ದ್ರರುಮೆಸೆಯೆ ನೇಪಾಳಕೇರಳ |
ದರಸರುಂ ಕಣ್ದೆರೆದು ರೇಣುಕ ಕಂಡನೆಲ್ಲವನು ||೫೫||

ಒಡನೆ ಸಿಂಹಾಸನವದೆಸೆದುದು |
ಸಡಗರಿಪ ವಂದಿಗಳ ಕವಿಗಳ |
ಗಡಣವೊಪ್ಪಿದುದಲ್ಲಿ ಶೈವರ್ಷಿಗಳು ಶಿಷ್ಯಯುತರ್ ||
ಎಡಬಲದೆ ಕಂಗೊಳಿಸಿದರು ಪಳ |
ನುಡಿಯನುಗ್ಗಡಿಸಿದರು ಗಗನವ |
ನಡರೆ ಮಂಗಳವರೆಯ ಮೊಳಗುಂ ಜಯಜಯಧ್ವನಿಯುಂ ||೫೬||

ಕರವಿಡಿದು ರುದ್ರಮುನಿದೇವನ |
ಕರೆತರುತ್ತಲಿ ಪಟ್ಟಸಂಸ್ಕೃತಿ |
ವಿರಚಿಸುತೆ ಸಿಂಹಾಸನದೆ ಕುಳ್ಳಿರಿಸಿ ನಲವಿಂದೆ ||
ಗುರುವರೇಣ್ಯನು ಮಣಿಕಿರೀಟವ |
ನಿರಿಸೆ ಸಿರದಲಿ ಮರಲ ಸರಿಯದು |
ಕರೆಯೆ ಪಂಚಾಚಾರ್ಯರುಂ ತಾನೊಲ್ದು ಪರಸಿದರು ||೫೭||

ನಲವಿನುರ್ವೀಪಾಲರೆಲ್ಲರು |
ಸಲಿಸೆ ವಸ್ತ್ರಾಭರಣಮೊದಲಹ |
ಸುಲಲಿತಾಮಲವಸ್ತುಜಾಲವ ಕಾಣ್ಕೆಯೆಸಗುತಲಿ ||
ತೊಳಗಿದನು ರುದ್ರಮುನಿದೇವನು |
ಬೆಳಗುವಾಕೈಲಾಸದಲಿ ಬಗೆ |
ಗೊಳುವ ಭದ್ರಾಸನದೆ ಮಂಡಿಸಿದಭವನಂತೆವೊಲು ||೫೮||

ಬೆಳುಗೊಡೆಯು ಬಿಜ್ಜಣಿಗೆ ನಂದಿಯ |
ಪಳವಿಗೆಯು ತೊಳತೊಳಪ ಶಂಖವು |
ಬಿಳಿಯ ಚವರಿಯು ಪಂಚಕಲಶವು ತಿರ್ಯಗಾಂದೋಳಂ ||
ಕಲಭಹಯರಥಪತ್ತಿಮೊದಲಹ |
ಬಲವು ಮತ್ತಾಪಗಲದೀವಿಗೆ |
ಗಳ ಬಿರುದನರ್ಪಿಸಿತು ಗುರುಪದಕೊಲಿದು ರಾಜಕುಲಂ ||೫೯||

ರಸೆಯಧೀಶ್ವರರೆಲ್ಲಮಭಿವಂ |
ದಿಸುತೆ ರೇಣುಕರುದ್ರಮುನಿಗಳ |
ಬಿಸಜಸನ್ನಿಭಚರಣತಲಕತಿವಿನಯಭಕ್ತಿಯಲಿ ||
ಬೆಸನನೊಂದುತೆ ಮರಳಿದರು ತಾ |
ವೊಸಗೆ ನುಡಿಯಿದು ಭುವನತಲದೆ |
ಣ್ದೆಸೆಯೊಳುಂ ಪಸರಿಸಿತು ಶಾಂತಿಯದಾಗಲುರ್ವರೆಗೆ ||೬೦||

ಸಿರದೆ ತಳೆಯುತೆ ರೇಣುಕಾಜ್ಞೆಯ |
ನಿರದೆ ಸಕಲರುಮೈದೆ ಸಿರ್ಭರ |
ಕರುಣಚತುರಾಚಾರ್ಯರಾರುದ್ರಮುನಿಸತ್ಕೃತಿಯಿಂ ||
ಹರಿಸವೊಂದುತೆ ತಳರ್ದ*ರೊಪ್ಪುವ |
ಗರಪುರಾಧಿಪಮಹಿಮೆಯನು ಬಿ |
ತ್ತರಿಸಿ ಪಾಡುತೆ ಶಿಷ್ಯಸಹಿತರು ತಮ್ಮ ನೆಲೆಗಳಿಗೆ ||೬೧||



ಶ್ರೀ ರೇಣುಕಾಚಾರ್ಯರು ಶ್ರೀ ರುದ್ರಮುನಿಶಿವಾಚಾರ್ಯರಿಗೆ
ಪಟ್ಟಾಭಿಷೇಕ ಮಾಡುವುದು.

ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಹತ್ತೊಂಭತ್ತನೆಯ ಸಂಧಿ.

ಸೂ|| ಪರಮಭಕ್ತಗೆ ಕಲ್ಲಿನಾಥಂ |
ಗರುಹಿ ಪಿಂಡಾಜಾಂಡತತ್ತ್ವವ |
ತೆರಳ್ದ*ನಾಶ್ರೀಗಿರಿಗೆ ರೇಣುಕ ರುದ್ರಮುನಿಯೊಡನೆ ||

ಗುರುವರೇಣ್ಯನು ರುದ್ರಮುನಿಯೊಡ |
ವೆರೆದು ನಾನಾದೇಶಗಳ ಸಂ |
ಚರಿಸಿ ಭುಜಗಾರಣ್ಯನಾಮಕಪುರವನೈದಿದನು ||
ಪುರಹರನ ಲೀಲಾವಿಭವವೀ |
ಪರಿಯೆನುತೆ ಬಣ್ಣಿಸಲು ಮಾನವ |
ಗರಿದು ತತ್ಪುರವರದ ಪೂರ್ವದ ವೃತ್ತವಾರಯಲು ||೧||

ಒಂದು ಕಾಳೋರಗವು ಬಹುಮುದ |
ದಿಂದ ಬಿನದಿಸುತಿರ್ದು ಭೋಂಕನ |
ದೊಂದುದಿನ ನಿಷ್ಕಾರಣಂ ತೊರೆದತ್ತು ಪರಣವನು ||
ಗೊಂದೆವಳವಿಗೆಯುನ ಸುಭಕ್ತರ |
ಬೃಂದದಗ್ರಣಿಯೊರ್ವನಲ್ಲಿಗೆ |
ಬಂದು ಕಂಡದ ಕಲ್ಲಿನಾಥಾಹ್ವಯನು ಕೊರಗಿದನು ||೨||

ಹರಹರಾ ನಿರ್ದೋಷಿಯಾದೀ |
ಯುರಗವೀಪರಿಯುಸುವ ತೊರೆದುದ |
ಕರಿಯೆನೇಕಾರಣವ ಬದುಕಿಸಲಳವೆ ನನಗಿದನು ||
ಪರಮಕರುಣಾನಿಧಿಗಿರೀಶನ |
ಮರೆಯುಪುಗುವೆನು ಬೇಡಿಕೊಂಬೆನು |
ಪೊರೆವನವನಂತೆಸಗದಿರೆ ನಾನಸುವ ನೀಗುವೆನು ||೩||

ಇದುವೆ ಯುಕ್ತವೆನುತ್ತೆ ನಿರ್ಧರಿ |
ಸಿದನು ನಿದ್ರಾಹಾರಸುಖಸಂ |
ಪದವನುಳಿದು ಶಿವಾಲಯುವ ಸಾರ್ದಲ್ಲಿ ಶಂಕರನಾ ||
ಇದಿರೊಳಗೆ ಕುಳ್ಳಿರ್ದು ನಿಜದೇ |
ಹದಭಿಮಾನವ ತೊರೆಯುತಲಿ ಬೇ |
ಡಿದನು ಕಾಯ್ದೈ ಕಾಯಜಾರಿಯೆನುತ್ತೆ ಕೈಮುಗಿದು ||೪||

ಸಾಂಬ ಸಲಹೈ ಶರಣಜನತಾ |
ಲಂಬ ಸಲಹೈ ವಿನಮದಮರಕ |
ದಂಬ ಸಲಹೈ ಭಕ್ತಹೃದ್ಭಂಭರಕುಲಾಂಬುರುಹ ||
ಅಂಬರಾಪಗೆಯೆಸೆವ ಜಡೆಗಳ |
ಬಂಬಲಿಂ ಬಗೆಗೊಳಿಪ ದೇವನೆ |
ನೀಂ ಬರಿದೆ ಕಾಡದಿರು ಕಾಯ್ದೈ ಕಾಳಸರ್ಪನನು ||೫||

ಅಂದು ಕಾಲನ ಪಾಶದಿಂದಲಿ |
ನೊಂದು ನಿನ್ನನೆ ಜಾನಿಸಿದ ಮುನಿ |
ನಂದನನ ನಲವಿಂದೆ ಪೊರೆದೈ ಬಲ್ಲೆನೆಲ್ಲವನಾಂ ||
ಇಂದು ನೀಂ ದಯೆದೋರದಿರೆ ಕೇ |
ಳಿಂದುಮೌಳಿಯೆ ಚರಣಭಕ್ತನ |
ಕೊಂದ ದುರ್ಯಶ ನಿನ್ನ ಮಡಿಲಲಿ ಬೀಳದಿರ್ದಪುದೇಂ ||೬||

ಜೀವದಾನವ ಗೈದು ಲೋಕವ |
ಕಾವ ಕರುಣಾಭಾವ ದೇವಾ |
ಪಾವನೊಂದನು ಬದುಕಿಪುದು ನಿನಗರಿದೆಯೇಂಬರಿದೆ ||
ಈವಗೆಯಿನಳಲಿಸುವೆಯೆನ್ನನು |
ಪಾವಕಾಕ್ಷ ಜಿತಾಕ್ಷಪಕ್ಷಾ |
ಕಾವುದೈ ಮತ್ತೇಭದೈತ್ಯವಿದಳನಹರ್ಯಕ್ಷಾ ||೭||

ಬೇಡುತಿಂತತ್ಯುಗ್ರತಪವನು |
ಮಾಡುತಿರಲಾಕಲ್ಲಿನಾಥನು |
ನೋಡಿ ತಾರಾನಾಥಶೇಖರ ಭಕ್ತವತ್ಸಲನು ||
ನೀಡಿದನು ಪಾವಿಂಗೆ ಹರಣವ |
ನಾಡುತ್ತೈದಿದುದದು ಬಳಿಕ್ಕಂ |
ರೂಡಿಯಾಯಿತ್ತಾಪುರಕೆ ಭುಜಗಾರಣ್ಯಸನ್ನಾಮಂ ||೮||

ಅಂದಿಸಿಂದಾಕಲ್ಲಿನಾಥನು |
ಕಂದುಗೊರಲನ ಕಾಂಬ ಬಯ್ಕೆಯ |
ನೊಂದಿ ದೇವಾಲಯದೆ ಪರಶಿವಲಿಂಗಮೂರ್ತಿಯನು ||
ಬಂದಿಸುತೆ ಹೃದಯಾಂತರದೆ ತರಿ |
ಸಂದ ಭಕ್ತಿಯಿನೈದೆ ಜಾನಿಸು |
ವಂದವನು ಶಿವ ಕಂಡನುಗ್ರಹಿಸಲ್ಕೆ ಬಗೆದಿರಲು ||೯||

ನುಡಿಯದೊಂದೊಗೆದತ್ತು ಸುರಪಥ |
ದೆಡೆಯಿನಾಗಳೆ ಕಲ್ಲಿನಾಥಾ |
ಬಿಡುಬಿಡೀಮನದಳಲ ಕೈಗೂಡುವುದು ನಿನ್ನೆಳಪು ||
ಪೊಡವಿಯೊಳಗೆನ್ನಾಜ್ಞೆಯನು ನಲಿ |
ದೊಡರಿಸಲು ಸಂಚರಿಪ ರೇಣುಕ |
ತಡೆಯದೈದುವ ನಿನ್ನ ಬಳಿಗೊಲಿದೀಗಳೆಂದೆನುತೆ ||೧೦||

ಗಗನವಾಣಿಯನಾಲಿಸುತ್ತಲಿ |
ಬಗೆಯೊಳುಣ್ಮಿರ್ದುತ್ಸುಕತೆಯಿಂ |
ಪಗಲುಮಿರುಳುಂ ರೇಣುಕಾಗಮನವನೆ ಪಾರುತಲಿ ||
ನಗಜೆಯಾಳ್ದನ ನುತಿಸುತಿರ್ದಾ |
ಸುಗುಣಿಯೆಡೆಗೈತಂದ ರೇಣುಕ |
ನಗುತೆ ರುದ್ರಮುನೀಂದ್ರನೊಡವೆರೆದೇನ ವರ್ಣಿಪೆ ನಾಂ ||೧೧||

ಆರ ಬರವನು ಪಗಲುಮಿರುಳುಂ |
ಪಾರುತಿರ್ದನೊ ಕಲ್ಲಿನಾಥನ |
ದಾರ ವಾಕ್ಸುಧೆ ಭವಭಯಜ್ವರದಾಹವಡಗಿಪುದೋ ||
ಆರ ದಿವ್ಯಾಕೃತಿಯ ಕಂಡೊಡೆ |
ದೂರ ಸರಿವುದೊ ದುರಿತವಾಶ್ರುತಿ |
ವಾರಪಾರಂಗತನು ನುಡಿಸಿದ ಕಲ್ಲಿನಾಥನನು ||೧೨||

ಏನೆಲೈ ವೈರಾಗ್ಯನಿಧಿ ನೀಂ |
ಮೌನಿವೃತ್ತಿಯನಾಂತು ಮೆರೆದಿಹೆ |
ಪೀನಮೆಸೆದಪುದಲ್ತೆ ಸಾತ್ವಿಕಭಾವ ನಿನ್ನಲಿ ಕೇಳ್ ||
ಮಾನವನು ಸಂಸಾರಪಾಶಕ |
ಧೀನ ನೀನಂತಲ್ಲದಿಹುದೀ |
ಶಾನಪರಮಾನುಗ್ರಹದ ಫಲಮಲ್ತೆ ಸತ್ಯವಿದು ||೧೩||

ಕೆಲರು ಶಲಭವು ದೀಪಕೆರಗು |
ತ್ತಳಿವವೋಲಾವಿಷಯಸೌಖ್ಯವ |
ನೆಳಸಿ ವಿವಿಧಕ್ಲೇಶಕೆಡೆಯುಹರುಳಿದರಿಂಕೆಲರು ||
ಸುಳಿವ ಸಲಿಲಾವರ್ತದಲಿ ಸಲೆ |
ಸಿಲುಕಿ ದುಃಖದ ವಿವಿಧಭವಗಳ |
ತಳೆದು ನರಳುವರವರನಾರ್ ಸಲಹುವರು ಗುರುವುಳಿಯೆ ||೧೪||

ಗುರುವನದರಿಂ ಪಡೆಯುವೇಳ್ಕುಂ |
ಗುರುಕಟಾಕ್ಷದೆ ಬರ್ದು*ಕವೇಳ್ಕುಂ |
ಗುರುವನುಗ್ರಹದಿಂದೆ ಪಡೆಯಲ್ವೇಳ್ಕು ಮೋಕ್ಷವನು ||
ಗುರುವೆ ಸರ್ವಜ್ಞಸ್ವರೂಪನು |
ಗುರುವೆ ಸರ್ವವು ಧರ್ಮಸಾರವಿ |
ದರಿದಿಹೈ ನೀಂ ಪೂರ್ವಸಂಚಿತವಶದಿ ದಿಟವೆಂದ ||೧೫||

ನೀಗಿಸುತೆ ಮೂವಗೆಯ ಮಲಗಳ |
ಕೈಗೊಳಿಸಿ ಮೂವಗೆಯ ದೀಕ್ಷೆಯ |
ನಾಗಳಾ ಮೂವಗೆಯ ಲಿಂಗವನಂಗಮೂರರಲಿ ||
ಕೈಗೊಳಿಸುತಾರುದ್ರಮುನಿಯಿಂ |
ಶ್ರೀಗುರು ಮಹಾಮಂತ್ರವನು ಲೇ |
ಸಾಗಲುಪದೇಶಿಸುತೆ ಕಾದನು ಕಲ್ಲಿನಾಥನನು ||೧೬||

ಕರವ ಮುಗಿಯುತೆ ಕಲ್ಲಿನಾಥನು |
ಗುರುವೆ ಫಲಿಸಿತು ನನ್ನ ಸುಕೃತದ |
ತರು ಕೃತಾರ್ಥತೆಯಾಂತೆನೇಕೋತ್ತರಶತಸ್ಥಲದ ||
ಉರುರಹಸ್ಯವನರಿದೆನೈ ಬಿ |
ತ್ತರಿಸಿ ಪೊರೆಯೈ ಸಾರತರಮೆನಿ |
ಸಿರುವಜಾಂಡದ ನಾಡೆ ಪಿಂಡಾಂಡದ ನಿರೂಪಣವ ||೧೭||

ಎನಲು ಗುರುವಿಂತುಸಿರ್ದ*ನಾಲಿಸು |
ತನಯ ಪರಶಿವನಲ್ಲಿ ಮಿಗಿಲೆನ |
ಲನಿಶಮುಂ ಬೆರೆದಿರ್ಕುಮೆಸೆವ ವಿಮರ್ಶಶಕ್ತಿಯದು ||
ಅನುವುಗೊಂಡಾಸೂಕ್ಷ್ಮರೂಪದಿ |
ಮಿನುಗುವುದು ಜಗಮದರೊಳೇವೊರೆ |
ವೆನು ವಿಭಾವಿಸೆ ನಾಮರೂಪಕ್ರಿಯೆಗಳಿಲ್ಲದಕೆ ||೧೮||

ಜಗವ ಸೃಷ್ಟಿಸುವಿಚ್ಛೆ ಪರಶಿವ |
ಗೊಗೆದುದೊಮ್ಮೆ ಬಳಿಕ್ಕ ರೂಪವ |
ಮಿಗೆ ತಳೆದು ಪೊಂದಿದನು ಶಶಿಧರಮುಖ್ಯನಾಮಗಳಂ ||
ಸೊಗಸಿನಿಂ ಬ್ರಹ್ಮನನು ನಿರ್ಮಿಸಿ |
ನಿಗಮನಿಚಯಶಿವಾಗಮಂಗಳ |
ಬಗೆವುಗಲು ಬೋಧಿಸಿದ ಶಾಸ್ತ್ರಂಗಳನು ನಲಿದವಗೆ ||೧೯||

ಸ್ರಷ್ಟನಾಶಿವನಾಜ್ಞೆಯಿಂದಲಿ |
ಸೃಷ್ಟಿಸಲು ಪದಿನಾಲ್ಕುಲೋಕವ |
ಕಷ್ಟಮಾದುದು ಮಾಯೆಯರಿಯಮೆ ಕವಿದ ಕತದಿಂದೆ ||
ನಷ್ಟಮತಿಯಾಗವನು ಭಕ್ತಿಯಿ |
ನಷ್ಟಮೂರ್ತಿಯ ಭಜಿಸಲಾಗಳೆ |
ತುಷ್ಟನಾಶಿವ ಸೃಷ್ಟಿಸಿದನಾಚಾರ್ಯಗಣವರರ ||೨೦||

ಕಂಡದನು ಕಮಲಾಸನನು ಕೈ |
ಗೊಂಡು ಶಿವಪಂಚಾಕ್ಷರಿಯ ಬಳಿ |
ಕಂಡಜವ ಪಿಂಡಜವನಾಸ್ವೇದಜವನುದ್ಭಿಜವ ||
ತಂಡದಿಂ ನಿರ್ಮಿಸಿದನಿದುವೆಯ |
ಜಾಂಡಮೆಂಬಾಪೆಸರಿನೆಸೆವುದ |
ಖಂಡಮುರ್ವೀವಾರಿದಹನಾನಿಲದಿವಂ ಭೂತಂ ||೨೧||

ಮೆರೆಯುತಿರ್ಪೀ ಪಂಚಭೂತದಿ |
ನರಿಯೆ ಕಿವಿತೊವಲಾಲಿನಾಲಗೆ |
ತರದೆ ಮೂಗೆಂಬೈದುಮಿಂದ್ರಿಯಗಳು ಪೊದಳ್ದಪುವೈ ||
ಒರೆಯುಲೇನಾಜ್ಞಾನಶಕ್ತಿಯ |
ಪರಮುಮೆನಿಸಿರ್ಪಂಶಮಿವರೊಳ್ |
ಬೆರೆಯಲಂತಃಕರಣಮೆನಿಪುದು ತರಳ ಕೇಳಿದನು ||೨೨||

ಆದುದಂತಃಕರಣವೃತ್ತಿಯ |
ಭೇದದಿಂದಲಿ ಮನವು ಬುದ್ಧಿಯು |
ಮಾದವೊಪ್ಪುವಹಂಕೃತಿಯು ಮೇಣ್ ಚಿತ್ತಮುಂ ಮತ್ತೆ ||
ಮೋದಕರಮೆನೆ ಮೋಕ್ಷಸಾಧಕ |
ಮಾದ ತತ್ತ್ವವನೊಂದೆಮನದಿಂ |
ದೈದೆ ಲಾಲಿಸು ಕಲ್ಲಿನಾಥಾ ಸೊಲ್ಲಿಸುವೆನೊಲವಿಂ ||೨೩||

ಏರುತಿರ್ಪಾ ಕ್ರಿಯೆಯ ಶಕ್ತಿಯಿ |
ನಾರಜೋಂಶದೆ ವಾಕ್ಕು ಪಾಣಿಯು |
ಚಾರುಪಾದವು ಪಾಯು ಮತ್ತೆಯುಪಸ್ಥಮೆಂಬೈದುಂ ||
ಸೇರಿ ಕರ್ಮೇಂದ್ರಿಯಗಳೆನಿಸಿದು |
ವಾರಯಲ್ ತಾಂ ಪ್ರಾಣವಿವರಿಂ |
ತೋರಿ ತೊಳಗಿತ್ತೈದು ಬಗೆಯಿಂ ಕೇಳೆಲೈ ಕುವರಾ ||೨೪||

ಏನೊರೆವೆನಾಪ್ರಾಣವೊಪ್ಪುವ |
ಪಾನಮೆಸೆವ ಸಮಾನಮಾದಮು |
ದಾನಮಾವ್ಯಾನವುಮಿವೈದುಂ ಪ್ರಾಣಪಂಚಕವೈ ||
ನೀನರಿಯ ಸಪ್ತದಶತತ್ತ್ವವಿ |
ತಾನ ಸೂಕ್ಷ್ಮಶರೀರಮೆನಿಸಿತು |
ನೂನಮಾಸ್ಥೂಲತನು ಬಗೆಯೆ ತಮೋಂಶಸಂಭವವೈ ||೨೫||

ನೆರೆ ಸೊಗಯಿಪಾಕಾಶಪಂಚೀ |
ಕರಣಮಾಜ್ಞಾತ್ರಾದಿಯದು ನೋ |
ಳ್ಪರೆ ಮರುತ್ಪಂಚೀಕರಣವಾಪ್ರಾಣಮುಖ್ಯಗಳು ||
ಅರಿಯೆ ಶಿಖಿಪಂಚೀಕರಣಮೆಲೆ |
ತರಳ ಕೇಳ್ ಶ್ರೋತ್ರಾದಿಗಳು ತಾ |
ವಿರದೆ ಶಬ್ದಾದಿಗಳು ಜಲಪಂಚೀಕರಣಮೆನಿಕುಂ ||೨೬||

ಧಾರಿಣೀಪಂಚೀಕರಣವೈ |
ತೋರುವಾವಾಗಾದಿಗಳು ತಾವ್ |
ಧಾರಿಣಿಯುಪಾದಾನಕಾರಣವಾಶರೀರಕ್ಕೆ ||
ವಾರಿಮುಖ್ಯನಿಮಿತ್ತಕಾರಣ |
ವೀರಹಸ್ಯವನರಿಯ ತತ್ತ್ವದ |
ಸಾರವನು ಬಣ್ಣಿಪೆನು ಮತ್ತಂ ಲಾಲಿಸೆಲೆಕುವರಾ ||೨೭||

ಪಲಲರೋಮಾಸ್ಥಿಗಳು ಚರ್ಮವು |
ತಿಳಿಯೆ ಭೂಮ್ಯಂಶಗಳು ತನುವೊಳ್ |
ಬಳೆವ ಮಜ್ಜಾಸ್ವೇದಮೂತ್ರಾರುಣಜಲಂಗಳು ತಾವ್ ||
ಸಲಿಲದಂಶವು ದಾಹನಿದ್ರೆಗ |
ಳಲಸಿಕೆಯುಮಗ್ನ್ಯಂಶಮೆನಿಪುವು |
ವಿಲಸದನಿಲಾಂಶವು ಕಫಾದಿಕಮಾಲಿಸೆಲೆವತ್ಸಾ ||೨೮||

ರಾಗಲೋಭಾಹಂಕೃತಿಗಳೆಸೆ |
ವಾಗಸದ ಬಹ್ವಂಶವಿಾತೆರ |
ನಾಗೆ ಭೂತಾಂಶಗಳಿನುದಯಿಸಿದೊಡಲೆ ಪಿಂಡವಲಾ ||
ಪಾಗದರ್ಗೀತತ್ತ್ವಮರಿಯಲಿ |
ಕಾಗದೈ ಗುರು ಕಲಿಸದಿರಲು ಸ |
ರಾಗವಹುದೇಂ ಮುಕ್ತಿಪಥಸೋಪಾನಮೇರಲಿಕೆ ||೨೯||

ತನುವ ಪಡೆವರು ನೈಜಕರ್ಮವ |
ನನುಸರಿಸಿ ಜೀವಿಗಳು ತಾವ್ ಮೇ |
ದಿನಿಯೊಳವರೊಳಗಾಜರಾಯುಜಮಲ್ತೆ ಮೇಲೆನಿಕುಂ ||
ಮನುಜಗರ್ಭದೆ ಶುಕ್ಲಶೋಣಿತ |
ವನುವಿನೈಕ್ಯವನೊಂದಲೊಂದಿರು |
ಳಿನಲಿ ಕಲಿಲವದಾಗಿ ಬುದ್ಬುದಮುಕ್ಕುಮೇಳ್ದಿನದೆ ||೩೦||

ಆದುವೆ ಪಕ್ಷದೆ ಪಿಂಡಮಪ್ಪುದು |
ಮೊದಲನೆಯ ಮಾಸದಲಿ ಹೆಪ್ಪ |
ಪ್ಪುದು ತಲೆಯನೆರಡರಲಿ ತಾಳ್ವುದು ಮೂರರೊಳ್ ತರದಿಂ ||
ಪದಗಳನು ಮುಖನೇತ್ರಕರ್ಣವ |
ನೊದವಿದಾರರೊಳಾಂತು ಚಂದದಿ |
ಪದುಳದಿಂದೇಳನೆಯ ಮಾಸದೆ ಜೀವಮೊಂದುವುದೈ ||೩೧||

ಲಾಲಿಸಷ್ಟಮಮೆನಿಪಮಾಸದೆ |
ತಾಳುತಲಿ ವರಗರ್ಭದೀಕ್ಷೆಯ |
ಮೇಲೆನಿಪ ಲಕ್ಷಣವನೊಂಭತ್ತರಲಿ ತಾನಾಂತು ||
ಗೋಳಿಡುತೆ ಪೂರ್ವಭವದುಷ್ಕೃತ |
ದಾಳಿಗಾಗಿ ಗುರೂಪದೇಶವ |
ತಾಳಿ ಭವಸಾಗರವ ದಾಂಟಲು ಚಿಂತಿಸುತ್ತಿಹುದು ||೩೨||

ತೀವಲೊಂಭತ್ತನೆಯ ತಿಂಗಳು |
ಜೀವಿ ತಾಂ ಪೊರಮಡುವ ಕರ್ಮದ |
ಬೂವಿಗಜ್ಞಾನಾಂಧಕಾರದೆ ತೊಳಲಿ ಬಳಲುವನೈ ||
ಪಾವನನು ಗುರು ಲಭಿಸೆ ಭಾಗ್ಯದೆ |
ಶೈವಯೋಗಾಚರಣನಿಷ್ಠನು |
ಭಾವಿಪೊಡೆ ತಾನಹನು ಮುಕ್ತನು ಚರಮತನುಯುತನು ||೩೩||

ಎಲ್ಲ ತತ್ತ್ವವನರುಹಿದೆನು ಕೇ |
ಳುಲ್ಲಸತ್ಸದಸದ್ವಿವೇಕವು |
ಕಲ್ಲಿನಾಥನೆ ನಿನಗೆ ಕರಗತವಾಯ್ತು ಗರಪುರದಾ ||
ಬಲ್ಲಹನ ಕೃಪೆಯಿಂದೆ ಶಿವಸುಖ |
ವಲ್ಲಿ ಪಲ್ಲವಿಕೆನುತೆ ರೇಣುಕ |
ಮೆಲ್ಲನಾಶ್ರೀಶೈಲಕೈದಿದ ರುದ್ರಮುನಿಯೊಡನೆ ||೩೪||

ಶ್ರೀಜಗದ್ಗುರು ರೇಣುಕಾಚಾರ್ಯ್ಯಃ ಪ್ರಸೀದತು.

ಇಪ್ಪತ್ತನೆಯ ಸಂಧಿ.

ಸೂ|| ಸಿರಿಗಿರಿಯ ತಿಳಿಗೊಳದ ಬಿಸವನು |
ಪರಿಹರಿಸಿ ಗುರು ರುದ್ರಮುನಿಪನ |
ನಿರಿಸಿ ರಂಭಾಪುರಿಯೊಳಾಕೈಲಾಸಕೈದಿದನು ||

ತೊಳಗುವಾಶ್ರೀಶೈಲಮಹಿಮೆಯ |
ನಳವೆ ಬಣ್ಣಿಸಲತ್ತ ಹಂಸಾ |
ವಳಿಯದೊಪ್ಪುತಲಿರ್ದ್ದದಮಲಸುವರ್ಣ್ಣರುಚಿದೀಪ್ತಂ ||
ಗಿಳಿಗಳಾಪವಳಂಬೊಲರುಣಿಮೆ |
ದಳೆದು ಶೋಭಿಸುತಿರ್ದ್ದವಲೆ ಕೋ |
ಗಿಲೆಗಳತಿಧಾವಳ್ಯದೆಸೆದುವು ರಜತಮಯಮೆನಲು ||೧||

ಗಿರಿಗಳಿಂ ಗಿರಿಗಳ್ಗೆ ಮಿಗೆ ಸಂ |
ಚರಿಸುತಿರ್ದ್ದವು ವನಗಜಂಗಳು |
ನೆರೆದು ಪುಲಿಸಿಂಗಗಳು ಗುಡುಗುಡಿಸಿದುವು ಕಂದರದೆ ||
ಮರಿಗಳೊಡವೆರೆದೆಸೆದುವತ್ತಲ್ |
ಕರಡಿಗಳು ಪೊಂಬೊಗರ ನವಿರಿಂ |
ಮಿರುಗುತಿರ್ದ್ದವು ಹರಿಣವಿಸರಂ ಮಲಗಿರಲು ನಲವಿಂ ||೨||

ತೊರೆದು ವೈರವ ಮೃಗಸಮೂಹವು |
ಪರಮಮೈತ್ರಿಯಿನೊಪ್ಪುತಿರ್ದ್ದುದು |
ಪರಿಪರಿಯ ಮೃಗಪಕ್ಷಿನಿಕರವು ತೊಳಗುತಿರ್ದ್ದುದು ತಾಂ ||
ಗುರುವರೇಣ್ಯನು ರುದ್ರಮುನಿಗಾ |
ದರದೆ ತೋರುತಲಾಪ್ರದೇಶವ |
ನೊರೆದನೊಲವಿಂ ಮಲ್ಲಿಕಾರ್ಜ್ಜುನಮಹಿಮೆಯನು ನಲವಿಂ ||೩||

ಕುವರ ಕೇಳ್ ಕೈಲಾಸದಧಿಪತಿ |
ಶಿವನು ಲೋಕಾನುಗ್ರಹಾರ್ಥವು |
ತವೆ ವಿರಾಜಿಪ ಮಲ್ಲಿಕಾರ್ಜುನಲಿಂಗರೂಪದಲಿ ||
ಅವನ ನಿರ್ಮಲಶಕ್ತಿ ತಾಂ ಮೆರೆ |
ಯುವಳು ಮೇಣ್ ಭ್ರಮರಾಂಬೆಯೆನಿಸುತ |
ಲಿವರ ವಾಸದೆ ಪುಣ್ಯಶೈಲವಿದಾಯ್ತು ವಿಖ್ಯಾತಂ ||೪||

ತನಯ ಕೇಳ್ ಪನ್ನೆರಡುಸಂಖ್ಯೆಯ |
ವಿನುತಲಿಂಗಂಗಳಲಿದೊಂದೈ |
ಘನತರವು ಸಿರಿಮಲ್ಲಿಕಾರ್ಜುನಲಿಂಗವುತ್ತುಂಗ ||
ಅನುವಿನಿದ ನುತಿಸಿದನ ಸುಕೃತವ |
ನನಿತಿನಿತ್ತೆಂದುಸಿರಲಳವ |
ಲ್ತನಘನಪ್ಪನು ಬಂದ ಮಾಪಾತಕಿಯುಮಿಾಯೆಡೆಯೊಳ್ ||೫||

ಅರಿಯು ನಮ್ಮೊಂದಿಗನು ಪಂಡಿತ |
ಗುರುವರೇಣ್ಯನು ಮಲ್ಲಿಕಾರ್ಜುನ |
ಪರಮಲಿಂಗದಿನಿದರಿನುದ್ಭವಿಸಿದನು ವಿಶದಯಶಂ ||
ಧರೆಯೊಳಿದು ಕೇದಾರಕಾಶೀ |
ವರಮಹಾಕ್ಷೇತ್ರಂಗಳಂತಿರೆ |
ದುರಿತಪರಿಹಾರಕವಭೀಪ್ಸಿತಮುಕ್ತಿದಾಯಕವು ||೬||

ಓಡಿ ಪೋಪುದು ಗಿರಿಯ ಶಿಖರವ |
ನೋಡಿದಾಕ್ಷಣ ಜನ್ಮಜನ್ಮದೆ |
ಮಾಡಿದಾದುಷ್ಕೃತವು ಮತ್ತಿಲ್ಲೆಸೆವ ಶಿಲೆಯೆಲ್ಲಂ ||
ಈಡು ಗಡ ಪರಶಿವನ ಮೂರ್ತಿಗೆ |
ನೋಡು ಪರಿವಳು ಪರಮಪಾವನೆ |
ಗಾಡಿಯಿಂ ಪಾತಾಳಗಂಗಾಹ್ವಯದೆ ಜಾಹ್ನವಿಯು ||೭||

ಇದುವೆ ನೋಡೈ ಶೌರಿ ಮುದದಿಂ |
ಹದಿಟಿಗೆಯ್ದಿಹ ರತ್ನಲಿಂಗವ |
ದಿದುವೆ ನೋಡೈ ಸ್ಫಟಿಕಲಿಂಗವಜಪ್ರತಿಷ್ಠಿತವು ||
ಇದುವೆ ಬೆಳ್ಳಿಯ ಲಿಂಗವಿಂದ್ರನು |
ಹದಿಟಿಗೆಯ್ದುದು ಹವ್ಯವಾಹನ |
ಹದಿಟಿಗೆಯ್ದಾ ಕನಕಲಿಂಗವದಿದುವೆ ನೋಡೆಂದ ||೮||

ಎಂದು ಸಿರಿಗಿರಿಯೆಸೆವ ಪಲಬಿಸ |
ವಂದಗಳ ರುದ್ರಮುನಿದೇವಗ |
ಮಂದಸಂಮೋದದಲಿ ತೋರುತ ಬಿತ್ತರಿಸುತೈದೆ ||
ಮುಂದೆ ಹಾಲಾಹಲಮಯವು ತಾ |
ನೊಂದುಪೆರ್ಗೊಳನೆಸೆದಿರಲು ಬಳಿ |
ಸಂದು ರೇಣುಕ ನುಡಿದ ಶಿಷ್ಯನೊಳೊಪ್ಪವೆರಕದಲಿ ||೯||

ನಗೆಮೊಗದೆ ಸೊಲ್ಲಿಸುತೆ ಮನದೊಳೆ |
ಪಗೆತನವ ಸಾಧಿಸುವ ಕಿಡುಕರ |
ಬಗೆಯಿನೆಂದುಂ ಪಾಂಥಪಶುಪಕ್ಷ್ಯಾದಿಸಂಕುಲದ ||
ಬಗೆಯನೊಯ್ಯನೆ ಬಂದಿವಿಡಿಯುತೆ |
ಮೊಗೆಯಲೀಂಟಲು ಮಿಾಯಲುಂ ಮಿ |
ತ್ತುಗೆ ವಲಂ ತುತ್ತೆಸಪುದೀಕೊಳನೀಕ್ಷಿಸೈಯೆಂದ ||೧೦||

ಇಂದು ನಾನೀಕೊಳದ ಬಿಸವನು |
ಚಂದದಿಂದಲಿ ಪರಿಹರಿಪೆ ನೋ |
ಡೆಂದು ನಿಜಕರದಿಂದೆ ಸೋಂಕಲದಮೃತಮಯಮಾಯ್ತು ||
ಪಿಂದೆ ಕಾಣದ ಕೇಳದರಿಯದ |
ಸಂದ ಗುರುವಾಶ್ಚರ್ಯಕಾರ್ಯಗ |
ಳೊಂದೆರಳ್ಮೂರಲ್ತು ಲೆಕ್ಕಿಸಲಾಯ್ತುಸಂಖ್ಯಾಕಂ ||೧೧||

ಬಳಿಕ ರುದ್ರಮುನೀಶ್ವರನ ಕರ |
ತಳವ ರೇಣುಕ ಪಿಡಿದು ತೊಟ್ಟನೆ |
ಬಿಲವನೊಂದನು ಪೊಕ್ಕು ನಡೆದನು ಬಹುಳದೂರಕೆ ತಾಂ ||
ಸಲೆ ಮಹಾಕೈಲಾಸಲೋಕವು |
ಬೆಳಗುತಿರೆ ವೈಕುಂಠಲೋಕವು |
ನಲಿಯುತಾಲೋಕಗಳನೆಲ್ಲವ ಗುರುವು ತೋರಿದನು ||೧೨||

ಅತ್ತ ಮೆರೆದುದು ರುದ್ರಲೋಕವು |
ಮತ್ತೆ ವಿಧಿಯಾ ಸತ್ಯಲೋಕವು |
ಸತ್ತ್ವವರು ನೆಲಸಿರ್ಪ ಲೋಕವು ನೆರೆ ವಿರಾಜಿಸಿತು ||
ತತ್ತಪೋನಿಧಿ ರುದ್ರಮುನಿಗದ |
ಬಿತ್ತರಿಸಿ ತೋರುತಲಿ ಬಳಿಕಂ |
ಸುತ್ತಿ ಬಂದನು ನಗುತೆ ನುಡಿದನು ಕಂದ ನೋಡೆನುತೆ ||೧೩||

ತರುಗಳೆಲ್ಲವು ಕಲ್ಪತರುಗಳು |
ತುರುಗಳೆಲ್ಲವು ಕಾಮಧೇನುಗ |
ಳರಿಯೆ ಶಿಲೆಗಳಿವೆಲ್ಲ ಚಿಂತಾಮಣಿಗಳೀಕ್ಷಿಸು ನೀಂ ||
ನೆರೆದಿಹರು ಶಿವಸೌಖ್ಯಮಗ್ನರು |
ಗಿರಿಯೊಳಿದರೊಳು ಪಂಡಿತಶ್ರೀ |
ಗುರುವರೇಣ್ಯನ ಧರ್ಮಪೀಠವು ಸೊಗಯಿಸುತ್ತಿಹುದು ||೧೪||

ಇಂತುಸಿರ್ದು* ರೇಣುಕನು ಮನದಲಿ |
ಸಂತಸವ ತಾಳುತಲಿ ಕೆಲದಿನ |
ಶಾಂತಮಾನಸನಾಗಿ ರುದ್ರಮುನೀಂದ್ರನೊಡವೆರೆದು ||
ಶಾಂತನನು ಜಾನಿಸುತೆ ಸಿರಿಗಿರಿ |
ಯಂತರದೆ ನೆಲಸಿರ್ದು ಬಳಿಕಂ |
ಮುಂತಣೆಸಕವ ಬಗೆದು ನುಡಿದನು ದಳಿತಭವಭಯನು ||೧೫||

ತಳುವದೆಯೆ ರಂಭಾಪುರಿಗೆ ನಾವ್ |
ತಳರ್ವ*ನಡೆಯಿನ್ನೆಂದು ರೇಣುಕ |
ಮಲಯಪರ್ವತದತ್ತ ನಡೆದನು ಸೇರ್ದನತಿಜವದೆ ||
ನೆಲನೊಳೀರೇಳ್ನೂರು ಬರಿಸಂ |
ಗಳು ಕಳೆದುವಂದಿಂಗೆ ಗುರು ಮು |
ಪ್ಪೊಳಲುರಿಕನಾಣತಿಯ ನೆನೆದನು ಯೋಗಮನನಾಗಿ ||೧೬||

ಮೇರುಧನ್ವನು ತಿಳಿದಿದನು ಮೈ |
ದೋರಿ ನುಡಿದನು ರೇಣುಕಂಗೆ ಕು |
ಮಾರ ನೀನೊಡರಿಸಿದೆ ನನ್ನಾಣತಿಯ ನಲವಾಯ್ತು ||
ಧಾರಿಣೀತಲದಲ್ಲಿ ನಾಸ್ತಿಕ |
ವಾರವನು ಕಂಗೆಡಿಸಿ ಶಿವಮತ |
ಸಾರವನು ಮೆರೆಯಿಸಿದೆ ಭಳಿರೇ ಭಾಪುರೇ ಮಝುರೇ ||೧೭||

ನಿನ್ನ ಪೀಠಕೆ ರುದ್ರಮುನಿ ಸಂ |
ಪನ್ನನಲೆ ರಂಭಾಪುರಿಯೊಳವ |
ನೆನ್ನ ಮತದಾತತ್ತ್ವವನು ಬೋಧಿಸುತೆ ಶಿಷ್ಯರಿಗೆ ||
ಸನ್ನಿಹಿತಮಪ್ಪಖಿಳವಿಪದವ |
ಬನ್ನಬಡಿಸುತೆ ಪೊರೆದಪನು ನೀ |
ನಿನ್ನು ಸೋಮೇಶ್ವರನ ವದನದೆ ಬಾರ ನನ್ನೆಡೆಗೆ ||೧೮||

ಎಂದೊರೆದು ಮೈಗರೆಯಲ್ಕೈಮೊಗ |
ಕಂದೆರೆದು ರೇಣುಕನು ಕಟ್ಟಿರ |
ಕಂದಳೆದು ರುದ್ರಮುನಿಗೆಲ್ಲವನರುಹಿ ದಿವದೆಡೆಯಿಂ ||
ಬಂದು ಸೇರ್ದಾಕೊಲ್ಲಿಪಾಕಿಯ |
ಚೆಂದದಾಸೋಮೇಶಲಿಂಗದ |
ಮುಂದೆ ನಿಂದನು ಮುಗಿದು ಕೈಗಳ ಶಿವನ ನುತಿಸಿದನು ||೧೯||

ಸೋಮಶೇಖರ ಸೋಮಸುಂದರ |
ಕಾಮಹರ ಕಾರುಣ್ಯಸಾಗರ |
ಕಾಮಿಕಾದ್ಯಾಗಮಪಯೋರುಹಮಿಹಿರ ಸುಖಪೂರ ||
ವಾಮದೇವ ಪರಾತ್ಪರಾ ಸು |
ತ್ರಾಮಮುಖದಿವಿಜಾದರಾ ನಿ |
ಸ್ಸೀಮವಾತ್ಸಲ್ಯಪರ ಸಲಹೈ ಮುನಿಸುತೋದ್ಧಾರ ||೨೦||

ತಂದೆ ನಿನ್ನಾಣತಿಯ ತಲೆಯೊಳ |
ಗೊಂದಿ ಭೂಮಿತಲಕೆ ನಾನೇ |
ಳ್ತಂದೆ ನೀನೊರೆದಂತೆ ನಿನ್ನಾರಾಧನೆಯ ಗೈದೆ ||
ದಂದುಗಂಬಡುತಿಹೆನು ನಿನ್ನಯ |
ಸಂದರುಶನಕ್ಕಾಗಿ ಕೇಳಿ |
ನ್ನೊಂದು ಗಳಿಗೆಯುಮಿರೆನು ಸಹಿಸೆನು ನಿನ್ನಗಲ್ಕೆಯ ನಾಂ ||೨೧||

ಗಿರಿಜೆ ನೆಲಸಿರೆ ವಾಮಭಾಗದೆ |
ಸಿರದೆ ಗಂಗೆ ಮನಂಗೊಳುತ್ತಿರೆ |
ಮಿರುಗುತಿರೆ ಜಡೆದುರುಗಲಲಿ ಬಾಲೇಂದು ಮುಂಗಡೆಯೊಳ್ ||
ಹರಿವಿರಿಂಚಿಮುಖಾಮರರ್ಕಳು |
ಕರವನೆತ್ತುತೆ ಜಯಜಯೆನುತಿರೆ |
ಮೆರೆವ ನಿನ್ನಡಿಯೋಲಗವನುಳಿದೆಂತಿರುವೆನೊಡೆಯಾ ||೨೨||

ತಳುವದಿರು ಬೇಸರದಿರೆನ್ನೊಳು |
ಮುಳಿಯದಿರು ಕೈಬಿಡದಿರಿಂದೇ |
ಘಳಿಲನೊಸೆಯ್ಯೆ ನಿನ್ನ ಸಾನ್ನಿಧ್ಯವನನುಗ್ರಹಿಸೈ ||
ಸಲಹೆನುತ್ತಲಿ ಬೇಡುತಿರಲಾ |
ಗಳೆ ಮಹಾದ್ಯುತಿಯೊಂದು ತೋರಿತು |
ತೊಳಗುತಿಹ ಸೋಮೇಶಲಿಂಗದಿ ಬಳ್ಳಿಮಿಂಚಿನವೋಲ್ ||೨೩||

ಆಯೆಡೆಯೊಳೊಪ್ಪಿರ್ದ ಭಕ್ತನಿ |
ಕಾಯಮಚ್ಚರಿಗೊಂಡು ನೋಡುತೆ |
ಹಾಯೆನುತೆ ಬಾಯ್ವಿಟ್ಟು ಕೈಗಳ ಮುಗಿದು ನಿಂದಿರಲು ||
ಆಯಮಿಾಂದ್ರವಿತಾನದೀಪ್ಸಿತ |
ದಾಯಕನು ಪದ್ಮಾಲಯಾಪ್ರಿಯ |
ನಾಯಕನು ಭೂತಾಧಿನಾಯಕನೊಸೆದ ರೇಣುಕಗೆ ||೨೪||

ನಚ್ಚಣಮನೆಸಗುತಿರೆ ನಾಕದೊ |
ಳಚ್ಚರಸೆಯರು ಗಗನದೆಡೆಯಿಂ |
ಪೊಚ್ಚಪೊಸಪೂವಳೆಗರೆಯೆ ಸುರದುಂದುಭಿಯು ಮೊಳಗೇ ||
ಮೆಚ್ಚಿ ಮೈದೋರಿದನು ಗಡ ಬಾಂ |
ಬೊಚ್ಚದಲೆಯನು ರೇಣುಕನ ಕಣ್ |
ಮುಚ್ಚಿ ತೆರೆವನಿತರಲಿ ಲಿಂಗೈಕ್ಯನನೊಡರ್ಚಿದನು ||೨೫||

ಜಯಜಯೆನುತಲಿ ಯೋಗಿವರ್ಯನಿ |
ಚಯಮುದುದ್ಘೋಷಿಸಿತು ಭಕ್ತಾ |
ಶ್ರಯನ ಗೌರೀಪ್ರಿಯನ ಹೃತಭವಭಯನ ಘನದಯನ ||
ಬಯಸಿದರ್ಥವನೀವ ಭಾಗ್ಯೋ |
ದಯನ ಮೇಣವ್ಯಾಜಕರುಣಾ |
ಮಯನ ಮಹಿಮಾತಿಶಯಮಾದುದಮೇಯಮುಚ್ಛ್ರಾಯಂ ||೨೬||

ಧರೆಗೆ ಶಿವತತ್ತ್ವಾಮೃತವ ನಲಿ |
ದೆರೆದು ಧರ್ಮಗ್ಲಾನಿಯನು ಪರಿ |
ಹರಿಸಿ ದಿಙ್ಮಂಡಲದೆ ಮೆರೆಯಿಸಿ ಶೈವಧರ್ಮವನು ||
ಶರಣಜನತಾಪ್ರೇಮನೆನಿಸಿದ |
ಗುರುವರೇಣ್ಯನು ರೇಣುಕನು ತಾಂ |
ಮರಳ್ದು* ಕೈಲಾಸದಲಿ ಪರಶಿವಸಭೆಯೊಳೊಪ್ಪಿದನು ||೨೭||



ಶ್ರೀ ರೇಣುಕಾಚಾರ್ಯರು ಸೋಮನಾಥಲಿಂಗದಲ್ಲಿ
ದಿವ್ಯದೇಹಧಾರಿಗಳಾಗಿ ಅಡಗುವುದು.

ರಾಮಣೀಯಕಮೆನಿಸಿ ಸೊಗಯಿಸು |
ವೀಮಹಾಮಹಿಮನ ಚರಿತ್ರವು |
ಭೂಮಿಯಲ್ಲಾಚಂದ್ರಭಾಸ್ಕರಮೆಸೆಗೆ ಪಾವನವು ||
ಹೈಮವತಿಯಾ ಮನದೆರೆಯ ನಿ |
ಸ್ಸೀಮಕರುಣಾಸ್ಪದನು ಶಿವ ಸು |
ಕ್ಷೇಮಸಂಪದವಿತ್ತು ಸಲಹಲಿ ಭಾರತಾವನಿಯ ||೨೮||

ಪರಮಮಂಗಳದಾಯಕನ ಶುಭ |
ಕರನ ರೇಣುಕಗುರುವರನ ವರ |
ಚರಿತವನು ಭಕ್ತಿಯಲಿ ಪಠಿಸುವ ಕೇಳ್ವ ಕೇಳಿಸುವ ||
ಬರೆವ ಬರೆಯಿಸುವ್ವೈದೆ ನುತಿಸುವ |
ನರರ ದುರಿತವ ಪರಿಹರಿಸಿ ಗರ |
ಪುರದೆರೆಯನಭ್ಯುದಯಸಂತತಿಯಿತ್ತು ಸಲಹುವನು ||೨೯||

ಗುರುವಿನದ್ಭುತಲೀಲೆಗಳನಾ |
ದರಿಸಿ ಕೇಳ್ದಾಮರುಳನುಂ ತಾ |
ನರಿದನಪ್ಪನು ಬಡವ ಮೇಣ್ ಸಿರಿವಂತನೆನಿಸುವನು ||
ಪರದ ವಣಿಗಗ್ರಣಿಯೆನಿಪ್ಪನು |
ಕರುಷಕನು ಧಾನ್ಯಾದಿಸಂಪ |
ದ್ಭರಿತನಪ್ಪನು ಪುತ್ರಕಾಮಿ ಸುಪುತ್ರರನು ಪಡೆವ ||೩೦||

ಬಿಜ್ಜೆಗಲಿವಗೆ ಬಿಜ್ಜೆಯೊಲಿದಪು |
ದುಜ್ಜುಗವನೆಸಗುವಗೆ ಸಿದ್ಧಿಯು |
ಸಜ್ಜುಗೊಂಡೊದಗುವುದು ಪೆಸರೆಳಸುವಗೆ ಪೆಸರಹುದು ||
ಸಜ್ಜನರ್ಗಾಯುಷ್ಯವರ್ಧನ |
ಸಜ್ಜಯಾವಹವಿಾಮಹಾಕೃತಿ |
ಬಿಜ್ಜ ತವಿಯಿಸಿ ಶೈವಸುಖಸಾಮ್ರಾಜ್ಯಮಿತ್ತಪುದು ||೩೧||

ತಿಂಗಳನು ತಲೆಯಲ್ಲಿ ತಳೆದು |
ತ್ತುಂಗಮಹಿಮಾಸ್ಪದೆಯ ನಿಜವಾ |
ಮಾಂಗದೊಳ್ ಮೆರೆಯಿಸುತೆ ಗಿರಿಜೆಯ ಶರಣಸಂತತಿಗೇ ||
ಮಂಗಳವ ದಯೆಗೈದು ಸಲಹಿ ಮ |
ನಂಗೊಳಿಪ್ಪಾಗರಳಪುರದಾ |
ಳ್ದಂಗೆ ಭವುಕವು ಜಯವು ಭದ್ರವು ಶುಭವು ಮಂಗಳವು ||೩೨||

ಸಮಾಪ್ತಂ.



ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಸ್ವಾಮಿತ್ವದಿಂದ ಪ್ರಾದುರ್ಭವಿಸಿರುವ

ಶ್ರೀ ಕಾಶೀನಾಥಗ್ರಂಥಮಾಲೆಯಲ್ಲಿ

ಮುದ್ರಿಸಲ್ಪಟ್ಟಿರುವ ಗ್ರಂಥಗಳು.

ವೈದಿಕವಾಙ್ಮಯರಹಸ್ಯ	(೧ನೆಯ ಪುಷ್ಪ)	೪ ಆಣೆ.
ಸಚಿತ್ರ ರೇಣುಕವಿಜಯ	(೨ನೆಯ ಪುಷ್ಪ)	೧ ರೂ.
ರೇಣುಕಾಚಾರ್ಯಶತಕ	(೩ನೆಯ ಪುಷ್ಪ)	೨ ಆಣೆ.
ಮಾಹೇಶ್ವರದೀಕ್ಷಾವಿಧಿ	(೪ನೆಯ ಪುಷ್ಪ)	೧೨ ಆಣೆ.
ವೀರಶೈವರತ್ನ	(೫ನೆಯ ಪುಷ್ಪ)	೧೨ ಆಣೆ.
ಸಿದ್ಧಾಂತಶಿಖೋಪನಿಷದ್ಭಾಷ್ಯ	(೬ನೆಯ ಪುಷ್ಪ)	೧ ರೂ.
ಸಿದ್ಧಾಂತಸಾರಾವಳಿ	(೭ನೆಯ ಪುಷ್ಪ)	೧೨ ಆಣೆ.
ಬಸವಧ್ವಾಂತದಿವಾಕರ	(೮ನೆಯ ಪುಷ್ಪ)	೮ ಆಣೆ.
ಆಗಮಪರಿಜ್ಞಾನ	(೯ನೆಯ ಪುಷ್ಪ)	೮ ಆಣೆ.
ಗೋತ್ರಸೂತ್ರಪಟ	(೧೦ನೆಯ ಪುಷ್ಪ)	೧ ಆಣೆ.
ಪಂಚಾಚಾರ್ಯಾಷ್ಟೋತ್ತರಶತ ನಾಮಾವಳಿ	(೧೧ನೆಯ ಪುಷ್ಪ)	೨ ಆಣೆ.
Speeches by Pandit Shri Kashinathashastri (*in English*)	(೧೨ನೆಯ ಪುಷ್ಪ)	12 As.
ಪಂಡಿತ ಶ್ರೀ ಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	(೧೩ನೆಯ ಪುಷ್ಪ)	೮ ಆಣೆ.
ಶಿವಶಕ್ತಿವಿಲಾಸ	(೧೪ನೆಯ ಪುಷ್ಪ)	೨ ಆಣೆ.
ಬಸವಾದಿನಿಜತತ್ತ್ವದರ್ಪಣ	(೧೫ನೆಯ ಪುಷ್ಪ)	೨ ಆಣೆ.
ಸಂಕ್ಷಿಪ್ತ ಶಿವಪೂಜಾವಿಧಿ	(೧೬ನೆಯ ಪುಷ್ಪ)	೧ ಆಣೆ.
ಸನ್ಯಾಸಾಶ್ರಮವಿಮರ್ಶ	(೧೭ನೆಯ ಪುಷ್ಪ)	೧ ಆಣೆ.
ರೇಣುಕವಿಜಯಪುರಾಣ	(೧೮ನೆಯ ಪುಷ್ಪ)	೧ ರೂ.
ಪಂಚಾಚಾರ್ಯಸ್ತೋತ್ರರತ್ನಾಕರ	(೧೯ನೆಯ ಪುಷ್ಪ)	೧೨ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ದೊರೆಯತಕ್ಕ ಇತರ ಗ್ರಂಥಗಳು.

ಮುರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ)	೮ ಆಣೆ
पंडित श्रीकाशीनाथशास्त्री यांचें भाषण (मराठी)	**८ आणे**
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ವೀರಶೈವಭಾಷ್ಯ)	೧ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧ ರೂ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦-೩-೦
ಶ್ರೀ ರೇಣುಕಾದಿಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೊ ಸೈಜು ೧೦×೧೪ ಬೆಲೆ	೦-೧-೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ
ಸೈಜು ೧೪×೧೦ ಬೆಲೆ ೧ಕ್ಕೆ ೦-೧-೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ
ಸೈಜು ೧೦×೮ ಬೆಲೆ ೧ಕ್ಕೆ ೦-೦-೯

ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು
ಒಂದರಲ್ಲಿಯೇ ಇದ್ದ ಫೋಟೊ ಸೈಜು ೧೪×೧೦
ಬೆಲೆ ೧ಕ್ಕೆ ೦-೧-೬

ಶ್ರೀ ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ
ಶ್ರೀಮನ್ಮಹಾರಾಜರವರು ವಿರಾಜಿಸುವ ಫೋಟೋ ೦-೧-೦

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು
ಪಂಚಾಕ್ಷರಶಿವಾಚಾರ್ಯರ ಫೋಟೋ ೦-೧-೦

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು
ಸಿದ್ಧಲಿಂಗಶಿವಾಚಾರ್ಯರ ಫೋಟೋ ೦-೧-೦

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು
ಭೂಗರ್ಭದಿಂದ ಅವತರಿಸುವ ಫೋಟೋ ೦-೦-೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ
ಪಟ್ಟಾಭಿಷೇಕ ಮಾಡುವ ಫೋಟೋ ೦-೦-೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ
ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು
ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು
ಪ್ರತಿಷ್ಠಿಸುವ ಫೋಟೋ ೧ಕ್ಕೆ ೦-೦-೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ
ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ
ಫೋಟೋ ೦-೦-೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ
ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ
ಫೋಟೋ ೦-೦-೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ ೦-೦-೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ
ಅತ್ಯಂತ ಸುಂದರವಾದ ಫೋಟೋ ೧ಕ್ಕೆ ೦-೦-೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ
ಕಟ್ಟಡದ ಸುಂದರ ಫೋಟೋ ೧ಕ್ಕೆ ೦-೦-೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ
ಫೋಟೋ ೦-೦-೯

ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ
ಸುಂದರ ಫೋಟೋ ೦-೦-೯

ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ
ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ
ಮಂದಿರದ ಅತ್ಯಂತ ಮನೋಹರವಾದ ಫೋಟೋ ೦-೦-೯

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.